
ಲಂಕೇಶ್

ನವೆಂಬರ್ 26, 2008 ರೂ. 12/-








ಸುಂದರಿ ಪಾದಕ್ಕೆ 3 ಕೋಟಿ

ಂದೂ ಟೆರರಿಸಂ




ಸಾಧ್ವಿ ಸ್ವಾಮಿ ಸೈನಿಕ



ಕನ್ನಡ ಚಿತ್ರರಂಗ 160 ಕೋಟಿ ಲಾಸ್!

ೀಮಾ ತೀರದಲ್ಲಿ ಮತ್ತೆರಡು ಹೆಣ



ಆಂಧ್ರ ರಾಜಕೀಯದಲ್ಲಿ ಸ್ಟಾರ್ ವಾರ್



ಟಾಟಾಗೆ ಪುಕ್ಕಟೆ ಊಟ

ಇದು ಮೋದಿಯ 'ಮಾದರಿ' ಆಡಳಿತ

ರೈತರ ಹೋರಾಟದ ಪರಿಣಾಮವಾಗಿ ಪಶ್ಚಿಮ ಬಂಗಾಳದಿಂದ ಕಾಲ್ಕಿತ್ತ ರತನ್ ಟಾಟಾನ 'ನ್ಯಾನೊ' ಗುಜರಾತ್‌ನಲ್ಲಿ ಬೇರು ಬಿಡಲು ಬಿಜೆಪಿಯ 'ಆದರ್ಶ' ಮುಖ್ಯಮಂತ್ರಿ ನರೇಂದ್ರ ಮೋದಿ ನೀಡಿದ ವಿನಾಯಿತಿಗಳೆಲ್ಲಾ ಈಗ ಬಹಿರಂಗಗೊಂಡಿವೆ.

ಭಾರತದ ಅತ್ಯಂತ ಶ್ರೀಮಂತರ ಪೈಕಿ ಒಬ್ಬನಾದ ರತನ್ ಟಾಟಾಗೆ ಮೋದಿ ಪುಕ್ಕಟೆ ಊಟ ನೀಡಿದ್ದಾರೆ. 2,200 ಕೋಟಿ ರೂ.ಗಳ ಈ ಯೋಜನೆಗೆ ಮೋದಿ ನೀಡಿದ ವಿನಾಯಿತಿಗಳ ಮೊತ್ತವೆಷ್ಟು ಗೊತ್ತೇ, ಬರೊಬ್ಬರಿ 31,000 ಕೋಟಿ ರೂ.!

ಈ ಪುಟ್ಟ ಕಾರಿನ ಬೆಲೆ ಒಂದು ಲಕ್ಷ



ರೂ. ಎಂದು ಈಗಾಗಲೇ ಟಾಟಾ ಪ್ರಕಟಿಸಿದೆ. ಮೋದಿ ನೀಡಿದ ಈ ಭಾರಿ ವಿನಾಯಿತಿಯಿಂದಾಗಿ ಪ್ರತಿ ಕಾರಿಗೆ 60 ಸಾವಿರ ರೂ. ಹೆಚ್ಚುವರಿಯಾಗಿ ಟಾಟಾ ದೊರೆಯ ಜೇಬು ತುಂಬಲಿದೆ. ಗುಜರಾತ್ ಸರ್ಕಾರ ಇರುವುದು ಜನತೆಯ ಉದ್ಧಾರಕ್ಕೋ, ಟಾಟಾ ಕಂಪನಿಯ ಉದ್ಧಾರಕ್ಕೋ ಎಂದು ಶ್ರೀರಾಮನೇ ಹೇಳಬೇಕು.

20 ವರ್ಷ ತೆರಿಗೆ ಇಲ್ಲ!

ನ್ಯಾನೊ ಘಟಕಕ್ಕೆ 20 ವರ್ಷಗಳ ತೆರಿಗೆ ವಿನಾಯಿತಿ ನೀಡಲಾಗಿದೆ. ಗುಜರಾತ್‌ನಲ್ಲಿರುವ ತೆರಿಗೆ ಪದ್ಧತಿ ಪ್ರಕಾರ ಶೇ.15ರ ದರದಲ್ಲಿ ಪ್ರತಿ ಕಾರಿಗೆ 15 ಸಾವಿರ ತೆರಿಗೆ ವಿಧಿಸಬೇಕಾಗುತ್ತದೆ. ಪ್ರತಿ ವರ್ಷ 2.5 ದಶಲಕ್ಷ ಕಾರು ಉತ್ಪಾದನೆಯಾಗುವ ನಿರೀಕ್ಷೆ ಇದ್ದು, ಒಟ್ಟು ತೆರಿಗೆ ಮೌಲ್ಯ 375 ಕೋಟಿ ರೂ.ಗಳಗಾಗಲಿದೆ. ಇದೇ ದರದಲ್ಲಿ ಕಾರುಗಳು ಉತ್ಪಾದನೆಯಾದರೆ 20 ವರ್ಷಕ್ಕೆ 7,500 ಕೋಟಿ ರೂ. ತೆರಿಗೆ ಸಂಗ್ರಹವಾಗಬೇಕಿತ್ತು!

ಗುಜರಾತ್ ಸರ್ಕಾರದ ಪ್ರಸ್ತಾಪದ ಪ್ರಕಾರ ಅತ್ಯಂತ ಕನಿಷ್ಠ ಎಂದರೆ ಶೇ. 0.1 ಬಡ್ಡಿ ದರದಲ್ಲಿ 9,570 ಕೋಟಿ ರೂ.ಗಳ ಸಾಲವನ್ನು ಟಾಟಾಗೆ ನೀಡಲಾಗುತ್ತಿದೆ. ಈ ಸಾಲವನ್ನು ಟಾಟಾ 20 ವರ್ಷಗಳ ಬಳಿಕ ಮಾಸಿಕ ಕಂತುಗಳಲ್ಲಿ ತೀರಿಸಿದರೆ ಸಾಕು! ಈ ಸರ್ಕಾರಿ ಸಾಲದಲ್ಲಿ 2,900 ಕೋಟಿ ರೂ.ಗಳನ್ನು ಕಂಪನಿಗೆ ನೇರವಾಗಿ ನೀಡಲಾಗುತ್ತದೆ. ಉಳಿದ 6,670 ಕೋಟಿ ರೂ.ಗಳನ್ನು ಮೂಲಸೌಕರ್ಯ ಒದಗಿಸಲು ಸರ್ಕಾರ ಖರ್ಚು ಮಾಡಲಿದೆ. ಈ ಮೂಲ ಸೌಕರ್ಯದಲ್ಲಿ ರೈಲು, ಸಂಪರ್ಕ, ವಿದ್ಯುತ್, ನೀರು, ಗ್ಯಾಸ್‌ಪೈಪ್ ಲೈನ್‌ಗಳನ್ನು ಒದಗಿಸುವುದೂ ಸೇರಿದೆ.

ಈ ಅತ್ಯಂತ ಅಗ್ಗದ ಸಾಲವನ್ನು ವ್ಯಾಟ್ ಬಾಧ್ಯತೆಗಳಿಗೆ ಪ್ರತಿಯಾಗಿ ನೀಡಲಾಗುತ್ತಿದೆ. ನ್ಯಾನೊ ಕಾರು ಘಟಕ ಅಭಿವೃದ್ಧಿಪಡಿಸಲು ಟಾಟಾಗೆ 2900 ಕೋಟಿ ರೂ. ಮಾತ್ರ ಸಾಕು. ಇದರಲ್ಲಿ ಪಶ್ಚಿಮ ಬಂಗಾಳದಿಂದ ಸ್ಥಳಾಂತರಕ್ಕೆ ತಗಲುವ 700 ಕೋಟಿ ರೂ. ಸಹ ಸೇರಿದೆ. ಅದರಲ್ಲಿ 9,570 ಕೋಟಿ ರೂ.ಗಳನ್ನು ಸರ್ಕಾರವೇ ನೀಡಿದಂತಾಗಿದೆ.

ಕೃಷಿ ವಿವಿ ಭೂಮಿ ಟಾಟಾಗೆ

ಇನ್ನು ಈ ಯೋಜನೆಗೆ ಅಹಮದಾಬಾದ್‌ನ ಸಮೀಪದ ಆನಂದ್ ಬಳಿ ಗುಜರಾತ್ ಸರ್ಕಾರದಿಂದ 1,100 ಎಕರೆ ಭೂಮಿಯನ್ನು ನೀಡಲಾಗಿದೆ. ಇದು ಆನಂದ್ ಕೃಷಿ ವಿವಿಯ ಪಶುಸಾಕಾಣಿಕೆ ಕೇಂದ್ರ ಸ್ಥಾಪನೆಗೆ ಮಂಜೂರು ಮಾಡಿದ್ದ ಭೂಮಿ. ಗುಜರಾತ್‌ನಲ್ಲಿ ಕೃಷಿ ಭೂಮಿಯನ್ನು ಮುಟ್ಟದೆಯೇ ಮೋದಿ ಅಭಿವೃದ್ಧಿ ಸಾಧಿಸಿದ್ದಾರೆ ಎಂದು ಕೊಚ್ಚಿಕೊಳ್ಳುವವರು ಈ ವಿಷಯವನ್ನು ಗಮನಿಸಬೇಕು. ವಿವಿಯ ಭೂಮಿಯನ್ನು ರಾತ್ರೋರಾತ್ರಿ ಟಾಟಾ ಕಂಪನಿಗೆ ವರ್ಗಾಯಿಸಿರುವ ಮೋದಿ, ಆಕ್ಷೇಪಣೆಗಳನ್ನು ಪಡೆಯದೇ ಎಲ್ಲ ನಿರಾಕ್ಷೇಪಣಾ ಮಂಜೂರಾತಿಯನ್ನು ನೀಡಿದ್ದಾರೆ.

ಈ ಭೂಮಿಗೆ ತಗಲುವ ಮೌಲ್ಯ 400.65 ಕೋಟಿ. ಈ ಹಣವನ್ನು ಒಮ್ಮೆಗೆ ಪಾವತಿಸುವುದರಿಂದಲೂ ಕಂಪನಿಗೆ ವಿನಾಯಿತಿ ನೀಡಲಾಗಿದೆ. ಅಂದರೆ ಶೇ. 8ರ ಬಡ್ಡಿದರದಲ್ಲಿ ಮುಂದೆ ಹಣ ಕಟ್ಟಲು ಅವಕಾಶ ನೀಡಲಾಗಿದೆ. ಹೀಗೆ ಮಾಡಲು ಟಾಟಾ ಏನು ನಷ್ಟದಲ್ಲಿರುವ ಕಂಪನಿಯೇ?

26.50 ಕೋಟಿ ರೂ. ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ವಿನಾಯಿತಿಯೊಂದಿಗೆ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಿತ ಭೂಮಿಯಾಗಿ ಪರಿವರ್ತಿಸುವ ಶುಲ್ಕದಿಂದಲೂ ವಿನಾಯಿತಿ ನೀಡಲಾಗಿದೆ. ಭೂಪರಿವರ್ತನೆ ಮತ್ತು ವರ್ಗಾವಣೆ ಶುಲ್ಕ 2.67 ಕೋಟಿ ರೂ.ಗಳಾಗಲಿದೆ. ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗಾಗಿ ಪರಿವರ್ತಿಸಲು ಪ್ರತಿ ಚದರ ಮೀಟರ್‌ಗೆ ಆರು ರೂ. ಶುಲ್ಕ ವಿಧಿಸಲಾಗುತ್ತದೆ. ಆದರೆ ಅದೆಲ್ಲದರಿಂದ ಶ್ರೀಮಂತ ಟಾಟಾ ಫ್ರೀ!

ಗುಜರಾತ್‌ನಲ್ಲಿ ಸುಮಾರು 80 ಸಾವಿರ ಸಣ್ಣಕೈಗಾರಿಕೆಗಳು ಮುಚ್ಚುವ ಹಂತದಲ್ಲಿವೆ. ಅವುಗಳ ಕಡೆ ಕಣ್ಣೆತ್ತಿಯೂ ನೋಡದ ಮೋದಿ, ಟಾಟಾಗೆ ರತ್ನಗಂಬಳಿ ಹಾಸಿದ್ದಾರೆ. ಇದನ್ನು ಬಿಜೆ... ಮಂದಿ 'ಅಭಿವೃದ್ಧಿಯ ಮಾದರಿ'ಆಡಳಿತ ಎಂಬ ಬೊಗಳೆ ಬಿಟ್ಟುಕೊಂಡು ಓಡಾಡುತ್ತಿದ್ದಾರೆ.

ಮಾಹಿತಿಯ ಗೋಪ್ಯವಾಗಿಟ್ಟರು!

ಟಾಟಾಗೆ ತಾನು ಈ ರೀತಿ ರಿಯಾಯಿತಿ ನೀಡಿದ್ದನ್ನು ಗೋಪ್ಯವಾಗಿಡಲು ಮೋದಿ ಎಲ್ಲಿಲ್ಲದ ಪ್ರಯತ್ನ ಮಾಡಿದ್ದರು. ಮಾಹಿತಿ ಹಕ್ಕು ಕಾಯ್ದೆ ಮೂಲಕ ಅರ್ಜಿ ಸಲ್ಲಿಸಿದರೆ ಇದರಲ್ಲಿ ಟಾಟಾದ ವ್ಯವಹಾರದ ವಿಷಯ ಇರುವುದರಿಂದ ಒಪ್ಪಂದವನ್ನು ಗೋಪ್ಯವಾಗಿರಿಸಲಾಗಿದೆ ಎಂದು ವಿವರಣೆ ನೀಡಲಾಗಿತ್ತು. ಪಶ್ಚಿಮ ಬಂಗಾಳ ಸರ್ಕಾ... ಕೂಡ ಹೀಗೇ ನಾಟಕವಾಡಿತ್ತು.

ಆದರೆ ಈ ಒಪ್ಪಂದಕ್ಕೆ ಸಂಬಂಧಿಸಿದ ಟಿಪ್ಪಣಿಗಳು ಈಗ ಬಹಿರಂಗ ಗೊಂಡಿದ್ದರಿಂದ ಸತ್ಯಸಂಗತಿ ಬೆಳಕಿಗೆ ಬಂದಿದೆ. ಮೋದಿಯ ಮುಖವಾಡ ಕಳಚಿ ಬಿದ್ದಿದೆ.

ಈ ಮೋದಿಯೇ ಕರ್ನಾಟಕದ ಮುಖ್ಯಮಂತ್ರಿಗೆ ಆದರ್ಶವಂತೆ. ಪ್ರಜ್ಞಾವಂತ ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು. ■



ಒಂದು ಜೋಕ್

ಅಮೆರಿಕದ ಶ್ವೇತಭವನಕ್ಕೆ ಹೊರಟಿರುವ ಬರಾಕ್ ಒಬಾಮಾ 'ಕುಟುಂಬ'

Quote-Unquote

"ಕಳೆದ ಮೇ ತಿಂಗಳಲ್ಲಿ ದಿಯೊಬಂಡ್‌ನಲ್ಲಿ ಸೇರಿದ ಸಾವಿರಾರು ಮೌಲ್ವಿಗಳು ಭಯೋತ್ಪಾದನೆ ವಿರುದ್ಧ ಫತ್ವಾ ಹೊರಡಿಸಿದ್ದರು. ಮೊನ್ನೆ ಜಮಾತ್-ಇ-ಉಲ್ಮಾ-ಹಿಂದ್ ನೇತೃತ್ವದಲ್ಲಿ ಹೈದರಾಬಾದಿನಲ್ಲಿ ಸೇರಿದ್ದ ಸಾವಿರಾರು ಮೌಲ್ವಿಗಳು ಭಯೋತ್ಪಾದನೆಯನ್ನು ಖಂಡಿಸಿದರಲ್ಲದೆ ಅಂತಹ ಕೃತ್ಯಗಳು ಇಸ್ಲಾಂ ವಿರೋಧಿ ಎಂದೂ ಸಾರಿದರು.

ವಿಪರ್ಯಾಸವೆಂದರೆ, ಈಗ ಹಿಂದೂತ್ವವಾದಿ ಭಯೋತ್ಪಾದನೆ ಕೂಡ ತಲೆ ಎತ್ತಿರುವಾಗ ಮೌಲ್ವಿಗಳಂತೆ ಹಿಂದೂ ಸಾಧುಗಳು ಅದನ್ನು ಖಂಡಿಸದೇ ಇರುವುದು. ಹಿಂದೂತ್ವವಾದಿ ಭಯೋತ್ಪಾದನೆಯನ್ನು ಖಂಡಿಸುವುದಕ್ಕೆ ಸಾಕಷ್ಟು ಕಾರಣಗಳಿವೆ. ಅಯೋಧ್ಯೆಯಲ್ಲಿದ್ದ ಐತಿಹಾಸಿಕ ಬಾಬ್ರಿ ಮಸೀದಿಯನ್ನಲ್ಲದೆ ದೇಶಾದ್ಯಂತ ಹಲವಾರು ಮುಸಲ್ಮಾನರ ಮಸೀದಿಗಳನ್ನು ಮತ್ತು ಕ್ರಿಶ್ಚಿಯನ್ನರ ಚರ್ಚ್‌ಗಳನ್ನು ನಾಶಪಡಿಸಲಾಗಿದೆ; ರಾಮಜನ್ಮಭೂಮಿ ಆಂದೋಲನದಲ್ಲಿ ಸಾವಿರಾರು ಜನರನ್ನು ಕೊಲ್ಲಲಾಗಿದೆ; 2002 ರಲ್ಲಿ ಗುಜರಾತಿನಲ್ಲಿ ಮುಸಲ್ಮಾನರ ಮಾರಣಹೋಮ ನಡೆದಿದೆ; ರಾಜಸ್ಥಾನ, ಗುಜರಾತ್ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ವ್ಯವಸ್ಥಿತವಾಗಿ ಕ್ರಿಶ್ಚಿಯನ್ನರ ಹತ್ಯೆ ನಡೆಸಲಾಗಿದೆ; ಮಾಲೆಗಾಂವ್ ಮತ್ತು ಇತರೆಡೆ ಬಾಂಬ್‌ಗಳನ್ನು ಸ್ಫೋಟಿಸಲು ಕಾವಿಧಾರಿಗಳನ್ನು ಬಳಸಿಕೊಳ್ಳಲಾಗಿದೆ; ಕೇಸರಿ ಜಿಹಾದಿಗಳನ್ನು ಸೃಷ್ಟಿಸಿ ಅಗತ್ಯಕ್ಕೆ ತಕ್ಕಂತೆ ಅವರನ್ನೆಲ್ಲ ಬಳಸಿಕೊಳ್ಳಲಾಗಿದೆ.

ಇಸ್ಲಾಮ್ ಹೆಸರಲ್ಲಿ ನಡೆದಿರುವ ಭಯೋತ್ಪಾದನೆಯನ್ನು ಸಾವಿರಾರು ಮೌಲಾನಗಳು ಮತ್ತು ಮೌಲ್ವಿಗಳು ಖಂಡಿಸುತ್ತಿದ್ದರೂ, ಇಷ್ಟೆಲ್ಲ ಹಿಂದೂತ್ವವಾದಿ ಭಯೋತ್ಪಾದನೆ ನಡೆದಿದ್ದರೂ ಅದನ್ನು ಯಾವ ಕೇಸರಿ ಪಡೆಯೂ ಖಂಡಿಸದೇ ಇರುವುದಕ್ಕೆ ಕಾರಣವೂ ಇದೆ. ಅದೇನೆಂದರೆ ಕೇಸರಿ ಜಿಹಾದಿಗಳನ್ನು ಹುಟ್ಟು ಹಾಕಿರುವ ವಿಶ್ವಹಿಂದೂ ಪರಿಷತ್ ಇವತ್ತು ದೇಶದ ಎಲ್ಲಾ ಮಠ ಮತ್ತು ಅಖಾಡಾಗಳ ಮೇಲೆ ಎಷ್ಟು ಹಿಡಿತ ಹೊಂದಿದೆ ಎಂದರೆ ಅವರಲ್ಲಿ ಯಾರೇ ಒಬ್ಬರು ಕೇಸರಿ ಜಿಹಾದ್ ವಿರುದ್ಧ ದನಿ ಎತ್ತಿದರೂ ಅವರಿಗೆ ಹಣ, ಪ್ರಭಾವ ಒಂದೂ ಇರದಂತೆ ನೋಡಿಕೊಳ್ಳುತ್ತದೆ. ಅಷ್ಟೇ ಅಲ್ಲ, ಅವರ ವಿರುದ್ಧ ಜನರನ್ನು ಎತ್ತಿಕಟ್ಟಿ ಅವರ ಸ್ಥಾನವೇ ಪಲ್ಲಟವಾಗುವಂತೆ ಅಥವಾ ನ್ಯಾಯಾಲಯಗಳಿಗೆ ಅಲೆಯುವಂತೆ ಮಾಡುತ್ತದೆ.

ಹೈದರಾಬಾದಿನಲ್ಲಿ ಭಯೋತ್ಪಾದನೆ ವಿರುದ್ಧ ಮೌಲ್ವಿಗಳು ಫತ್ವಾ ಹೊರಡಿಸಿದಂತೆ ಕೇಸರಿ ಧರಿಸಿರುವ ಸ್ವಾಮಿಗಳೂ ಹಿಂದೂತ್ವವಾದಿ ಭಯೋತ್ಪಾದನೆಯನ್ನು ಖಂಡಿಸಬೇಕಿದೆ. ಇಲ್ಲವೆಂದರೆ ಅವರು ಪಠಿಸುವ 'ಓಂ ಶಾಂತಿಗೆ ಅರ್ಥವೇ ಇಲ್ಲದಂತಾಗುತ್ತದೆ.

-ನೀಲಭ್ ಮಿಶ್ರ, ಅಂಕಣಕಾರ

"ನಾನು ಗುಪ್ತಚರ ಇಲಾಖೆಯವರನ್ನು ಹತ್ತಿರದಿಂದ ನೋಡಿದ್ದೇನೆ. ಅವರೊಂದಿಗೆ ಮಾತನಾಡಿದಾಗಲೆಲ್ಲಾ ನಾನು ಪ್ರಜಾಪ್ರಭುತ್ವ ದೇಶದ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿದ್ದೇನೆ ಅಂತ ಎಂದೂ ನನಗೆ ಅನ್ನಿಸಲೇ ಇಲ್ಲ. ಏಕೆಂದರೆ ಈ ಅವೆಲ್ಲವೂ ಕೋಮುವಾದಿ ಇಲಾಖೆಗಳಾಗಿ ಪರಿವರ್ತನೆಗೊಂಡಿವೆ. ದುರಂತವೆಂದರೆ ಇವತ್ತು ಇಂಟೆಡೆಡ್ ಪತ್ರಿಕೋದ್ಯಮ ಹೆಚ್ಚಾಗಿದೆ. ಹಲವಾರು ಪತ್ರಕರ್ತರ ಮೂಲಕ ಗುಪ್ತಚರ ಇಲಾಖೆಯವರು ತಮಗೆ ಬೇಕಾದಂತೆ ಸುದ್ದಿಯನ್ನು ಹರಡುತ್ತಿದ್ದಾರೆ, ಪತ್ರಿಕೆಗಳೂ ಅವುಗಳನ್ನು ಸಂತೋಷದಿಂದ ಪ್ರಕಟಿಸುತ್ತಿವೆ.

ಅದೆಲ್ಲಕ್ಕಿಂತ ಮುಖ್ಯವಾಗಿ, ಸರ್ಕಾರವನ್ನು ಪ್ರಶ್ನಿಸುವುದನ್ನೇ ಜನ ಮರೆತಿದ್ದಾರೆ. ನಾನು ಪದೇಪದೇ ಜನರನ್ನು ಕೇಳುತ್ತಿರುತ್ತೇನೆ: ಡಿಸೆಂಬರ್ 13, 2001 ರಂದು ಪಾರ್ಲಿಮೆಂಟ್ ಮೇಲೆ ದಾಳಿ ನಡೆಸಿದವರು ನಿಜವಾಗಲೂ ಯಾರು ಎಂಬುದು ನಿಮಗೆ ಗೊತ್ತಾ? ಉತ್ತರ ಯಾರಿಗೂ ಗೊತ್ತಿಲ್ಲ, ಪ್ರಶ್ನೆಯನ್ನಂತೂ ಯಾರೂ ಕೇಳಿಲ್ಲ, ಈ ಕಾರಣಗಳಿಂದಾಗಿ ಇವತ್ತು ಪರಿಸ್ಥಿತಿ ಹೀನವಾಗಿ ಕಾಣಿಸುತ್ತಿದೆ. ಪೂರ್ವಗ್ರಹವೇ ಇವತ್ತು ತಾಂಡವವಾಡುತ್ತಿದೆ. ಪ್ರಜಾಪ್ರಭುತ್ವದ ಚೌಕಟ್ಟು ಕರಗುತ್ತಿದೆ. ಆದರೆ ನಮಗೆ ಎಷ್ಟೇ ಕಷ್ಟ ಎದುರಾದರೂ ಪ್ರಜಾಪ್ರಭುತ್ವದ ಚೌಕಟ್ಟನ್ನು ಮುಂದಿನ ಪೀಳಿಗೆಯವರಿಗೆಂದು ರಕ್ಷಿಸಬೇಕಿದೆ.

-ಇತ್ತೀಚೆಗೆ ಚಡ್ಡಿ ಗೂಂಡಾಗಳಿಂದ ಹಲ್ಲೆಗೆ ಗುರಿಯಾದ ದೆಹಲಿ ವಿಶ್ವವಿದ್ಯಾಲಯದ ಪ್ರೊ. ಎಸ್.ಎ.ಆರ್. ಗಿಲಾನಿ.

"ಬರಾಕ್ ಹುಸೇನ್ ಒಬಾಮಾ ಹೆಸರು ಇರಾಕ್, ಹುಸೇನ್, ಒಸಾಮಾ ಹೆಸರುಗಳಂತಿದೆ."

"ನನ್ನಮ್ಮ ಪಕ್ಕಾ ಭಾರತೀಯ ನಾರಿ. 'ಹೌದಾ?', 'ಹಾಗಾ?', 'ಹಾಗೇನು?' ಎಂಬ ಮೂರು ಪದಗಳಲ್ಲೇ ಅರ್ಧ ಗಂಟೆ ಟೆಲಿಫೋನ್‌ನಲ್ಲಿ ಚರ್ಚೆ ನಡೆಸಬಲ್ಲಾಕೆ."

"ಹಾಲಿವುಡ್ ಸಿನಿಮಾಗಳ ಪ್ರಕಾರ ಎಲ್ಲಾ ಮುಸಲ್ಮಾನ್ ಪುರುಷರು ಭಯೋತ್ಪಾದಕರು ಮತ್ತು ಎಲ್ಲಾ ಮುಸಲ್ಮಾನ ಮಹಿಳೆಯರು ಶೋಷಿತರು. ಹಾಲಿವುಡ್ ಸಿನಿಮಾಗಳನ್ನು ಮಾಡುವವರು ಒಂದು ಪಕ್ಕಾ ಮುಸಲ್ಮಾನ್ ಸಂಸಾರಕ್ಕೆ ಭೇಟಿ ನೀಡಿ ನೋಡಬೇಕಿದೆ. ಆಗ ವಾಸ್ತವ ಚಿತ್ರ ತದ್ವಿರುದ್ಧವಾಗಿದೆ ಎಂದು ಅವರಿಗೆ ಅರ್ಥವಾಗುತ್ತದೆ."

-ಅಜರ್ ಉಸ್ಮಾನ್ ಎಂಬ ಅಮೆರಿಕನ್ ಕಾಮೆಡಿಯನ್

ಅಮೆರಿಕದ ಅಧ್ಯಕ್ಷ ಚುನಾವಣೆಯನ್ನು ಗೆದ್ದಿರುವ ಬರಾಕ್ ಒಬಾಮಾ ಬಗ್ಗೆ ಇಟಲಿಯ ಪ್ರಧಾನ ಮಂತ್ರಿ ಸಿಲ್ವಿಯೋ ಬೆರ್ಲುಸ್ಕೋನಿ "ಆತ ಇನ್ನು ಯುವಕ, ಅಂದವಾಗಿದ್ದಾನೆ, ಜೊತೆಗೆ tanned (ಕಂದುಬಣ್ಣ ಹೊಂದಿರುವುದು) ಕೂಡ ಆಗಿದ್ದಾನೆ" ಎಂದು ಹೇಳಿಕೆ ನೀಡಿದ್ದು, ಮತ್ತದರಲ್ಲಿ ವರ್ಣಭೇದ ಸೂಕ್ಷ್ಮವಾಗಿ ವ್ಯಕ್ತವಾಗಿರುವುದನ್ನು ನೋಡಿ ಬಹಳಷ್ಟು ಜನ ಆತನನ್ನು ಟೀಕಿಸಿದ್ದಾರೆ. ಆದರೆ ಬೆರ್ಲುಸ್ಕೋನಿ ಹೇಳಿಕೆಯಿಂದ ಎಲ್ಲರಿಗಿಂತಲೂ ಹೆಚ್ಚು ಆಘಾತಗೊಂಡಿರುವುದು ಫ್ರಾನ್ಸ್ ದೇಶದ ಅಧ್ಯಕ್ಷ ಸಾರ್ಕೋಜಿಯವರ ಪತ್ನಿ ಕಾರ್ಲಾ ಬ್ರೂನಿ.

ಕಾರ್ಲಾ ಮೂಲಭೂತವಾಗಿ ಇಟಲಿಯ ಪ್ರಜೆ ಮಾತ್ರವಲ್ಲದೆ ಅಲ್ಲಿನ ದೊಡ್ಡ ಉದ್ಯಮಿ ಕುಟುಂಬಕ್ಕೆ ಸೇರಿದವಳು. ಆದರೆ ಇತ್ತೀಚೆಗೆ ಫ್ರಾನ್ಸ್ ಅಧ್ಯಕ್ಷನನ್ನು ಮದುವೆಯಾದ ಕಾರ್ಲಾ ಈಗ ಫ್ರಾನ್ಸ್ ದೇಶದ ಪೌರತ್ವವನ್ನು ಪಡೆದಿದ್ದಾಳೆ. ಆ ಕಾರಣಕ್ಕಾಗಿ ಆಕೆ "ಸದ್ಯ, ಬೆರ್ಲುಸ್ಕೋನಿ ಇಂತಹ ಹೇಳಿಕೆ ನೀಡಿರುವ ಸಂದರ್ಭದಲ್ಲಿ ನಾನು ಇಟಲಿಯ ಪ್ರಜೆಯಾಗಿಲ್ಲ" ಎಂದು ನಿಟ್ಟುಸಿರು ಬಿಟ್ಟಿದ್ದಾಳೆ!

ಗಗನಕ್ಕೇರಿದ ಕೀರ್ತಿ, ಪಾತಾಳ ಮುಟ್ಟಿದ ಬದುಕು



ಕಂಡಹಾಗೆ

■ ಗೌರಿ ಲಂಕೇಶ್

ನಿನ್ನೆ (ಶನಿವಾರ, ನವೆಂಬರ್ 15) ಪ್ರಜಾವಾಣಿ ಪತ್ರಿಕೆಯ ಮುಖಪುಟವು ಭಾರತವು ನಿಜವಾಗಲೂ ವಿರೋಧಾಭಾಸಗಳ ನಾಡೆಂಬುದಕ್ಕೆ ಸಾಕ್ಷಿ ನುಡಿಯುವಂತಿತ್ತು. ಅವತ್ತಿನ ಪತ್ರಿಕೆಯ ಮೇಲ್ಭಾಗದಲ್ಲಿ 'ಚಂದಿರನ ಎತ್ತರಕ್ಕೆ ದೇಶದ ಕೀರ್ತಿ ಪತಾಕೆ' ಎಂಬ ಶೀರ್ಷಿಕೆಯಡಿ "ಚಂದ್ರನ ಮೇಲೆ ರಾಷ್ಟ್ರ ಧ್ವಜ ಪ್ರತಿಷ್ಠಾಪಿಸುವ, ದೇಶದ ಕೀರ್ತಿಯನ್ನು ಚಂದ್ರಲೋಕಕ್ಕೆ ತಲುಪಿಸುವ ಭಾರತದ ಆಕಾಂಕ್ಷೆ ಕೈಗೂಡಿದೇರಿತು. 'ಮೇರಾ ಭಾರತ್ ಮಹಾನ್' ನುಡಿ



ಚಿತ್ರ ಕೃಪೆ : ಪ್ರಜಾವಾಣಿ

ಕೋಟಿ ಹೃದಯಗಳಲ್ಲಿ ನೂರ್ಮಡಿಯಾಯಿತು. ದೇಶದ ಬಾಹ್ಯಾಕಾಶ ಚರಿತ್ರೆಯನ್ನು ಸುವರ್ಣ ಅಕ್ಷರದಲ್ಲಿ ಬರೆಯಲಾಯಿತು" ಎಂದೆಲ್ಲಾ ವರದಿ ಮಾಡಲಾಗಿತ್ತು.

ಅದೇ ಮುಖಪುಟದ ಕೆಳಭಾಗದಲ್ಲಿ ಇನ್ನೊಂದು ವರದಿ ಇತ್ತು. ಅದಕ್ಕೆ ನೀಡಲಾಗಿದ್ದ ಶೀರ್ಷಿಕೆ 'ಮ್ಯಾನ್‌ಹೋಲ್ ದುರಂತ: ಮೂವರ ಸಾವು.' ಆ ವರದಿಯಲ್ಲಿನ ವಿವರಗಳು ಹೀಗಿದ್ದವು: "ಕಚರಂಡಿ ಸ್ವಚ್ಛಗೊಳಿಸಲು 'ಮ್ಯಾನ್‌ಹೋಲ್'ಗೆ ಇಳಿದ ಇಬ್ಬರು ಪೌರ ಕಾರ್ಮಿಕರು ಮತ್ತು ಅವರನ್ನು ರಕ್ಷಿಸಲು ಹೋದ ಆಟೋ ಚಾಲಕ ಸೇರಿದಂತೆ ಮೂವರು ಉಸಿರುಗಟ್ಟಿ ಮೃತಪಟ್ಟ ಘಟನೆ ಯಲಹಂಕ ಉಪನಗರದ ...ೇನಹಳ್ಳಿಯಲ್ಲಿ ನಡೆಯಿತು."

ಇವೆರಡೂ ಬೆಂಗಳೂರು ಡೇಟ್‌ಲೈನ್ ಹೊಂದಿದ್ದ ವರದಿಗಳು ಎಂಬುದು ಕಾಕತಾಳೀಯವಲ್ಲ. ಈ ವಿಪರ್ಯಾಸ ಇಲ್ಲಿಗೇ ನಿಲ್ಲುವುದಿಲ್ಲ.

ಇಸ್ರೋದ ಅಪೂರ್ವ ಸಾಧನೆಗೆ ಅಭಿನಂದನೆಗಳ ಮಹಾಪೂರವೇ ಹರಿದು ಬಂದಿತು. ಅದರಲ್ಲೂ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ "ಚಂದ್ರಯಾನ ಒಂದು ಯೋಜನೆಯ ಮೂಲಕ ಇಸ್ರೋ ವಿಜ್ಞಾನಿಗಳು ವಿಶ್ವಮಟ್ಟದಲ್ಲಿ ಕೊಂಡಾಡುವಂತಹ ಸಾಧನೆ ಮಾಡಿದ್ದಾರೆ. ಬಾಹ್ಯಾಕಾಶ ಇತಿಹಾಸದಲ್ಲಿ ನೂತನ ಮೈಲಿಗಲ್ಲು ಸ್ಥಾಪಿಸಿದ್ದಾರೆ" ಎಂದು ಹರ್ಷ ವ್ಯಕ್ತಪಡಿಸಿದ್ದರು.

ಪಾಪ, ಯಡಿಯೂರಪ್ಪನವರಿಗೆ ತಮ್ಮ ಸರ್ಕಾರದ ಸಾಧನೆಯಾದ, ಇಬ್ಬರು ಗುತ್ತಿಗೆ ಕಾರ್ಮಿಕರ ಜೀವ ತೆಗೆದುಕೊಂಡಿದ್ದರ ಬಗ್ಗೆ ತುಟಿಪಿಟಿಕ್ ಅನ್ನುವುದಕ್ಕೂ ಸಮಯವಿರಲಿಲ್ಲ. ಆ ಕೆಲಸವನ್ನು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಎಂಬ ಸಚಿವ ಕಮ್ ರಿಯಲ್ ಎಸ್ಟೇಟ್ ಡೀಲರ್‌ಗೆ ಬಿಟ್ಟಿದ್ದರು. ಆತ ಬಂದು ಮ್ಯಾನ್‌ಹೋಲ್ ಒಳಗೆ ಇಣುಕಿ ನೋಡಿ, ಅಲ್ಲಿ ಯಾವ ರಿಯಲ್ ಎಸ್ಟೇಟ್ ಡೀಲೂ ಕಾಣಿಸದಿದ್ದರಿಂದ, BWSSB ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ಸತ್ತವರಿಗೆ ಒಂದು ಲಕ್ಷ ರೂಪಾಯಿಯ ಪರಿಹಾರ ಘೋಷಿಸಿ (ಅದನ್ನು 'ವಿಚಾರಣೆ'ಯ ನಂತರ ನೀಡಲಾಗುತ್ತದಂತೆ. ಆ ವಿಚಾರಣೆಗೆಂದು ಸತ್ತವರ ಕುಟುಂಬದವರು ಅದೆಷ್ಟು 'ಶುಲ್ಕ' ಕಟ್ಟಬೇಕೋ, ಆ ಸುಬ್ರಹ್ಮಣ್ಯನೇ ಬಲ್ಲ!) ಅಲ್ಲಿಂದ ಕಾಲ್ಕಿತ್ತರು.

ಭಾರತದ, ಈ ದೇಶದ ಪ್ರಜೆಗಳ ಟ್ರ್ಯಾಜಿಡಿ ಇನ್ನೂ ಮುಂದುವರೆಯುತ್ತದೆ. ಮ್ಯಾನ್‌ಹೋಲ್‌ನಲ್ಲಿ ಸತ್ತ ಮೂವರ ಕುಟುಂಬಗಳಿಗೆ ಕೊನೆಗೂ ಸರ್ಕಾರ ಮೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತದೆ ಎಂದೇ ಆಶಿಸೋಣ. ಅಂದಹಾಗೆ ಈ ಚಂದ್ರಯಾನಕ್ಕೆ ವೆಚ್ಚವಾಗಿರುವುದು ಎಷ್ಟು ಹಣ ಗೊತ್ತೆ? ಕೇವಲ 386 ಕೋಟಿ (3,86,00,00,000) ರೂಪಾಯಿಗಳು. ಆದರೆ ಹಲವರ ಪ್ರಕಾರ ಅದು ಅಷ್ಟೊಂದು ದೊಡ್ಡ ಮೊತ್ತ ಅಲ್ಲವಂತೆ. ಯಾಕೆಂದರೆ ಇಸ್ರೋ ಸಂಸ್ಥೆಯ ವಾರ್ಷಿಕ ಬಜೆಟ್‌ನ ಕೇವಲ ಶೇ. 10 ಮಾತ್ರ ಚಂದ್ರಯಾನಕ್ಕೆ ವೆಚ್ಚವಾಗಿದೆಯಂತೆ. ಇಲ್ಲಿ ಹೇಳಲೇಬೇಕಿರುವ ಇನ್ನೊಂದು ಅಂಶ ಯಾವುದೆಂದರೆ ಇಸ್ರೋದ ವಾರ್ಷಿಕ ಬಜೆಟ್ ಕೇವಲ 3,858 ಕೋಟಿ (38,58,00,00,000) ರೂಪಾಯಿಗಳು.

ಇಸ್ರೋದ 38,58,00,00,000 ಎಲ್ಲಿ? ಈ ದೇಶದಲ್ಲಿ ಪೌರಕಾರ್ಮಿಕರಾಗಿ ವಿವಿಧ ನಗರ ಮತ್ತು ಪಟ್ಟಣಗಳಲ್ಲಿ ಕೆಲಸ ಮಾಡುತ್ತಿರುವ 13 ಲಕ್ಷ ಜನರೆಲ್ಲಿ? ಇವರೆಲ್ಲ ಯಾವ ಲೆಕ್ಕಕ್ಕೂ ಇಲ್ಲ ಬಿಡಿ. ಅಷ್ಟೇ ಅಲ್ಲ, ಮೊನ್ನೆ ಬೆಂಗಳೂರಿನಲ್ಲಿ ಸಂಭವಿಸಿದ ದುರಂತ ಪ್ರತಿದಿನ ಈ ದೇಶದ ವಿವಿಧ ಭಾಗಗಳಲ್ಲಿ ಪುನರಾವರ್ತನೆಗೊಳ್ಳುತ್ತಿದ್ದು ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಸುಮಾರು 25,000 ಜನ ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿರುವಾಗಲೇ ಸಾವನ್ನಪ್ಪುತ್ತಾರೆ. ಆದರೇನಂತೆ, ಪ್ರಜಾವಾಣಿ ವರದಿ ಮಾಡಿದಂತೆ "ಉಪಕರಣದ ನಾಲ್ಕು ಕಡೆಗಳಲ್ಲೂ ಚಿತ್ರಿಸಲಾಗಿರುವ ತ್ರಿವರ್ಣಧ್ವಜ ಚಂದ್ರನಲ್ಲಿ ಭಾರತದ ಉಪಸ್ಥಿತಿಯನ್ನು ಇಡೀ ವಿಶ್ವಕ್ಕೆ ಸಾರಿ ಸಾರಿ ಹೇಳಿತು." ಹೇಳದೇ ಇರುತ್ತದೆಯೇ? 3,84,400 ಕಿ.ಮೀ. ದೂರದಲ್ಲಿರುವ ಚಂದ್ರನ ಮೇಲೆಯೇ ನಮ್ಮ ದೇಶದ ಧ್ವಜವನ್ನು 'ಹಾರಿಸಿರುವ' ನಮಗೆ ಪ್ರತಿವರ್ಷ ಆರಡಿ ಆಳದ ಮ್ಯಾನ್‌ಹೋಲ್‌ಗಳಲ್ಲಿ ಸಾಯುತ್ತಿರುವ 25,000 ದಲಿತರ ಜೀವ ಯಾವ ಲೆಕ್ಕಕ್ಕೆ? ಅದನ್ನು ವಿಶ್ವಕ್ಕೆ ಸಾರಿ, ಸಾರಿ ಹೇಳುವುದು ಯಾತಕ್ಕೆ? ಸುಮ್ಮನೆ ಬಾಯಿ ಮುಚ್ಚಿಕೊಂಡಿದ್ದು ನಮ್ಮ ವಿಜ್ಞಾನಿಗಳ ಯಶಸ್ಸನ್ನು ಕೊಂಡಾಡಬಾರದೇ? ಚಂದ್ರಕ್ಕೆ ಇಲ್ಲಿಯತನಕ ಕೇವಲ ಮೂರು ದೇಶಗಳು ಇಂತಹ ಉಪಕರಣಗಳನ್ನು ಕಳುಹಿಸಿವೆ. ನಮ್ಮ ಭಾರತ ಈ ಸಾಧನೆಯನ್ನು ಮಾಡಿರುವ ನಾಲ್ಕನೇ ದೇಶ. ಇದು ಸಾಮಾನ್ಯ ಸಾಧನೆಯಲ್ಲ ಹೆಮ್ಮೆಪಡಬೇಕಾದ ಸಂಗತಿ ಎನ್ನುವವರೂ ಇದ್ದಾರೆ.




ಚಿತ್ರ ಕೃಪೆ : ಪ್ರಜಾವಾಣಿ

ಆ ಚಂದ್ರಲೋಕದಲ್ಲಿ ಏನಿದೆಯೋ ಗೊತ್ತಿಲ್ಲ. ಆದರೆ ಭೂಲೋಕದಲ್ಲಿ, ಅದರಲ್ಲೂ ಭಾರತದಲ್ಲಿ ಜಾತಿವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಯಂತೂ ತಾಂಡವವಾಡುತ್ತಿದೆ. ಚಂದ್ರಯಾನಕ್ಕೆ 386 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ, ಇನ್ನು ಕೆಲವೇ ವರ್ಷಗಳಲ್ಲಿ ಚಂದ್ರಕ್ಕೆ ಮಾನವನನ್ನು ಕಳುಹಿಸಲು ಇನ್ನಷ್ಟು ಹಣವನ್ನು ನೀಡಲಿರುವ ಭಾರತದಲ್ಲಿ ಇವತ್ತಿಗೂ ಕನಿಷ್ಠ ಆರು ಕೋಟಿ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಅವರೂ ಲೆಕ್ಕಕ್ಕಿಲ್ಲ ಬಿಡಿ.

ಇನ್ನು ಲಕ್ಷಾಂತರ ಮೈಲಿ ದೂರವಿರುವ ಚಂದ್ರ ಲೋಕದಲ್ಲಿನ ಸಾಧನೆ ಬಗ್ಗೆ ವಿಹರಿಸುವ ಭಾರತೀಯರಿಗೆ, ಇದೇ ಭಾರತದ ತಜ್ಞರಿಗೆ ಇತ್ತೀಚೆಗೆ ಒಂದು ನದಿಯ

▶▶▶ 9

ಕನಕ ಜಯಂತಿ: ಹೊಗಳುತ್ತಲೇ ಹೊನ್ನ ಶೂಲಕ್ಕೆ ಏರಿಸುವ ಪರಿ!



ಕನಕ ಗೋಪುರವನ್ನು ಕೆಡವಿದ ಶಕ್ತಿಗಳೇ ಮೊನ್ನೆ ಕನಕ ಜಯಂತಿಯನ್ನು ರಾಜ್ಯಾದ್ಯಂತ ವಿಜೃಂಭಣೆಯಿಂದ ಆಚರಿಸಿದವು. ಆದರಲ್ಲಿ ಭಾಗವಹಿಸಿದ್ದವರನ್ನೂ ಒಳಪಟ್ಟಂತೆ ಯಾರೂ ಸಹ "ಇಂಥ ಘಟನೆ ಬೇರೆ ಯಾವ ದೇಶದಲ್ಲಿ ನಡೆದೀತು?" ಎಂದು ಪ್ರಶ್ನಿಸಲಿಲ್ಲ. ಪ್ರಾಯಶಃ ಈ ವರ್ತಮಾನದ ವಿಸ್ಮೃತಿಯಿಂದಾಗಿಯೇ ತಮ್ಮನ್ನು ಕೊಲ್ಲುತ್ತಿರುವ ಶತೃಗಳ ಪಡೆಗೆ ತಾವೇ ಸೈನಿಕರಾಗಿ ಶೂದ್ರ ಶಕ್ತಿಗಳು ಸೇರುತ್ತಿರಬೇಕು!

ವಾಸ್ತವವಾಗಿ ಬಿಜೆಪಿ ಸರ್ಕಾರ ನಡೆಸಿದ ಜಯಂತಿ ಅಕ್ಷರಶಃ ಕನಕದಾಸರ ಕಗ್ಗೊಲೆಯಾಗಿತ್ತು. "ಕುಲ ಕುಲವೆಂದು ಹೊಡೆದಾಡದಿರಿ" ಎಂದು ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಕನಕನನ್ನು ತಮ್ಮ ಬ್ರಾಹ್ಮಣೀಯ ಕುಲ ವ್ಯವಸ್ಥೆಯ ಅಜೆಂಡಾಗಳಿಗೆ ಒಗ್ಗುವಂತೆ ಬಗ್ಗಿಸುವ ಕಾರ್ಯಕ್ರಮ ಅದಾಗಿತ್ತು. ದನದ ಮಾಂಸ ತಿಂದರೆ ನಾಲಿಗೆ ಕತ್ತರಿಸುತ್ತೇವೆ ಎಂದ ಬ್ರಾಹ್ಮಣೀಯ ಬಿಜೆಪಿಯ ಕುರುಬ ಯೋಧ ಈಶ್ವರಪ್ಪ ವಾಸ್ತವವಾಗಿ ಕುರುಬರನ್ನು ಒಳಗೊಂಡಂತೆ ಇಡೀ ಶೂದ್ರ ಸಮುದಾಯದ ಆಹಾರಾಭ್ಯಾಸವನ್ನೇ ಅವಹೇಳನ ಮಾಡಿದ್ದ. ಅಷ್ಟು ಮಾತ್ರವಲ್ಲ ಕನಕ ಗೋಪುರವನ್ನು ಕನಕ ಸಂಸ್ಕೃತಿಯ ಭಾಗ ಎಂಬುದನ್ನು ಖಡಾಖಂಡಿತವಾಗಿ ನಿರಾಕರಿಸುತ್ತಾ, ಸಂಘಪರಿವಾರದ ನಾಯಕ ಪೇಜಾವರರನ್ನು ರಕ್ಷಿಸುತ್ತಾ ಬಂದಿರುವ ಈಶ್ವರಪ್ಪನ ಬಿಜೆಪಿಗೆ ಕನಕ ಜಯಂತಿಯನ್ನು ಆಚರಿಸುವ ಯಾವ ನೈತಿಕ ಹಕ್ಕೂ ಇಲ್ಲ. ಅಷ್ಟಾಗಿಯೂ ಅವರು ಕನಕ ಜಯಂತಿಯನ್ನು ಆಯೋಜಿಸಿದ್ದರಲ್ಲಿ ಈ ಕನಕನ ಕಗ್ಗೊಲೆಯನ್ನು ದಕ್ಕಿಸಿಕೊಳ್ಳುವ ಮತ್ತು ಅದಕ್ಕೆ ಸಮ್ಮತಿಯನ್ನು ಪಡೆದುಕೊಳ್ಳುವ ಹುನ್ನಾರವೂ ಇತ್ತು.

ಕನಕ ಜಯಂತಿಗೆ ಸರ್ಕಾರಿ ರಜ ಘೋಷಿಸಿದ ಸರ್ಕಾರ ತಮ್ಮದು ಎಂದು ಹೇಳಿಕೊಂಡ ಬಿಜೆಪಿ ಸರ್ಕಾರ ಕನಕ ಜಯಂತಿಯನ್ನು ಪಕ್ಕಾ ಸರ್ಕಾರಿ ಕಾರ್ಯಕ್ರಮವನ್ನಾಗಿ ಆಯೋಜಿಸಿ ಕನಕ ತತ್ವದ ಆತ್ಮವನ್ನೇ ಕೊಂದು ಹಾಕಿತು. ಎರಡನೆಯದಾಗಿ, ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯವನ್ನು ಖಂಡತುಂಡವಾಗಿ ಧಿಕ್ಕರಿಸಿದ್ದ ಕನಕದಾಸರನ್ನು ದಾಸಶ್ರೇಷ್ಠ ಎಂದು ಕರೆಯುತ್ತಾ ಪರೋಕ್ಷವಾಗಿ ಕನಕದಾಸರನ್ನು ಈ ಶ್ರೇಷ್ಠ-ಕನಿಷ್ಠ ಎಂಬ ಬ್ರಾಹ್ಮಣೀಯ ಮಾನದಂಡದೊಳಗೆ ಸೇರಿಸಿಕೊಳ್ಳುವ ಪ್ರಯತ್ನ ನಡೆಸಿತು.

ಮೂರನೆಯದಾಗಿ, ಕನಕದಾಸರು ವೈದಿಕ ಬ್ರಾಹ್ಮಣ್ಯವನ್ನು, ಅದರ ಉಪನಿಷತ್ ಇತ್ಯಾದಿಗಳ ತಾರತಮ್ಯ ಆಧಾರಿತ ತಾತ್ವಿಕ ದರ್ಶನವನ್ನು ಆಮೂಲಾಗ್ರವಾಗಿ ವಿರೋಧಿಸಿದ ಮನುಷ್ಯಮತಿ. ಮನುಷ್ಯರೆಲ್ಲರೂ ಒಂದೇ ಎಂಬ ಕನಕದಾಸರ ಶೂದ್ರ ದರ್ಶನದ ಕನಕನ ಬೋಧೆಗಳನ್ನು "ಕನಕೋಪನಿಷತ್" ಎಂಬ ಹೆಸರಿನಲ್ಲಿ ವೈದಿಕೀಕರಣಗೊಳಿಸುವ ಹುನ್ನಾರವನ್ನು ಬಿಜೆಪಿ ಸರ್ಕಾರ ನಡೆಸಿದೆ.

ನಾಲ್ಕನೆಯದಾಗಿ, ಕನ್ನಡ ನಾಡಿಗೆ ಕನಕದಾಸರ ಕೊಡುಗೆಯ ಬಗ್ಗೆ ಬಿಜೆಪಿ ಮಾಡುತ್ತಿರುವ ಪ್ರಚಾರವನ್ನು ನೋಡಿ. "ಕನ್ನಡ ಸಾಹಿತ್ಯಕ್ಕೆ ಮತ್ತು ಸಂಗೀತ ಕ್ಷೇತ್ರಕ್ಕೆ ಕನಕದಾಸರು ಅನನ್ಯ ಕೊಡುಗೆ ನೀಡಿದ್ದಾರೆ. ಅದರ ಅಧ್ಯಯನಕ್ಕೆ ಒಂದು ಪೀಠ ಸ್ಥಾಪಿಸಲಾಗುವುದು." ಇದು ಮನುವಾದಿ ಬಿಜೆಪಿ ಕನಕನನ್ನು ನೆನಸಿಕೊಳ್ಳುವ ರೀತಿ. ಕನಕದಾಸ ಕನ್ನಡ ಭಾಷೆಗೆ ಮತ್ತು ಸಂಗೀತಕ್ಕೆ ಅದ್ಭುತ ಕೊಡುಗೆ ನೀಡಿರುವುದು ಸುಳ್ಳೇನಲ್ಲ. ಆದರೆ ಕನಕನನ್ನು ನೆನಸಿಕೊಳ್ಳಬೇಕಿರುವುದು ಒಂದು ಸಂಗೀತಗಾರನಾಗಿಯೋ, ಸಾಹಿತಿಯಾಗಿಯೋ ಅಲ್ಲ. ಬದಲಿಗೆ ಆತ ಆ ಮಾಧ್ಯಮಗಳ ಮೂಲಕ ಮತ್ತು ತನ್ನ ಬದುಕಿನ ಮೂಲಕ ಜೀವವಿರೋಧಿ ಬ್ರಾಹ್ಮಣ್ಯದ ವಿರುದ್ಧ ನಡೆಸಿದ ಸಂಘರ್ಷಕ್ಕೆ ಮತ್ತು ಆ ಮೂಲಕ ಆತ ಕಟ್ಟಿಕೊಟ್ಟ ಆದರ್ಶ ಜೀವನ ದರ್ಶನಕ್ಕೆ. ಆದರೆ ಈ ಮನುವಾದಿ ಬಿಜೆಪಿ ಈ ತತ್ವ ದರ್ಶನವನ್ನು ಎಲ್ಲಿಯೂ ಪ್ರಚಾರಕ್ಕೆ ತರಲಿಲ್ಲ.

ಕುಲ ಕುಲ ಕುಲವೆಂದು ಹೊಡೆದಾಡದಿರಿ

ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ? ಬಲ್ಲಿರಾ?

ಇದು ಕನಕ ಜೀವನ ಸಾರ, ಕನಕ ತತ್ವ ದರ್ಶನ, ಕನಕನ ಸಾಹಿತ್ಯ ಮತ್ತು ಸಂಗೀತದ ಸಾರಾಂಶ. ಬಿಜೆಪಿ ಸರ್ಕಾರ ಈ ಸಾರವನ್ನು ತೆಗೆದು ಸಾರವಿಲ್ಲದ ಕನಕನ್ನು ಪ್ರಚಾರ ಮಾಡುತ್ತಿದೆ. ಕನಕನನ್ನು ಕೊಲ್ಲುತ್ತಿದೆ. ಕನಕ ಸ್ಮರಣೆ ಮಾಡುತ್ತಿದ್ದೇವೆ ಎನ್ನುತ್ತಲೇ ಕನಕ ದರ್ಶನವನ್ನು ಕೊಲ್ಲುತ್ತಿದೆ. ಪುಣ್ಯವಂತ ಶೋಷಿತ ಸಮುದಾಯದ ಪ್ರಜ್ಞೆಯನ್ನು ಭ್ರಷ್ಟಗೊಳಿಸಲು ಮನುವಾದಿಗಳು ಬಳಸುತ್ತಿರುವ ಹೊಸ ಕುತಂತ್ರವಿದು. ಕನಕನನ್ನು ಕೃಷ್ಣ ಗುಡಿಯ ಹೊರಗಟ್ಟಿದಂತೆ ಕನಕನನ್ನು ನಮ್ಮ ಪ್ರಜ್ಞೆಯಿಂದ ಹೊರಗಿಡುವ ಹುನ್ನಾರವಿದು. ■

ಮತಾಂತರ ಸಂವಾದ, ವಿಕ ಭಟ್ಟರಿಂದ ತಾರಿಣಿ ಲೇಖನ ದುರುಪಯೋಗ

ಆದರೆ ತಮ್ಮ ಪುಸ್ತಕದ ಒಂದು ಲೇಖನ ಈ ರೀತಿ 'ಬಳಕೆ'ಯಾಗಿ ದ್ದನ್ನು ನೋಡಿ ತಾರಿಣಿ ಬೆಚ್ಚಿಬಿದ್ದಿದ್ದಾರೆ. ತಮ್ಮ ಅನುಮತಿ ಪಡೆಯದೇ ಈ ಲೇಖನವನ್ನು ಹೇಗೆ ಪ್ರಕಟಿಸಿದ್ದೀರಿ ಎಂದು ಪತ್ರ ಬರೆದು ಭಟ್ಟರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.


ಕಳೆದ ವಾರವೇ 'ವಿಜಯ ಕರ್ನಾಟಕ' ಎಂಬ ಚೆಡ್ಡಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ಟರ ಬಗ್ಗೆ ಬರೆದಿದ್ದರೂ ಈ ವಾರ ಅವರ ಬಗ್ಗೆ ಮತ್ತೆ ಬರೆಯಬೇಕಾಗಿ ಬಂದಿರುವುದು ನಮ್ಮ ದುರಂತ. ಆದರೂ ಬರೆಯದೆ ವಿಧಿ ಇಲ್ಲವಾದ್ದರಿಂದ ವಿಕ ಭಟ್ಟರ ಲೇಟೆಸ್ಟ್ ಅವಗಢಗಳ ಬಗ್ಗೆ ಇಲ್ಲಿ ದಾಖಲಿಸದ್ದೇವೆ. ಅದಕ್ಕೆ ಮುಖ್ಯ ಕಾರಣ ಭಟ್ಟರು ತಮ್ಮ ಹಿಂದೂತ್ವವಾದಿ ತೀಟೆಯನ್ನು ತೀರಿಸಿ ಕೊಳ್ಳಲು ಸಾಕ್ಷಾತ್ ಕುವೆಂಪು ಅವರನ್ನೇ ಬಳಸಿಕೊಳ್ಳುವ ಮಟ್ಟಕ್ಕೆ ಇಳಿದಿರುವುದು.

ಪ್ರಮುಖ ಚೆಡ್ಡಿ ಎಸ್.ಎಲ್.ಭೈರಪ್ಪನ ಲೇಖನ ವೊಂದನ್ನು ಪ್ರಕಟಿಸುವ ಮೂಲಕ ವಿಕದಲ್ಲಿ ಮತಾಂತರ ಕುರಿತು ಭಟ್ಟರು ಒಂದು ನಕಲಿ 'ಸಂವಾದ'ವನ್ನು ಆರಂಭಿಸಿದ್ದು ಈಗ ಹಳೆಯ ಸುದ್ದಿ. ಈ ಚರ್ಚೆಯನ್ನು ಅವರೆಲ್ಲಿಗೆ ತೆಗೆದುಕೊಂಡುಹೋಗಿ ನಿಲ್ಲಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿರುವುದರಿಂದ ನಾಡಿನ ಪ್ರಜ್ಞಾವಂತರ್ಯಾರೂ ಆ ಚರ್ಚೆಯಲ್ಲಿ ಭಾಗವಹಿಸುತ್ತಿಲ್ಲ. ಆದರೆ ಇದರಿಂದಾಗಿ ಭಟ್ಟರ 'ಮತಾಂತರ-ಒಂದು ಸಂವಾದ' ಏಕಮುಖಿಯಾಗುತ್ತದೆ ಮತ್ತು ಆ ಮೂಲಕ ತನ್ನ ಮಹತ್ವ ಕಳೆದುಕೊಳ್ಳುತ್ತದೆ ಎಂದು ಹೆದರಿದ ಭಟ್ಟರು ಕೆಲ ಪ್ರಜ್ಞಾವಂತರನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಂಪರ್ಕಿಸಿ ಅವರ ಪ್ರತಿಕ್ರಿಯೆ ಬರೆಸಿಕೊಂಡು ಪ್ರಕಟಿಸಲಾರಂಭಿಸಿದ್ದಾರೆ. ಇಷ್ಟೇ ಆಗಿದ್ದರೆ ಸುಮ್ಮನಿರಬಹುದಿತ್ತು. ಆದರೆ ಕೆಲವರ ಒಪ್ಪಿಗೆಯನ್ನೇ ಪಡೆಯದೆ ಅವರ ಲೇಖನವನ್ನು ಈ ಸಂವಾದದಲ್ಲಿ ಪ್ರಕಟಿಸಿ ದೊಡ್ಡ ರಾದ್ಧಾಂತವನ್ನೇ ಮಾಡಿಕೊಂಡಿದ್ದಾರೆ.



ಮತಾಂತರ ವಿರೋಧಿ ಚಳವಳಿಗೆ ಕುವೆಂಪು!


ರಾಷ್ಟ್ರಕವಿ ಕುವೆಂಪು ಅವರ ಮಗಳು ತಾರಿಣಿ ಚಿದಾನಂದ್ ಎರಡು ವರ್ಷಗಳ ಹಿಂದೆ 'ಮಗಳು ಕಂಡ ಕುವೆಂಪು'ಎಂಬ ಕೃತಿಯೊಂದನ್ನು ಬರೆದಿದ್ದರು. ಅದು ಎಲ್ಲರಿಂದ ಪ್ರಶಂಸೆಯನ್ನೂ ಪಡೆದಿತ್ತು. ಈ ಕೃತಿಯಲ್ಲಿ ಕ್ರೈಸ್ತ ಧರ್ಮದ ಪ್ರಚಾರಕ್ಕೆಂದು ತಮ್ಮ ಮನೆಗೆ ಬಂದಿದ್ದ ಪಾದ್ರಿಯೊಬ್ಬರಿಗೆ ಕುವೆಂಪು ಹೇಗೆ ಪ್ರತಿಕ್ರಿಯೆ ನೀಡಿದ್ದರು ಎಂದು ವಿವರಿಸುವ ಲೇಖನವಿದೆ. ಇದನ್ನು ತಾರಿಣಿಯವರ ಒಪ್ಪಿಗೆ ಪಡೆಯದೇ ಭಟ್ಟರು ತಮ್ಮ ನಕಲಿ 'ಸಂವಾದ'ದಲ್ಲಿ ಪ್ರಕಟಿಸಿದ್ದಾರೆ. ಅದರ ಹಿಂದೆ ಭಟ್ಟರ ಕುತಂತ್ರ ಇತ್ತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ? ಅದೇನೆಂದರೆ ಈ ರೀತಿ ಬಡಿಯಾಗಿ ಲೇಖನ ಪ್ರಕಟಿಸುವುದರಿಂದ ಓದುಗರಲ್ಲಿ ಕುವೆಂಪು ಕೂಡ ಮತಾಂತರವನ್ನು ವಿರೋಧಿಸುತ್ತಿದ್ದರು ಎಂಬ ಭಾವನೆ ಮೂಡಿಸುವುದು!



ಆದರೆ ತಮ್ಮ ಪುಸ್ತಕದ ಒಂದು ಲೇಖನ ಈ ರೀತಿ 'ಬಳಕೆ'ಯಾಗಿದ್ದನ್ನು ನೋಡಿ ತಾರಿಣಿ ಬೆಚ್ಚಿಬಿದ್ದಿದ್ದಾರೆ. ತಮ್ಮ ಅನುಮತಿ ಪಡೆಯದೇ ಈ ಲೇಖನವನ್ನು ಹೇಗೆ ಪ್ರಕಟಿಸಿದ್ದೀರಿ ಎಂದು ಪತ್ರ ಬರೆದು ಭಟ್ಟರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

"ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ನನ್ನ ಹೆಸರಿನ ಲೇಖನ ಕಂಡು ಆಶ್ಚರ್ಯ, ನೋವು, ಬೇಸರ ಒಟ್ಟಿಗೆ ಆಯಿತು. ನಾನು ವೈಯಕ್ತಿಕವಾಗಿ ಈ ಸಂವಾದದಲ್ಲಿ ಭಾಗಿಯಾಗಿಲ್ಲ, ತಮ್ಮ ಪತ್ರಿಕೆಯಲ್ಲಿ ನನ್ನ ಪುಸ್ತಕದ ಈ ಭಾಗವನ್ನು ಪ್ರಕಟಿಸಿ ಎಂದು ಬರೆದುಕೊಂಡಿದ್ದಂತೂ ಇಲ್ಲವೇ ಇಲ್ಲ. ಹೀಗಿರುವಾಗ ನನ್ನನ್ನು ಅನವಶ್ಯಕವಾಗಿ ಈ ಸಂವಾದದಲ್ಲಿ ಎಳೆದಿದ್ದೀರಿ. ಪತ್ರಿಕೆಯಲ್ಲಿ ಪ್ರಕಟಿಸಿರುವ ಭಾಗವು ನನ್ನ 'ಮಗಳು ಕಂಡ ಕುವೆಂಪು' ಕೃತಿಯಲ್ಲಿ ಬರೆದದ್ದು. ಆ ಭಾಗವನ್ನು ತಾವು ನನ್ನ ಕೃತಿಯಿಂದ ತೆಗೆದುಕೊಂಡಿದ್ದೀರಿ ಮತ್ತು ನಾನೇ ತಮಗೆ ಬರೆದು ಸದರಿ ಸಂವಾದಕ್ಕೆ ನನ್ನ ಲೇಖನ ಪ್ರಕಟಿಸಲು ಕೋರಿದೆನು ಎಂಬ ಭಾವನೆ ಸಾರ್ವಜನಿಕರಲ್ಲಿ ಉಂಟಾಗುವಂತೆ ಮಾಡಿದ್ದೀರಿ. ತಾವು ಎಲ್ಲಿಂದಲೋ ತೆಗೆದ ಯಾವುದನ್ನೇ ಬೇಕಾದರೂ ಈ ಸಂವಾದದಲ್ಲಿ ಪ್ರಕಟಿಸಬಹುದೇ? ಇದು ಮೂಲ ಲೇಖನದ ಬರವಣಿಗೆಯ ಆಶಯವನ್ನು ತಿರುಚಿದಂತಾಗುವುದಿಲ್ಲವೇ? ಮತ್ತು ಅಪಪ್ರಚಾರವಲ್ಲವೇ?" ಎಂದು ತಾರಿಣಿ ಚಿದಾನಂದ್ ಪತ್ರದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಷ್ಟೇ ಅಲ್ಲ, "ಕುವೆಂಪು ಅವರ ಬಳಿಗೆ ಯಾವುದೇ ಧರ್ಮದ ಮತ ಪ್ರಚಾರಕರು ಬಂದಾಗಲೂ ಕೂಡಾ ಅವರು ಹೇಳಿಕಳುಹಿಸುತ್ತಿದ್ದುದು ಇದನ್ನೇ. ಅಂದು ಬಂದ ಮತ ಪ್ರಚಾರಕರ ನಡವಳಿಕೆ ಬಗೆಗೆ ಹೇಳದಿರುವುದು ಮತ್ತು ದೊಡ್ಡದು ಮಾಡದಿರುವುದೇ ಉತ್ತಮ. ನೀವು ಉದ್ಧರಿಸಿರುವ ನನ್ನ ಬರವಣಿಗೆಯನ್ನು ಕೆಲವರು ವಾದದ ಪರವೆಂದೂ, ಕೆಲವರು ವಾದದ ವಿರೋಧವೆಂದೂ ಗ್ರಹಿಸಿ ನನಗೆ ಫೋನ್ ಮಾಡುತ್ತಿದ್ದಾರೆ. ಇವೆರಡೂ ಅಲ್ಲವೆಂದು ಕುವೆಂಪು ಅವರನ್ನು ಚೆನ್ನಾಗಿ ಬಲ್ಲವರು ಮತ್ತು ನನ್ನ ಪುಸ್ತಕದ ಕಿರು ಅಧ್ಯಾಯವನ್ನು ಓದಿದವರಿಗೆ ತಿಳಿಯುತ್ತದೆ" ಎಂದು ತಾರಿಣಿಯವರು ಪತ್ರದಲ್ಲಿ ವಿವರಿಸಿದ್ದಾರೆ.



ಜೊತೆಗೆ "ಏನೇ ಆದರೂ ಅನುಮತಿ ಇಲ್ಲದೆ ನನ್ನ ಪುಸ್ತಕದ ಈ ಭಾಗವನ್ನು ತಾವು ಈ ಸಂವಾದದಲ್ಲಿ ಬಳಸಿಕೊಂಡಿರುವುದು ವೈಯಕ್ತಿಕವಾಗಿ ನನಗೆ ನೋವು ಮತ್ತು ಬೇಸರ ತಂದಿದೆ. ಆದುದರಿಂದ ತಾವು ಪತ್ರಿಕೆಯ ಇದೇ ಕಾಲಮಿನಲ್ಲಿ ನನ್ನ ಈ ಪತ್ರವನ್ನು ಪ್ರಕಟಿಸಬೇಕೆಂದು ಕೋರುತ್ತೇನೆ" ಎಂದು ಅವರು ಪತ್ರದಲ್ಲಿ ಕೇಳಿಕೊಂಡಿದ್ದಾರೆ.

ಆದರೆ ತಾರಿಣಿಯವರ ಪತ್ರ ಪ್ರಕಟಿಸುವ ಧೈರ್ಯ ಭಟ್ಟರಿಗಿದ್ದರೆ ತಾನೆ?

ಭಟ್ಟರ 'ಸಂವಾದ' ಎಂಬ ನಾಟಕ ತಾರಿಣಿಯವರ ಪ್ರಕರಣದೊಂದಿಗೆ ನಿಲ್ಲುವುದಿಲ್ಲ. ಯಾಕೆಂದರೆ ಇದೇ 'ಸಂವಾದ'ದಲ್ಲಿ ಎಂ.ಆರ್. ದತ್ತಾತ್ರಿ ಎಂಬುವವರ ಲೇಖನ ಕೂಡ ಪ್ರಕಟವಾಗಿದೆ. ಅವರು ಈ ಸಂವಾದಕ್ಕಾಗಿ ಅದು ಬರೆದಿದ್ದಲ್ಲವಂತೆ. ಅಂತರ್ಜಾಲದ ತಾಣವೊಂದರಲ್ಲಿ ಪ್ರಕಟಿಸಿದ ಅವರ ಲೇಖನವನ್ನು ಒಪ್ಪಿಗೆ ಪಡೆಯದೇ ಪ್ರಕಟಿಸಲಾಗಿದೆ ಎಂಬ ಸುದ್ದಿ ಇದೆ. ಇನ್ನೆಷ್ಟು ಲೇಖನಗಳು ಹೀಗೆ ದುರ್ಬಳಕೆಯಾಗಿವೆಯೋ?

ಕಚೇರಿಯಲ್ಲಿಯೇ ಪ್ರತಿಕ್ರಿಯೆ ಸಿದ್ಧ


ವಿಜಯ ಕರ್ನಾಟಕದ 'ವಾಚಕರ ವಿಜಯ' ಕಾಲಂ... ಪ್ರಕಟವಾಗುವ ಬಹಳಷ್ಟು ಪತ್ರಗಳು ಮತ್ತು ಪ್ರತಿಕ್ರಿಯೆಗ... ವಿಜಯ ಕರ್ನಾಟಕದ ಕಚೇರಿಯಲ್ಲಿಯೇ ಸಿದ್ಧವಾಗು... ದೆಂಬುದು ಹಳೆಯ ಸುದ್ದಿ. ಹೊಸ ವಿಷಯವೇನೆಂದ... ಮತಾಂತರ ಕುರಿತ ಚರ್ಚೆಯಲ್ಲಿ ಪತ್ರಕರ್ತ ರವಿ ಬೆಳಗ... ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ವಿ.ಕ.ದಲ್ಲೂ ಮ... ಅದನ್ನೇ ತಮ್ಮ ಪತ್ರಿಕೆಯಲ್ಲೂ ಮಂಡಿಸಿದ್ದರು. ಇದ... ಓದಿ ವಿ.ಕ.ದ 'ಬೆತ್ತಲೆ' ಜಗತ್ತಿನ ಪ್ರತಾಪ ಸಿಂಹನ... ಉರಿದು ಹೋಗಿದೆ. ಯಾಕೆಂದರೆ ಇದೇ ಬೆಳಗೆರೆ ಆತನ... ಈ ಹಿಂದೆ ತಮ್ಮ ಪತ್ರಿಕೆಯಲ್ಲಿ ಸಾಕಷ್ಟು ಬ... ಸಂಪೂರ್ಣವಾಗಿ ಬೆತ್ತಲೆಗೊಳಿಸಿದ್ದಾರೆ. ಆದ್ದರಿಂದ ಇದ... ಅವಕಾಶ ಎಂದು ಬಗೆದ ಸಿಂಹ ತಾನೇ ಒಂದು ಪ್ರತಿಕ್ರಿ... ಬರೆದು ಅದು ಮಾರನೇ ದಿನವೇ ಪತ್ರಿಕೆಯ... ಪ್ರಕಟವಾಗುವಂತೆ ನೋಡಿಕೊಂಡಿದ್ದಾನೆ. ಆದರೆ ... ಪ್ರತಿಕ್ರಿಯೆಯನ್ನು ರಾಮಚಂದ್ರ ಶೆಣೈ ಎಂಬುವವರ ಹೆಸರಿನ... ಬರೆದಿದ್ದಾನೆ. ಇದನ್ನು ನೋಡಿದ ವಿ.ಕ. ಸಿಬ್ಬಂದಿ ಬ... ಬಿದ್ದು ನಕ್ಕಿದ್ದಾರೆ. ತನ್ನ 'ಗೆಳೆಯ' ರವಿ ಬೆಳಗೆರೆಗೆ ಭಟ್ಟ... ತನ್ನ ಶಿಷ್ಯನ ಮೂಲಕ ಸರಿಯಾಗಿ 'ಪೂಜೆ' ಮಾಡಿಸಿದ... ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ತನ್ನ ಈ ಪ್ರತಾಪವನ್ನು ಪ್ರತಾಪ ಸಿಂಹ ಗೆಳೆಯ... ಬಳಿಯೂ ಕೊಚ್ಚಿಕೊಂಡಿದ್ದಾನೆ. ತಾನು ಹೀಗೆ ಮಾಡು... ತ್ತಿರುವುದು ಇದೇ ಮೊದಲಲ್ಲ ಎಂದೂ ಹೇಳಿಕೊಂಡಿದ್ದಾ... ಅಷ್ಟೇ ಅಲ್ಲ, ತಾನು ಬರೆದ ಲೇಖನಗಳನ್ನು... ಪ್ರಕಟಿಸುವ ತನ್ನ ಬ್ಲಾಗ್‌ನಲ್ಲಿ 'ರಾಮಚಂ... ಶೆಣೈ' ಬರೆದ ಈ ಪ್ರತಿಕ್ರಿಯೆಯನ್ನು... ಪ್ರಕಟಿಸಿಕೊಂಡಿದ್ದಾನೆ. ಈ ರಾಮಚಂದ್ರ ಶೆ... ಎಲ್ಲಿಂದ ಉದ್ಭವಿಸಿ ಇಂತಹ ಲೇಖನ ಬರೆ... ಎಂದು ಹುಡುಕುತ್ತಿರುವ ಓದುಗರಿಗೆ ಮಾ... ವಿಕದ ಹುತ್ತ ಇನ್ನೂ ಕಾಣಿಸಿಲ್ಲವಂತೆ!

ಮಾನವೀಯ ಮೌಲ್ಯಗಳನ್ನು... ಹೊಂದಿರುವ ಈ ನಾಡಿನ ಬರಹಗಾರರೆ... ವಿಕದಿಂದ ದೂರ ಉಳಿದಿದ್ದಾರೆ. ಹೀಗಾ... ವಿಕಕ್ಕೆ ಉತ್ತಮ ಲೇಖನಗಳ, ಸೃಜನಶೀ... ಬರಹಗಳ ಕೊರತೆ ಇದ್ದೇ ಇದೆ. ಆದ್ದರಿಂ... ಈಗಾಗಲೇ ಪ್ರಕಟ ಗೊಂಡಿರುವ ಪುಸ್ತಕಗಳಿಂ... ಬ್ಲಾಗ್‌ಗಳಿಂದ, ವೆಬ್‌ಸೈಟ್‌ಗಳಿಂದ ಲೇಖನಗಳನ್ನು... ಯಥಾವತ್ತಾಗಿ ಎತ್ತಿ ಆ ಲೇಖಕರ ಅನುಮತಿ ಪಡೆಯ... ವಿಕದಲ್ಲಿ ಪ್ರಕಟಿಸುವ ಕೆಲಸವನ್ನು ಭಟ್ಟರು ಮಾಡುತ್ತಿದ್ದಾ...

ಕನ್ನಡದ ನಂ.1 ಪತ್ರಿಕೆಗೆ ಈ ಗತಿ ಬರಬಾರದಿ... ಎಂದು ಅವರ ಸಿಬ್ಬಂದಿ ಮತ್ತು ಪತ್ರಿಕಾ ವಲಯ... ಮಾತನಾಡಿಕೊಳ್ಳುತ್ತಿದೆ.

■ ವರದಿಗಾ...



ಅನಂತಮೂರ್ತಿ ಮತ್ತೆ ಉಗಿದರು!

ಪಂಡಿತ್ ಭೀಮಸೇನ ಜೋಷಿ ಅವರಿಗೆ ಮೊನ್ನೆ 'ಭಾರತ ರತ್ನ' ಘೋಷಣೆಯಾಯಿತಲ್ಲ ಅಂದು ವಿಕದಲ್ಲಿ ಅವರ ಬಗ್ಗೆ ಒಂದು ಪುಟ ಮಾಹಿತಿ (?) ಪ್ರಕಟಿಸಲಾಗಿತ್ತು. ಅದೇನೂ ಸಂಶೋಧನೆ ಮಾಡಿ ಪ್ರಕಟಿಸಿದ ಮಾಹಿತಿ ಅಲ್ಲ. ಇರಲಿ ಬಿಡಿ. ದಿನಪತ್ರಿಕೆಯೊಂದು ಸಕಾಲಿಕವಾಗಿ ಹೇಗೆ ಮಾಹಿತಿ ಒದಗಿಸಬೇಕಾಗಿತ್ತೋ ಹಾಗೆಯೇ ವಿಕ ಕೂಡ ಕೊಟ್ಟಿತ್ತು. ಆದರೆ ಮಾರನೇ ದಿನದ ಪತ್ರಿಕೆಯನ್ನು ನೋಡಿದ ಓದುಗರು ಬೆಚ್ಚಿಬಿದ್ದರು.

ಕನ್ನಡದ ಬೇರಾವ ಪತ್ರಿಕೆಯೂ ಭೀಮಸೇನ ಜೋಷಿ ಅವರ ಬಗ್ಗೆ ಇಷ್ಟೊಂದು ಮಾಹಿತಿ ನೀಡಿರಲಿಲ್ಲ ಎಂದು ವಿ.ಕ. ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು, ಕೆಲ ಗಣ್ಯರ ಹೊಗಳಿಕೆಯನ್ನು ಇದಕ್ಕೆ ಪೂರಕವಾಗಿ ಪ್ರಕಟಿಸಿತ್ತು. ಇದರಲ್ಲಿ ಯು.ಆರ್. ಅನಂತಮೂರ್ತಿ ಅವರ ಪ್ರಶಂಸೆಯೂ ಸೇರಿಕೊಂಡಿತ್ತು.

ಅಸಲಿ ವಿಷಯವೇನೆಂದರೆ ಅನಂತಮೂರ್ತಿಯವರನ್ನು ಕೇಳದೇ ಅವರ ಪ್ರಶಂಸೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಈಗಾಗಲೇ ವಿಕದಿಂದಾಗಿ ಕಹಿ ಉಂಡಿರುವ ಅನಂತಮೂರ್ತಿ ಇದರಿಂದ ಸಿಟ್ಟಿಗೆದ್ದಿದ್ದಾರೆ. ತಾವು ಹೊಗಳದಿದ್ದರೂ, ಹೊಗಳಿದ್ದಾರೆ ಎಂದು ಕೊಚ್ಚಿಕೊಂಡಿರುವ ವಿಕದ ಸಂಪಾದಕ ಭಟ್ಟರಿಗೆ ಪತ್ರ ಬರೆದು ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಅನಂತಮೂರ್ತಿಯವರ 'ಪ್ರಶಂಸೆ' ಪ್ರಕಟಿಸಿದ ಭಟ್ಟರಿಗೆ ಅವರ ಈ ಪತ್ರ ಪ್ರಕಟಿಸುವ ಧೈರ್ಯ ಎಲ್ಲಿಂದ ಬಂದೀತು. ಈ ರೀತಿ ಓದುಗರಿಗೆ ಮೋಸ ಮಾಡಿ ಭಟ್ಟರು ಎಷ್ಟು ದಿನ ಹೊಟ್ಟೆ ತುಂಬಿಸಿಕೊಳ್ಳುತ್ತಾರೋ ಗೊತ್ತಿಲ್ಲ.

ಡಾ. ಸಿ.ಎಸ್. ದ್ವಾರಕಾನಾಥ್ ವಿರುದ್ಧ ಬಿಜೆಪಿಗಳ ಹೊಸ ತಂತ್ರ


ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಬಜೆಪಿ ಸರ್ಕಾರ ಹೊಸ ರೀತಿಯ ಕಿರುಕುಳ ನೀಡಲು ಹೊರಟಿದೆ.

ಮೊನ್ನಿನ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಂಬಂಧಿಸಿದಂತೆ 'ರಾಜೀನಾಮೆ ನೋಟೀಸ್ ವಾಪಾಸ್' ಎಂಬ ಸುದ್ದಿ ದೊಡ್ಡಕ್ಷರಗಳಲ್ಲಿ ಪ್ರಕಟವಾಗಿದ್ದನ್ನು ನೀವೂ ಗಮನಿಸಿರಬಹುದು. ಏನಿದರ ಹಿನ್ನೆಲೆ ಅಂದರೆ ಕಳೆದ ಮಾರ್ಚ್‌ನಲ್ಲೇ ಆಯೋಗದ ಅಧ್ಯಕ್ಷ ಡಾ. ದ್ವಾರಕಾನಾಥ ಸೇರಿದಂತೆ ಇನ್ನಿತರ ಸದಸ್ಯರು ರಾಜೀನಾಮೆ ನೀಡಬೇಕು ಆದೇಶ ನೀಡಲಾಗಿತ್ತು.

ಆದರೆ ದ್ವಾರಕಾನಾಥ ನೇರ ಹೈಕೋರ್ಟ್‌ಗೆ ಹೋಗಿ ಇದಕ್ಕೆ ತಡೆಯಾಜ್ಞೆ ತಂದಿದ್ದರು. ಈಗ ಬಜೆಪಿಗಳ ಸಂಕಟ ಏನೆಂದರೆ ಇಡೀ ದೇಶದಲ್ಲೇ ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನಸಂಖ್ಯೆ ಮತ್ತು ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಿಖರ ಮಾಹಿತಿ ಪಡೆಯಲು ಆಯೋಗವು ಮನೆ-ಮನೆ ಸಮೀಕ್ಷೆ ನಡೆಸಲು ರೆಡಿಯಾಗುತ್ತಿದೆ. ಆದರೆ ಬಿಜೆಪಿಯ ಮನುವಾದಿಗಳಿಗೆ ಇದು ಬೇಕಿಲ್ಲ. ಹಾಗಾಗಿ ಸಮೀಕ್ಷಾ ಕೆಲಸವನ್ನು ಖಾಸಗಿಯವರಿಗೆ ಒಪ್ಪಿಸುವ ಒಂದು ವಿಫಲ ಪ್ರಯತ್ನವೂ ನಡೆದಿತ್ತು. ಆದರೂ ಪಟ್ಟು ಬಿಡದ ಬಜೆಪಿಗಳು ಈಗ ಇಡೀ ಆಯೋಗವನ್ನೇ ನಿಷ್ಕ್ರಿಯಗೊಳಿಸಲು ಈಗ ಹೊಸ ತಂತ್ರ ರೂಪಿಸಿದ್ದಾರೆ. 'ರಾಜೀನಾಮೆ ನೋಟೀಸ್ ಹಿಂದಕ್ಕೆ' ಎಂಬ ಕ್ರಮ ಅದರ ಒಂದು ಭಾಗವಾಗಿದೆ. ನೋಟೀಸ್ ವಾಪಸ್ ಪಡೆದಿದ್ದೇವೆ ಎಂದು ಕೋರ್ಟ್‌ನಲ್ಲಿ ಹೇಳಿದರೆ ಆಗ ಆಯೋಗದ ಅಧ್ಯಕ್ಷ-ಸದಸ್ಯರ ರಾಜೀನಾಮೆ ಕೇಳದಂತೆ ಕೋರ್ಟ್ ನೀಡಿದ್ದ ತಡೆಯಾಜ್ಞೆ ತಂತಾನೇ ರದ್ದಾಗುತ್ತದೆ. ಆ ನಂತರ ಸಮಯ ಕಾದು ಏಕಾಏಕಿ ಆಯೋಗದ ಸದಸ್ಯ-ಅಧ್ಯಕ್ಷರನ್ನೆಲ್ಲಾ ಬದಲಾಯಿಸಿ ತನ್ನ ಬಜೆಪಿ ಅಜೆಂಡಾಗೆ ಒಗ್ಗುವ ಜನರನ್ನು ಅಲ್ಲಿಗೆ ತಂದು ಕೂರಿಸುವ ಯೋಜನೆ ಯಡ್ಡಿ ಸರ್ಕಾರದ್ದು.



ಈಗ್ಗೆ ಕೆಲ ದಿನಗಳ ಹಿಂದೆ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಆಯೋಗದವರೊಂದಿಗೆ ಮಾತನಾಡುತ್ತಾ "ನೀವಾಗೇ ರಾಜೀನಾಮೆ ಕೊಡಿ, ಇಲ್ಲದಿದ್ದರೆ ಏನು ಮಾಡಬೇಕೆಂಬುದು ನಮಗೆ ಗೊತ್ತಿದೆ" ಅಂತಾ ಧಮಕಿ ಹಾಕಿದರೆಂಬ ಸುದ್ದಿಯೂ ಇದೆ. ಬಹುಶಃ 'ನೋಟೀಸ್ ವಾಪಸ್' ಆದೇಶ ಆ ಹೊಸ ನಾಟಕದ ಮೊದಲ ದೃಶ್ಯವಾಗಿರಲಿಕ್ಕೂ ಸಾಕು. ಆದರೆ ಆಯೋಗವು ಇದ್ಯಾವುದನ್ನು ಲೆಕ್ಕಿಸದೆ ಸಮೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ತನ್ನ ಚಟುವಟಿಕೆಗಳನ್ನು ವೇಗವಾಗಿ ಮುಂದುವರೆಸುತ್ತಿದೆ.




Sub: Withdrawal of Govt Letter even No. dated 20-03-08 & Govt. letter dated SWD 80 Co-ordination 07(p) dated 20.03.2008

With reference to the above I am directed to intimate to you that vide letters mentioned above the Government had requested you to tender your resignation for the posts you have been nominated within three days. Now the Government are pleased to intimate to you that the letters mentioned above have been withdrawn by the Government with immediate effect.

Yours faithfully,

(K.SUBHAVAID)
Under Secretary to Government-II,
Social Welfare Department

ಈ ಆಯೋಗದ ಇಡೀ ತಂಡವನ್ನು ಹಾಗೂ ಅವರ ಹಿಂದುಳಿದ ವರ್ಗಗಳ ಬಗೆಗಿನ ಪ್ರಾಮಾಣಿಕ ಕಾಳಜಿಗಳನ್ನು ರಕ್ಷಿಸಲು ಕನ್ನಡಿಗರೆಲ್ಲರೂ ಗಮನ ಹರಿಸಬೇಕಿದೆ. ■



ಒ ಬಾಮಾ.... ಚಂದಮಾಮ ಅಂದ ಕವಿ ಹನುಮಂತಯ್ಯ

ಅಮೆರಿಕದ ಭಾವಿ ಅಧ್ಯಕ್ಷ ಬರಾಕ್ ಒಬಾಮಾ ...ನ್ನಡ ಕವಿಗಳಿಗೂ ಸ್ಫೂರ್ತಿಯಾಗಿಬಿಟ್ಟಿದ್ದಾನೆ.

ಕವಿ ಎನ್ಕೆ ಹನುಮಂತಯ್ಯ 'ಒ ಬಾಮ... ...ಚಂದಮಾಮ' ಎಂದು ಶುರುವಾಗಿ ಅವನ ಮೇಲೆ ...ಪರೀತದ ಆಶಾಭಾವನೆ ಇರಿಸಿಕೊಂಡಿರುವಂತೆ ...ಾಸವಾಗುವ ಒಂದು ಪದ್ಯ ಬರೆದು ಓದಿದ್ದಾರೆ. ...ೊನ್ನೆ ಬೆಂಗಳೂರಿನ ಕ್ರೈಸ್ತ ಕಾಲೇಜಿನಲ್ಲಿ ನಡೆದ 'ಕನ್ನಡ ...ಹಿತ್ಯದ ಹೊಸ ಒಲವುಗಳು' ಎಂಬ ವರ್ಕ್‌ಶಾಪ್‌ನಲ್ಲಿ ...ಮಾತನಾಡಲು ಬಂದಿದ್ದ ಹನುಮಂತಯ್ಯ ಒಬಾಮಾ ...ರಿತ ಪದ್ಯ ಓದುವಷ್ಟರಲ್ಲಿ ಅವನು ಅಮೆರಿಕದ ...ಾವಿ ಅಧ್ಯಕ್ಷನಾಗಿ ಆಯ್ಕೆಯಾಗಿದ್ದ. ಅಷ್ಟೇ ಅಲ್ಲ ...ಪಘಾನಿಸ್ತಾನದಲ್ಲಿ ಯುದ್ಧ ಮುಂದುವರೆಸುವು...ದಾಗಿಯೂ, ರಕ್ತಪಿಪಾಸು ಇಸ್ರೇಲ್ ಜೊತೆ ಗೆಳೆತನ ...ಳೆಸುವುದಾಗಿಯೂ ಹೇಳಿಕೊಂಡಿದ್ದ. ಜೊತೆಗೆ ...ಾರತೀಯ ಮೂಲದ ಆರೆಸ್ಸೆಸ್ ಹಿನ್ನೆಲೆಯ ಸೋನಲ್ ... ಎಂಬಾಕೆಯನ್ನು ತನ್ನ ಸಲಹೆಗಾರರ ಟೀಮಿಗೆ ...ೇರಿಸಿಕೊಂಡಿದ್ದ.

ನಾವು ಇಲ್ಲಿ ಕುಳಿತು ಆಶಿಸುವುದನ್ನೆಲ್ಲಾ ಬಹುಶಃ ...ಒಬಾಮಾ ಈಡೇರಿಸಲಾರ ಎಂಬುದಕ್ಕೆ ಇವೆಲ್ಲಾ ...ದಂಭಿಕ ಸಾಕ್ಷಿಗಳಾಗುತ್ತಿವೆ ಅಲ್ಲವೆ?

ಹನುಮಂತಯ್ಯನವರ 'ಕವಿಸಮಯ'ದಲ್ಲಿ ಇನ್ನಷ್ಟು ...ಚಿತ ರಾಜಕೀಯ ಗ್ರಹಿಕೆ ಇರಬೇಕಿತ್ತಲ್ಲವೆ ಅನ್ನಲು ... ಪ್ರಸಂಗನ್ನಿಲ್ಲಿ ಪ್ರಸ್ತಾಪಿಸಲಾಗಿದೆ ಅಷ್ಟೆ.





ಗೌರಿಬಿದನೂರು

ಚೆಲ್ಲಾ ಕೃಷ್ಣಮೂರ್ತಿ ಹತ್ಯೆ

ಈ ವಿಷಯ ಭಯಾನಕವೂ, ಹೃದಯ ವಿದ್ರಾವಕವೂ ಆಗಿದೆ. ದನ ಹಾಗೂ ದನಕರುಗಳು ಕುಡಿಯುವ ನೀರಿಗೆ ವಿಷ ಬೆರೆಸಬೇಡಿರೆಂದು ದನಿ ಎತ್ತಿದ ಸಜ್ಜನ ರೈತ ನಾಯಕನೊಬ್ಬನನ್ನು ಗೌರಿಬಿದನೂರಿನ ನೀಚ ನಾಯಕರು ಕೊಲ್ಲಿಸಿದ್ದಾರೆ.

ಚೆಲ್ಲಾ ಕೃಷ್ಣಮೂರ್ತಿ ಎಂಬ ಮಗು ಮನಸ್ಸಿನ ಬೇಸಾಯಗಾರನನ್ನು ಇದೇ ನವೆಂಬರ್ 10 ರ ನಡು ಮಧ್ಯಾಹ್ನ ರಸ್ತೆಯಲ್ಲೇ ಅಟ್ಟಾಡಿಸಿ ಕೊಚ್ಚಿ ಕೊಲ್ಲಲಾಗಿದೆ. ಈ ಹತ್ಯೆ ನಡೆದು ಒಂದು ವಾರ ಕಳೆದಮೇಲೂ ಗೌರಿಬಿದನೂರಿನ ಪೊಲೀಸರು ಒಬ್ಬಾನೊಬ್ಬ ಪಾತಕಿಯನ್ನು ಅರೆಸ್ಟ್ ಮಾಡಿಲ್ಲ. ಕೊಲೆಗೆ ಕುಮ್ಮಕ್ಕು ಕೊಟ್ಟಿರುವ ಗೌರಿ ಡಿಸ್ಟಲರಿಯ ಮಾಲೀಕನ ಹತ್ತಿರಕ್ಕೂ ಹೋಗಿಲ್ಲ ಅಂದರೆ ಕರ್ನಾಟಕ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಯಾವ ಅಧೋಗತಿಗೆ ಇಳಿದಿರಬೇಕು.

ಈಗ ರಾಜ್ಯದಲ್ಲಿ ರೈತರು ಗೊಬ್ಬರ ಕೇಳಿದರೆ ಗುಂಡೇಟು, ನೀರು ಕೇಳಿದರೆ ಮಚ್ಚಿನೇಟು ಖಾತ್ರಿ.... ಗೃಹಸಚಿವ ವಿ.ಎಸ್ ಆಚಾರ್ಯನ ಅಯೋಗ್ಯತೆ ಇದು.

ಡಿಸ್ಟಿಲರಿ ಎಂಬ ವಿಷ ಕಾರ್ಖಾನೆ

ಕಳೆದ 10-12 ವರ್ಷಗಳಿಂದ ಗೌರಿಬಿದನೂರಿನಿಂದ ಮೂರು ಕಿಲೋಮೀಟರ್ ದೂರದಲ್ಲಿ ಕಾರ್ಯಾಚರಿಸುತ್ತಿರುವ ಗೌರಿ ಡಿಸ್ಟಿಲರಿ ಮೊದಲು ಸರ್ಕಾರಿ ಖಂಡಸಾರಿ ಕಾರ್ಖಾನೆಯಾಗಿದ್ದು ಅದೀಗ ಖಾಸಗಿಯವರ ಕೈಗೆ ಹೋಗಿದೆ.



ಚೌಡಪ್ಪ

ಕರ್ನಾಟಕದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಎಂಬುದೊಂದು ಇದೆಯಾದರೂ ಈ ಹಲ್ಕಾಗಳು ಎಚ್ಚೆತ್ತ ಸ್ಥಿತಿಯಲ್ಲಿ ಎಂದೂ ಇರುವುದಿಲ್ಲ, ಸದಾ ಲಂಚ ಕೀಳುವ ಹೊಸ ಅವಕಾಶಗಳನ್ನೇ ಕಾಯುವ ಮಾಲಿನ್ಯ ಮಂಡಳಿಯ ಅಧಿಕಾರಿಗಳು ಗೌರಿ ಡಿಸ್ಟಿಲರಿಗೆ ಎಂದೂ ಯಾವ ಪರಿಸರ ರಕ್ಷಣೆಯ ನಿಯಮಗಳನ್ನು ಹೇರಿರಲಿಲ್ಲ. ಇದರಿಂದಾದ ಅನಾಹುತವೆಂದರೆ ಎಲ್ಲರೂ ನೋಡ ನೋಡುತ್ತಿದ್ದಂತೆ ಗೌರಿಬಿದನೂರಿನ ಸುತ್ತಲಿನ ಹತ್ತು ಕಿ.ಮೀ. ಪಾಸಲೆಯ ನೆಲ-ಜಲ ಪೂರ್ತಿ ಡಿಸ್ಟಿಲರಿ ತ್ಯಾಜ್ಯದಿಂದ ವಿಷಮಯವಾಗಿ ಹೋಗಿತ್ತು. ಅಷ್ಟರಲ್ಲಿ ಮರಳು ಮಾಫಿಯಾದ ಹೊಡೆತಕ್ಕೆ ಸಿಕ್ಕು ನಲುಗಿ ಹೋಗಿದ್ದ ಜನ ಈ ಡಿಸ್ಟಿಲರಿ ರಕ್ಕಸರ ವಿರುದ್ಧ ದನಿ ಎತ್ತುವ ಶಕ್ತಿಯನ್ನೇ ಕಳೆದುಕೊಂಡಿದ್ದರು. ಆಗ ಕಾಣಿಸಿಕೊಂಡವರೆ ಮೊನ್ನೆ ಹತ್ಯೆಯಾದ ಚೆಲ್ಲಾ ಕೃಷ್ಣಮೂರ್ತಿ.

ಇಡಗೂರು ಗ್ರಾಮದ ಚೆಲ್ಲಾ ಸ್ವತಃ ಒಬ್ಬ ಸಾವಯವ ಕೃಷಿಕರಾಗಿದ್ದು ಅಪಾರ ಸಾಮಾಜಿಕ ಕಾಳಜಿಗಳಿದ್ದ ಮನುಷ್ಯ. ಅದೇ ಗೌರಿಬಿದನೂರಿನ ಚೌಡಪ್ಪ, ರೈತ ಸಂಘದ ಮೋಹನ್, ಲಕ್ಷ್ಮೀನಾರಾಯಣ್ ಮತ್ತಿರರ ಜೊತೆ ಸೇರಿ ಅಕ್ರಮ ಮರಳು ಸಾಗಣೆ, ಡಿಸ್ಟಿಲರಿಯ ಮಾಲಿನ್ಯದ ವಿರುದ್ಧ ಅಂದಿನ ಕೋಲಾರ ಡಿಸಿ, ಎಸ್‌ಪಿಗೆ, ರಾಜ್ಯ ಮಾಲಿನ್ಯ ಮಂಡಳಿಗೂ ಸಾಕ್ಷಿ ಸಹಿತ ದೂರು ನೀಡಿ ಜನರನ್ನು ರಕ್ಷಿಸುವಂತೆ ಒತ್ತಾಯಿಸಿದ್ದರು. ಕಾರ್ಖಾನೆಯ ವಿಷಯುಕ್ತ ತ್ಯಾಜ್ಯವನ್ನು ಅಕ್ಕಪಕ್ಕದ ಕೆರೆ-ಕುಂಟೆ, ರೈತರ ಹೊಲಗಳಲ್ಲಿ ಚೆಲ್ಲಿ ಬರುತ್ತಿದ್ದ ಡಿಸ್ಟಿಲರಿಯ ಖೂಳರಿಗೆ ಚೆಲ್ಲಾ ಅವರ ಹೋರಾಟ ಅಸಹನೀಯವಾಗತೊಡಗಿತು. ಇವರೆಂತಾ ಭಂಡರೆಂದರೆ ಒಂದು ಸಾರಿ ಡಿಸಿ ಅಂಜುಂ ಪರ್ವೇಜ್ ಹಾಗೂ ಜಿಲ್ಲಾ ಎಸ್‌ಪಿ ಇದ್ದ ಸಭೆಯಲ್ಲೇ ಚೆಲ್ಲಾರ ಮೇಲೆ ಹಲ್ಲೆಗೆ ಯತ್ನಿಸಿದ್ದರು. ಆದರೂ ಚೆಲ್ಲಾ ಹಠ ಬಿಡದ ಕಾರಣ ಒಮ್ಮೆ ಡಿಸ್ಟಿಲರಿಗೆ ಬೀಗ ಬಿತ್ತು. ನಂತರ ಮಾಲಿನ್ಯ ನಿಯಂತ್ರಣಕ್ಕೆ ವ್ಯವಸ್ಥೆ ಮಾಡುವುದಾಗಿ ಡಿಸ್ಟಿಲರಿ ಮಾಲೀಕ ಮುಚ್ಚಳಿಕೆ ಬರೆದುಕೊಟ್ಟನೆಂದು ಮತ್ತೆ ಬೀಗ ತೆಗೆಸಲಾಯಿತು. ಆದರೆ ಡಿಸ್ಟಿಲರಿಯ ದುರಾಚಾರಗಳ ಬಗ್ಗೆ ಚೆಲ್ಲಾ ಒಬ್ಬರನ್ನು ಬಿಟ್ಟು ಸರ್ಕಾರದವರ್‍ಯಾರೂ ಮತ್ತೆ ನಿಗಾ ಮಾಡಲಿಲ್ಲ. ಕಾರ್ಖಾನೆಯ ವಿಷ ಮತ್ತೆ ಜನರ ಮನೆ ಬಾಗಿಲಿಗೇ ಹರಡತೊಡಗಿತ್ತು. ಈ ಹಂತದಲ್ಲಿ ಮತ್ತೆ ಹೋರಾಟಕ್ಕಿಳಿದ ಚೆಲ್ಲಾ ಕೇಂದ್ರ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಗೇ ಪತ್ರ ಬರೆದರು. ಮುಖ್ಯಮಂತ್ರಿ, ಪ್ರಧಾನಿಗೂ ಮನವಿ ಕಳಿಸಿದ್ದರು. ಈ ಪ್ರಯತ್ನಗಳ ಫಲವಾಗೇ ಇತ್ತೀಚೆಗೆ ಕೇಂದ್ರದ ಅಧಿಕಾರಿಗಳ ತಂಡವೊಂದು ಗೌರಿಬಿದನೂರಿಗೂ ಬಂತು. ಅವರಿಗೆ ಮಾಲಿನ್ಯದ ಭಯಾನಕ ಪರಿಣಾಮಗಳ ಬಗ್ಗೆ ಸರಿಯಾದ ಸಾಕ್ಷ್ಯ ಒದಗಿಸಬೇಕೆಂದು ಫೋಟೋ ಹಾಗೂ ವೀಡಿಯೋ ಚಿತ್ರ ತೆಗೆಯಲು ನವೆಂಬರ್ 10 ರಂದು ಹೊರಟಿದ್ದರು ಚೆಲ್ಲಾ. ಅವತ್ತು ಬೆಳಗಿನಿಂದಲೇ ತೊಂಡೇಬಾವಿ ಹೋಬಳಿ, ಕಸಬಾ ಹೋಬಳಿಗಳ ಹಳ್ಳಿಗಳಿಗೆ ಹೋಗಿ ಅಗತ್ಯ ಫೋಟೋಗಳನ್ನು ತೆಗೆದು ಕೊನೆಗೆ ಮಧ್ಯಾಹ್ನ ಎರಡು ಗಂಟೆಯ ಸುಮಾರಿಗೆ ಡಿಸ್ಟಿಲರಿಗೆ ಸಮೀಪದ ಕೋಟೇನಹಳ್ಳಿ ಬಳಿ ಹೋಗಿದ್ದಾರೆ. ಆಗ ಅಲ್ಲಿಗೇ ಬಂದ ದುಷ್ಕರ್ಮಿಗಳು ಚೆಲ್ಲಾರ ಮೇಲೆ ಬಿದ್ದು ಮನಬಂದಂತೆ ಕೊಚ್ಚಿ ಹೋಗಿದ್ದಾರೆ. ಈ ಹತ್ಯಾಯತ್ನ ನಡೆಯುತ್ತಿರುವಾಗಲೇ ಗೆಳೆಯ ಚೌಡಪ್ಪನವರಿಗೆ ಮೊಬೈಲ್ ಮೂಲಕ ಫೋನ್ ಮಾಡಿದ ಚೆಲ್ಲಾ "ನನ್ನ ಕೊಲೆ ಆಗುತ್ತಿದೆ" ಎಂತಲೂ ಹೇಳಿದ್ದಾರೆ. ಚೌಡಪ್ಪ ತಕ್ಷಣ ಇದನ್ನು ಪೊಲೀಸರಿಗೆ ಹೇಳಿದರಾದರೂ ಚೆಲ್ಲಾ ಉಳಿಯಲಿಲ್ಲ. ಈಗ್ಗೆ 6 ತಿಂಗಳ ಹಿಂದೆಯಷ್ಟೇ ಗೌರಿಬಿದನೂರಿಗೆ ಬಂದಿರುವ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀನಿವಾಸಮೂರ್ತಿ ಹೊಟ್ಟೆಗೆ ಅನ್ನ ತಿನ್ನುವ ಮನುಷ್ಯನಾದರೆ ಈಗ ಎಲ್ಲರಿಗೂ ಗೊತ್ತಾಗಿರುವ ಕೊಲೆಗಾರರನ್ನು ಬಂಧಿಸಲಿ. ಕಾಂಗ್ರೆಸ್ ಶಾಸಕ ಶಿವಶಂಕರ ರೆಡ್ಡಿ ಸೇರಿದಂತೆ ಗೌರಿಬಿದನೂರಿನ ಎಲ್ಲಾ ಹಾಲಿ-ಮಾಜಿ ಎಂಎಲ್‌ಎಗಳೂ ಡಿಸ್ಟಿಲರಿಯ ಹಣ ತಿಂದಿದ್ದಾರೆ, ಎಲೆಕ್ಷನ್ ಖರ್ಚು ಕಿತ್ತಿದ್ದಾರೆ. ಆದರೆ ಗೌರಿಬಿದನೂರು ಟೌನಿನ ಐವತ್ತು ಸಾವಿರ ಜನರಿಗೆ ಕುಡಿಯುವ ನೀರಿಗೆ ವಿಷ ಬೆರೆಸಬಾರದೆಂಬ ಕನಿಷ್ಠ ಕಾಳಜಿಯೂ ಇವರಿಗಿಲ್ಲ ಎಂದರೆ ಏನರ್ಥ?



ಶಿವಶಂಕರ್ ರೆಡ್ಡಿ

ಚೆಲ್ಲಾ ಕೃಷ್ಣಮೂರ್ತಿಯಂಥ ಅಪರೂಪದ ಸಜ್ಜನಿಕೆಯ, ಪ್ರಾಮಾಣಿಕ ಧೈರ್ಯಶಾಲಿ ರೈತ ನಾಯಕರ ರಕ್ತ ಕುಡಿದಿರುವ ಗೌರಿಬಿದನೂರಿನ ದುಷ್ಟರಿಗೆ ಜನರೇ ಪಾಠ ಕಲಿಸಬೇಕಿದೆ. ■



...ವೇಕ ಶಾನಭಾಗರ 'ಹುಲಿ' ಮೇಲೆ ಮಾಲತಿ 'ಸವಾರಿ'

ಇದೊಂದು ಅನಪೇಕ್ಷಿತ ಸಣ್ಣ ಸಾಹಿತ್ಯದ ವಿವಾದ. ...ಾರ ವಿವೇಕ ಶಾನಭಾಗರ 'ಹುಲಿ ಸವಾರಿ' ಬಹುತೇಕ ...ತ್ಯಾಸಕ್ತರ ಗಮನ ಸೆಳೆದಿದ್ದ ಕತೆ. ಅದೀಗ ...ಟಕವಾಗಿಯೂ ರೂಪಾಂತರಗೊಂಡಿದೆ. ಅದನ್ನ ...ಟಕವಾಗಿಸಿದ್ದು ಬರಹಗಾರ್ತಿ ಎಸ್. ಮಾಲತಿ. ಆದರೆ ...ಯ ಏನೆಂದರೆ ಈ ಕತೆಯನ್ನು ನಾಟಕಕ್ಕೆ ...ವಡಿಸುವಾಗ ಮಾಲತಿಯವರು ವಿವೇಕರ ...ಮತಿಯನ್ನು ಪಡೆಯದೆ, ಕೊನೆಗೆ ಅವರ ಗಮನಕ್ಕೂ ...ದೆ ರೂಪಾಂತರಿಸಿಬಿಟ್ಟಿದ್ದಾರೆ ಎಂಬುದು.

...ಹುಲಿ ಸವಾರಿಯ ನಾಟಕ ರೂಪಾಂತರ ವಿಜಯ ...ಟಕದ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಗಿತ್ತು. ...ನ್ನು ಗಮನಿಸಿದ ಶಾನಭಾಗ್ ಈಗ ವಿಕಗೆ ಒಂದು ... ಬರೆದು ತಮಗಾದ ಬೇಸರವನ್ನು ಹೇಳಿಕೊಂಡಿದ್ದಾರೆ. ...ಈ ಬೇಸರ ಕೇವಲ ಪೂರ್ವಾನುಮತಿಯದ್ದು ...ತ್ರವಲ್ಲ, ಜೊತೆಗೆ ರೂಪಾಂತರದಲ್ಲಿ ಮೂಲಕತೆಯ ...ntent, ಆಶಯಗಳೂ ಸರಿಯಾಗಿ ಧ್ವನಿಸಿಲ್ಲ ...ಬುದೂ ಆಗಿದೆ.

...ಬರಹಗಾರರೊಬ್ಬರ ಸೃಜನಶೀಲ ಜಗತ್ತಿನೊಳಗೆ ...ನೊಬ್ಬರು ಏಕಾಏಕಿ ಪ್ರವೇಶಿಸಿ (ಒತ್ತುವರಿ) ತಮ್ಮ ...ಪ್ಪಟ ನೆಡುವ ಮುನ್ನ ಸ್ವಲ್ಪ ಯೋಚಿಸಬೇಕಲ್ಲವಾ? ...ಸ್ವತಃ ಪ್ರತಿಭಾಶಾಲಿ ನಟಿ, ವಿಮರ್ಶಕಿಯಾಗಿರುವ ...ಾಲತಿಯವರು ಈ ವಿವಾದವನ್ನು ಸರಿಯಾದ ಸ್ಪಿರಿಟ್‌ನಲ್ಲಿ ... ಬಗೆಹರಿಸಿಕೊಳ್ಳುತ್ತಾರೆ ಎಂದು ಆಶಿಸೋಣ.

ಜೇವರ್ಗಿಯಲ್ಲೊಂದು ಕೊಳ್ಳಿದೆವ್ವ!



ಜೇವರ್ಗಿ ತಾಲೂಕಿನ ಆಂದೋಲಾ ಮಠದಲ್ಲಿರುವ ಸಿದ್ಧಲಿಂಗ ಎಂಬ 'ಕೊಳ್ಳಿದೆವ್ವ' ಸಮಯ ಸಿಕ್ಕಾಗಲೆಲ್ಲ ಬೆಂಕಿಹಚ್ಚುವ ಕೆಲಸವನ್ನು ಮಾಡುತ್ತಿರುತ್ತದೆ. ಯಾವತ್ತು ಈ ದೆವ್ವ ಮುತಾಲಿಕ ಎಂಬ ಹಿಂದೂತ್ವವಾದಿಯ ಬೆನ್ನುಬಿದ್ದಿತೋ ಆವಾಗಿನಿಂದಲೆ ಮನಸಿಗೆ ಬಂದುದನ್ನೆಲ್ಲ ಬೊಗಳತೊಡಗಿದೆ. ಮುಸ್ಲಿಂರೆಂದರೆ ಸಾಕು ವಿಷಕಕ್ಕುವ ಈತ ಆಂದೋಲ ಮಠದ ಕರುಣೇಶ್ವರರನ್ನು ಎಂದೋ ಆಪೋಶನ ಮಾಡಿಬಿಟ್ಟಿದ್ದಾನೆ.

"ಸರ್ವಜನರಿಗೂ ಲೇಸಬಯಸುವ ಕುಲಜನೆ ಶರಣನು" ಎಂದು ಬಗೆದಿದ್ದ ಆಂದೋಲದ ಕರುಣೇಶ್ವರರು ಎಂಬ ಶರಣರೆಲ್ಲಿ? ಈ ಪಡಪೋಶಿ ಎಲ್ಲಿ? ತನ್ನ ರಕ್ತ ಸಂಬಂಧಿಗಳಿಂದ ಅನಾಯಾಸವಾಗಿ ಬಂದ 'ಜಂಗಮ' ಪದವನ್ನು ತನ್ನ ನಡತೆ ಮಾತುಗಳ ಮೂಲಕ ಭ್ರಷ್ಟಗೊಳಿಸುತ್ತ ಹೊರಟಿದ್ದಾನೆ. ಬ್ರಾಹ್ಮಣಿಕೆಯ ತ್ರಂತ್ರಗಳನ್ನು, ಅವಕಾಶವಾದಿತನವನ್ನು ಸಂಪೂರ್ಣ ಮೈಗೂಡಿಸಿಕೊಂಡಿರುವ ಈ 'ಜಾಬಾದಿ ಜಂಗಮ' ಬಾಯಿಗೆ ಬಂದಂತೆ ಬಕಾಯಿಸಿದ್ದಕ್ಕೆ ಜೇವರ್ಗಿಯ ಐಬಿ ಹತ್ತಿರ ಕೆಲವರಿಂದ ಗೂಸಾ ತಿಂದದ್ದಲ್ಲದೆ ಜೀವಭಯದಿಂದ ಓಡಿಹೋಗಿ ಮೂಲೆ ಸೇರಿದ್ದ. ಏನಾದರೂ ಮಾಡಿ ತಾನು ಬ್ರಾಹ್ಮಣ ಸ್ವಾಮಿಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಅವರಿಂದಲೂ ಭೇಷ್ ಅನ್ನಿಸಿಕೊಳ್ಳಬೇಕು ಎಂಬ ಚಟಕ್ಕೆ ಬಿದ್ದಿರುವ ಈತ ಈಗ ಪೇಜಾವರ ಸ್ವಾಮಿಯ ಪರ ಒಂದೇ ಸಮ ಅರಚತೊಡಗಿದ್ದಾನೆ. ಪೇಜಾವರಸ್ವಾಮಿ ಇತ್ತೀಚೆಗೆ ದಲಿತರಿಗೆ "ಹಿಂದೂ ಧರ್ಮ ತೊರೆದು ಬೌದ್ಧಧರ್ಮಕ್ಕೆ ಮತಾಂತರ ಆಗಬೇಡಿ" ಎಂದು ನೀಡಿದ ಸಲಹೆ ಅತ್ಯಂತ ಸಮಯೋಚಿತ ಹಾಗೂ ಸಮರ್ಥನೀಯ ಎಂದು ಈತ ಹೇಳುತ್ತಿದ್ದಾನೆ. ಜೊತೆಗೆ ಪೇಜಾವರರ ಕುತಂತ್ರವನ್ನು ಸರಿಯಾಗಿ ಅರ್ಥೈಸಿಕೊಂಡು ಪ್ರತಿಭಟನೆಗೆ ಇಳಿದ ಪ್ರಜ್ಞಾವಂತ ಜನಗಳ ಮೇಲೆ ಸುಖಾಸುಮ್ಮನೆ ಕಿಡಿಕಾರತೊಡಗಿದ್ದಾನೆ.

"ಹಿಂದೂ ಧರ್ಮದ ರಕ್ಷಣೆಗಾಗಿಯೆ ಹುಟ್ಟಿದ ಬಿಜೆಪಿ ಪಕ್ಷದ ರಾಜಕೀಯ ನಾಯಕರು ಕೈಯಲ್ಲಿ ಬಳೆ ತೊಟ್ಟಿದ್ದಾರೆಯೆ?" ಎಂದೂ ಪ್ರಶ್ನಿಸುವ ಮೂಲಕ ಸರಕಾರಕ್ಕೂ ಸೆಡ್ಡು ಹೊಡೆದು ನಿಂತಿದ್ದಾನೆ.

ಈ ಕೊಳ್ಳಿ ದೆವ್ವವನ್ನು ಹೀಗೆ ಬಿಟ್ಟರೆ ಮುಂದೊಂದು ದಿನ ಉತ್ತರ ಕರ್ನಾಟಕದ ಜನಗಳ ಮನೆ-ಮನಸ್ಸಿಗೂ ಈತ ಬೆಂಕಿ ಹಚ್ಚುತ್ತಾನೆ. ಇವರನ್ನು ತಡೆಯುವ ತಾಕತ್ತು ಬಿಡ್ಡಿ ಸರಕಾರಕ್ಕೆ ಇದೆಯೆ? ಅಥವಾ ಈತ ಆರೋಪಿಸಿರುವಂತೆ ಬಿಡ್ಡಿಗಳ ಸರ್ಕಾರ ನಿರ್ವೀಯವಾಗಿದೆಯೇ?

ಉತ್ತರ ಬಿಡ್ಡಿಯೊಳಗಿಂದಲೇ ಬರಬೇಕು! ■

ಬ.ಕಲ್ಯಾಣದಲ್ಲಿ ಶರಣವಿಚಾರಗಳ ಮಾರಣಹೋಮ

ಬಸವಾದಿ ಶರಣರ ಕರ್ಮಭೂಮಿಯಾದ ಬಸವಕಲ್ಯಾಣದಲ್ಲಿ ಇತ್ತೀಚೆಗೆ ಮೂರು ದಿನಗಳ ಶರಣಕಮ್ಮಟವೊಂದು ಬಹು ಅದ್ದೂರಿಯಾಗಿ ನಡೆಯಿತು. ಆದರೆ ಅಲ್ಲಿ ಮಠದ ಪ್ರೇಮಿಗಳಿಗಿಂತ ಮಠಾಧಿಗಣಂಗಳೆ ಮಿಂಚಿದ್ದು ಹೇಸಿಗೆ ಹುಟ್ಟಿಸುವಂತಿತ್ತು. ಜೊತೆಗೆ ವ್ಯವಸ್ಥಿತ ಅನ್ನುವುದಕ್ಕಿಂತ ಅವ್ಯವಸ್ಥೆಯೇ ಮೆರೆದಿತ್ತು.



ಅದೆಲ್ಲಕ್ಕಿಂತ ದೊಡ್ಡ ದುರಂತವೊಂದು ಆ ಕಮ್ಮಟದಲ್ಲಿ ಜರುಗಿತು. ಅದೇನೆಂದರೆ ಲಿಂಗೈಕ್ಯ ಡಾ.ಚೆನ್ನಬಸವಪಟ್ಟದ್ದೇವರ ಹೆಸರಿನಲ್ಲಿ ಕೊಡುವ 'ಅನುಭವ ಮಂಟಪ ಪ್ರಶಸ್ತಿ'ಯನ್ನು ಈ ಬಾರಿ 'ವಿಜಯ ಕರ್ನಾಟಕ' ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ಟನಿಗೆ ಅರ್ಪಿಸಿದ್ದು! ಶರಣಸಾಹಿತ್ಯದಲ್ಲಿ ಆಳವಾದ ಸಂಶೋಧನೆ ಮಾಡಿದ ಅಥವಾ ಆ ಸಾಹಿತ್ಯವನ್ನು ಪ್ರಚುರ ಪಡಿಸುತ್ತಿರುವ ಮತ್ತು ಶರಣರ ಆಶಯಗಳಿಗೆ ಸ್ಪಂದಿಸುವಂತೆ ಬದುಕುತ್ತಿರುವ ಯಾರಿಗಾದರೂ ಈ ಪ್ರಶಸ್ತಿ ಕೊಡಮಾಡಿದ್ದರೆ ಅದರ ಕಿಮ್ಮತ್ತು ಹೆಚ್ಚುತ್ತಿತ್ತು. ಆದರೆ ಬಸವಾದಿ ಶರಣರ ಆಶಯಗಳಿಗೆ ಕನಿಷ್ಠ ಸ್ಪಂದನವಿರಲಿ, ಅತ್ತ ಅಣಕಿಯೂ ಹಾಕದ, ಅವರ ತತ್ವಗಳಿಗೆ ತೀರಾ ತದ್ವಿರುದ್ಧವಾಗಿ ಬದುಕುತ್ತಿರುವ, ಬರೆಯುತ್ತಿರುವ ವಿ.ಭಟ್ಟನಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ಹಮ್ಮಿಣಿಯೊಂದಿಗೆ ಪ್ರಶಸ್ತಿಯನ್ನು ಅರ್ಪಿಸಿದ್ದು ಶರಣ ಸಂಸ್ಕೃತಿಗೇ ಮಾಡಿದ ಅವಮಾನವೇ ಸರಿ.

ಅಂತೂ ಕಮ್ಮಟದಲ್ಲಿ 'ಕಿಂಭೂತಗಳೆಲ್ಲ ನವಿಲುಗಳಂತೆ' ಕುಣಿದದ್ದು ಸಮಕಾಲೀನ ವಿಪರ್ಯಾಸಗಳಲ್ಲಿ ಒಂದಾಗಿತ್ತು. ■

ಕನ್ನಡ ಚಿತ್ರರಂಗ 160 ಕೋಟಿ ಲಾಸ್!

ಕನ್ನಡದಲ್ಲಿ ಈ ವರ್ಷ ಬಿಡುಗಡೆಯಾಗಿರುವುದು ಸುಮಾರು ತೊಂಭತ್ತಾರು ಚಿತ್ರಗಳು. ಆದರೆ ಇಷ್ಟು ಚಿತ್ರಗಳಲ್ಲಿ ನಿರ್ಮಾಪಕ ಹಾಕಿದ ಹಣವನ್ನು ಮರಳಿಸಿರುವುದು ಕೇವಲ ಏಳೆಂಟು ಚಿತ್ರಗಳು ಮಾತ್ರ. ಹೀಗಾಗಿ ಚಿತ್ರರಂಗ ಏನಿಲ್ಲವೆಂದರೂ ನೂರರವತ್ತು ನೂರೆಪ್ಪತ್ತು ಕೋಟಿಗಳ ದೊಡ್ಡ ನಷ್ಟದಲ್ಲಿ ಮುಳುಗಿದೆ.

■ ಅರುಣ್ ಕುಮಾರ್.ಜಿ





ಕನ್ನಡ ಚಿತ್ರರಂಗ ತನ್ನ ಎಪ್ಪತ್ತೈದನೇ ಡೈಮಂಡ್ ಜ್ಯೂಬಿಲಿಯ ಹೊಸ್ತಿಲಲ್ಲಿರುವ ಈ ಶುಭ ಸಂದರ್ಭದಲ್ಲೇ ಹಿಂದೆಂದೂ ಅನುಭವಿಸದ ನಷ್ಟಕ್ಕೆ ಗುರಿಯಾಗಿ ದಿವಾಳಿಯಾಗುವ ಮುನ್ಸೂಚನೆಯನ್ನು ತೋರುತ್ತಿದೆ.

ಚಿತ್ರರಂಗದ ಅನ್ನದಾತನಾದ ನಿರ್ಮಾಪಕ ಪಾಪರ್ ಆಗುತ್ತಿದ್ದರೆ, ಇಲ್ಲಿನ ಹೀರೋಗಳು ದಿನದಿಂದ ದಿನಕ್ಕೆ ಲೆಕ್ಕವಿಲ್ಲದಷ್ಟು ದುಡ್ಡಿಗೆ ಅಧಿಪತಿಗಳಾಗುತ್ತಾ ದುಂಡಗಾಗುತ್ತಿದ್ದಾರೆ.

ಈ ವರ್ಷ ಬಿಡುಗಡೆಯಾಗಿರುವುದು ಸುಮಾರು ತೊಂಭತ್ತಾರು ಚಿತ್ರಗಳು. ಚಿತ್ರರಂಗದ ಇತಿಹಾಸವನ್ನು ಒಮ್ಮೆ ನೋಡಿದರೆ ಈ ಬಾರಿ ಇಷ್ಟು ಸಂಖ್ಯೆಯ ಚಿತ್ರಗಳು ಬಿಡುಗಡೆಯಾಗಿರುವುದು ದಾಖಲೆಯೇ ಸರಿ. ಆದರೆ ಇಷ್ಟು ಚಿತ್ರಗಳಲ್ಲಿ ನಿರ್ಮಾಪಕ ಹಾಕಿದ ಹಣವನ್ನು ಮರಳಿಸಿರುವುದು ಕೇವಲ ಏಳೆಂಟು ಚಿತ್ರಗಳು ಮಾತ್ರ. ಹೀಗಾಗಿ ಚಿತ್ರರಂಗ ಏನಿಲ್ಲವೆಂದರೂ ನೂರರವತ್ತು, ನೂರೆಪ್ಪತ್ತು ಕೋಟಿಗಳ ದೊಡ್ಡ ನಷ್ಟದಲ್ಲಿ ಮುಳುಗಿಹೋಗಿದೆ.

ವರ್ಷದ ಆರಂಭದಲ್ಲಿ ಬಂದ 'ಗಜ' ಕಲೆಕ್ಷನ್‌ನಲ್ಲಿ ಒಳ್ಳೆಯ ಮುನ್ನುಡಿ ಬರೆದಿತ್ತು. ನಂತರದಲ್ಲಿ ಬಂದ ಗಣೇಶನ 'ಗಾಳಿಪಟ' ನೋ ಲಾಸ್ ನೋ ಪ್ರಾಫಿಟ್ ಎಂಬಂತಾಯಿತು. ಈ ಚಿತ್ರದ ನಿರ್ಮಾಪಕನಿಗಿಂತ ನಿರ್ಮಾಣದ ನೇತೃತ್ವ ವಹಿಸಿದ್ದ ದಯಾಳ್‌ಗೇ ಹೆಚ್ಚು 'ಲಾಭ'ವಾಗಿತ್ತು ಎಂಬುದು ಬೇರೆ ಮಾತು. ಕವಿತಾ ಲಂಕೇಶ್ ನಿರ್ದೇಶನದ ಮತ್ತು ಪಿ.ಲಂಕೇಶರ ಕಾದಂಬರಿ ಆಧಾರಿತ 'ಅವ್ವ' ಮೊದಲ ವಾರದಲ್ಲೇ ತನ್ನ ಅಸಲನ್ನು ವಾಪಸ್ಸು ಪಡೆದಿತ್ತು. ಕಡಿಮೆ ಬಜೆಟ್‌ನಲ್ಲಿ ಎಂಟು-ಹತ್ತು ದಿನಗಳಲ್ಲೇ ಚಿತ್ರೀಕರಿಸಿದ್ದ 'ಮಿ. ಗರಗಸ' ನಿರ್ಮಾಪಕನಿಗೆ ಬಂಪರ್ ಲಾಭವನ್ನು ತಂದುಕೊಟ್ಟಿತು. ಲೂಸ್ ಮಾದ ಅಭಿನಯಿಸಿದ 'ನಂದ ಲವ್ಸ್ ನಂದಿತ', ಸುದೀಪ್‌ನ 'ಮುಸ್ಸಂಜೆ ಮಾತು' ನಂಬಿದ ನಿರ್ಮಾಪಕನಿಗೆ ಕೈಕೊಡಲಿಲ್ಲ. 'ತಾಜ್ ಮಹಲ್' ಇದ್ದುದರಲ್ಲೇ ಒಳ್ಳೇ ಕಲೆಕ್ಷನ್ ಕಂಡಿತ್ತು. 'ತಾಜ್ ಮಹಲ್'ನೊಂದಿಗೇ ಬಂದ 'ಮೊಗ್ಗಿನ ಮನಸು' ಎಲ್ಲೆಡೆಯಿಂದ ಪ್ರಶಂಸೆಗೆ ಪಾತ್ರವಾದರೂ ಹೇಳಿಕೊಳ್ಳುವಂತಹ ದುಡ್ಡೇನೂ ಮಾಡಲಿಲ್ಲ. 'ಬಿಂದಾಸ್' ಬರಕತ್ತಾಗದಿದ್ದರೂ ತೀರಾ ಲಾಸ್ ಆಗಲಿಲ್ಲ. ಇನ್ನು ಈಗಷ್ಟೆ ಐವತ್ತು ದಿನಗಳನ್ನು ಪೂರೈಸಿರುವ 'ಬುದ್ಧಿವಂತ' ಈ ಹಿಟ್ ಚಿತ್ರಗಳ ಸಾಲಿಗೆ ಸೇರ್ಪಡೆಗೊಂಡಿದೆ.

ಇಷ್ಟು ಬೆರಳೆಣಿಕೆಯ ಚಿತ್ರಗಳನ್ನು ಬಿಟ್ಟರೆ ಇನ್ನುಳಿದ ಎಂಭತ್ತೂ ಚಿಲ್ಲರೆ ಚಿತ್ರಗಳೂ ಈ ವರ್ಷ ಮಕಾಡೆ ಮಲಗಿರುವುದು ಚಿತ್ರರಂಗವನ್ನು ಆತಂಕಕ್ಕೆ ದೂಡಿದೆ.

ಗಣೇಶನ ಪಾಪ್ಯುಲಾರಿಟಿ ಪಾತಾಳಕ್ಕೆ

ತಾನು ಮಾಡಿದ ಚಿತ್ರಗಳೆಲ್ಲಾ ಹಿಟ್ ಆಗುತ್ತವೆ, ಮುಟ್ಟಿದ್ದೆಲ್ಲಾ ಚಿನ್ನವಾಗುತ್ತದೆ ಎಂದು ಬೀಗುತ್ತಿದ್ದ 'ಗೋಲ್ಡನ್ ಸ್ಟಾರ್' ಗಣೇಶನ ಪಾಪ್ಯುಲಾರಿಟಿಯಂತೂ ಈ ವರ್ಷ ಅಧೋಗತಿಗಿಳಿದಿದೆ. 'ಅರಮನೆ' ಚಿತ್ರದಿಂದ ಆರಂಭವಾದ ಈತನ ಡೌನ್‌ಫಾಲ್ 'ಬೊಂಬಾಟ್' ಮತ್ತು 'ಸಂಗಮ'ದ ಮೂಲಕ ಮತ್ತಷ್ಟು ಹದಗೆಟ್ಟು ಹೋಗಿದೆ.

'ಗಜ' ಚಿತ್ರವೊಂದನ್ನು ಬಿಟ್ಟರೆ ದರ್ಶನ್ ನಟಿಸಿದ 'ಇಂದ್ರ' ತೋಪಾಯಿತು. ತನ್ನ ಹೋಂ ಪ್ರೊಡಕ್ಷನ್‌ನಲ್ಲೇ ನಿರ್ಮಿಸಿರುವ 'ನವಗ್ರಹ'ದ ಗ್ರಹಗತಿಯೇ ಸರಿಯಾಗಿಲ್ಲ. ಸುದೀಪ್ ನಟಿಸಿದ 'ಮುಸ್ಸಂಜೆ ಮಾತು' ಬಿಟ್ಟರೆ ಆತ ನಟಿಸಿದ 'ಕಾಮಣ್ಣನ ಮಕ್ಕಳು' ಮತ್ತು 'ಗೂಳಿ'ಯಂಥಾ ಚಿತ್ರಗಳು ಗೋವಿಂದಾ ಗೋವಿಂದಾ ಎಂದಿವೆ.

ಹೀಗೆ ಎಲ್ಲ ಸ್ಟಾರ್‌ಗಳೂ ತಮ್ಮ ಕ್ರೇಜ್ ಕಳೆದುಕೊಳ್ಳುತ್ತಾ ಮಂಕಾಗಿದ್ದರೂ ಯಾವೊಬ್ಬ ನಟನೂ ನಯಾ ಪೈಸೆಯ ನಷ್ಟವನ್ನು ಎದುರಿಸುತ್ತಿಲ್ಲ. ಆದರೆ ಕತ್ತರಿ ಬೀಳುತ್ತಿರುವುದು ನಿರ್ಮಾಪಕನ ಜೇಬಿಗಷ್ಟೇ. 'ಈ ಹೀರೋಗಳಿಗೆ ದುಡ್ಡು ನೀಡಿ ನಾವು ಬರ್ಬಾದಾಗುತ್ತಿದ್ದೇವೆ' ಎಂದು ಮೊನ್ನೆ ತಾನೇ ಕನ್ನಡದ ದೊಡ್ಡ ನಿರ್ಮಾಪಕರಾಗಿ ಹೆಸರು ಮಾಡಿರುವ ಗಂಡುಗಲಿ ಮಂಜು ಗೋಳಾಡುತ್ತಿದ್ದಾರೆಂದರೆ, ಉಳಿದ ಸಣ್ಣಪುಟ್ಟ ನಿರ್ಮಾಪಕರ ಗತಿಯೇನಾಗಿರಬೇಡ?

ಹೀರೋಗಳ ದುರಾಸೆ

ಚಿತ್ರರಂಗಕ್ಕೆ ಲ್ಯಾಂಡ್ ಮಾಫಿಯಾ ದುಡ್ಡು ಹರಿದುಬರಲು ಆರಂಭಿಸಿದ ಕೂಡಲೇ ಇಲ್ಲಿನ ಹೀರೋಗಳೂ ತಂತಮ್ಮ ರೇಟು, ರುಬಾಬುಗಳನ್ನು ಹತ್ತು ಪಟ್ಟು ಏರಿಸಿಕೊಳ್ಳಲಾರಂಭಿಸಿದರು. 'ಮುಂಗಾರು ಮಳೆ' ಹಿಟ್ ಆದನಂತರ ಗಣೇಶ ಕೋಟಿ ಸಂಭಾವನೆ ಪಡೆಯಲು ಆರಂಭಿಸಿದ್ದೇ ತಡ ಒಂದೇ ಒಂದು ಚಿತ್ರದಲ್ಲಿ ಯಶಸ್ವಿಯಾದ ಹುಡುಗರೂ ಲೆಕ್ಕವಿಲ್ಲದಷ್ಟು ಸಂಭಾವನೆ ಡಿಮ್ಯಾಂಡು ಮಾಡುತ್ತಾ ಕುಳಿತಿದ್ದಾರೆ. ಕಳೆದ ಆರು ವರ್ಷಗಳಿಂದ ಆರಕ್ಕೇರದೆ ಮೂರಕ್ಕಿಳಿಯದೆ, ನಲವತ್ತು ಸಾವಿರದ ಮಾರ್ಕೆಟ್ಟೂ ಇರದೆ ಒದ್ದಾಡುತ್ತಿದ್ದ ನಾಯಕ ನಟ ಅಜಯ್ 'ತಾಜ್ ಮಹಲ್' ಯಶಸ್ವಿಯಾಗುತ್ತಿದ್ದಂತೆ ತನ್ನ ರೇಟನ್ನು ಏಕ್‌ದಂ ನಲವತ್ತು ಲಕ್ಷಕ್ಕೆ ಏರಿಸಿದ್ದಾನೆ. 'ಒರಟ' ಚಿತ್ರದ ಮೂಲಕ ಎಂಟ್ರಿ ನೀಡಿದ ಪ್ರಶಾಂತ್ ತನ್ನ ಎರಡನೆ ಚಿತ್ರಕ್ಕೇ ಕೇಳಿದ ಅಮೌಂಟು ಇಪ್ಪತ್ತು ಲಕ್ಷ ರುಪಾಯಿ! ಲೂಸ್‌ಮಾದ, ವಿಜಯರಾಘವೇಂದ್ರ ಹದಿನೈದರಿಂದ ಇಪ್ಪತ್ತು ಲಕ್ಷದ ಆಜೂಬಾಜಿನಲ್ಲಿದ್ದರೆ ದೇವರಾಜ್‌ಮಗ ಪ್ರಜ್ವಲ್ ಆಗಲೇ









ಮೂವತ್ತು ಲಕ್ಷಗಳನ್ನು ಡಿಮ್ಯಾಂಡ್ ಮ[...]ತ್ತಿದ್ದಾನಂತೆ.

ಇನ್ನು ಈ ಸಣ್ಣ ಹುಡುಗರ ವ[...] ನಾವೇಕೆ ಹಿಂದುಳಿಯಬೇಕು ಎಂ[...] ತೀರ್ಮಾನಿಸಿದ ಸುದೀಪ್, ದರ್ಶನ್, ಪ್ರೇ[...] ವಿಜಿ ಕೂಡಾ ತಮ್ಮ ಸಂಭಾವನೆಯನ್ನು ನಲ[...]ರಿಂದ ಅರವತ್ತು ಲಕ್ಷಕ್ಕೆ ಏರಿಸಿಕೊಂಡಿದ[...] ಸದ್ಯಕ್ಕೆ ಓಡುವ ಕುದುರೆಯಾಗಿರುವ ಪುನಿ[...] ಒಂದು ಕೋಟಿಯನ್ನು ದಾಟಿದ್ದಾಗಿದೆ.

ಆದರಲ್ಲೂ ಗಣೇಶ್ ಮತ್ತು ದರ್ಶ[...] ಅಂತೂ ಇತ್ತೀಚಿನ ದಿನಗಳಲ್ಲಿ ನಿರ್ಮಾ[...] ಕೊಟ್ಟ ಕಾಸನ್ನು ಎಡಗೈಲೂ ಮುಟ್ಟು[...] ಬದಲಿಗೆ ಸೈಟು, ಬಂಗಲೆ, ಜಮೀನ[...] ಸಂಭಾವನೆ ರೂಪದಲ್ಲಿ ಅಪೇಕ್ಷಿಸುತ್ತಿದ್ದಾ[...]

ಒಂದು ಮೂಲದ ಪ್ರಕಾರ ಗಣೇ[...] ವಿಜಯನಗರ, ರಾಜರಾಜೇಶ್ವರಿನಗರ ಮ[...] ಈಗ ತಾನೆ ಆತ ಕೊಂಡಿರುವ ಎಚ್‌ಎಸ್‌[...] ಲೇಔಟಿನ ಬಂಗಲೆಯೂ ಸೇರಿ ಒಂ[...] ಒಂದು ವರ್ಷದಲ್ಲಿ ಮೂರ್ನಾಲ್ಕು ಬಂ[...]ಗಳಿಗೆ ವಾರಸುದಾರನಾಗಿದ್ದಾನೆ. ಇ[...] ಉಪೇಂದ್ರನ ಸಿನಿಮಾಗಳನ್ನು ನಿರ್ಮಿ[...] ಬಹಳಷ್ಟು ಮಂದಿ ಮನೆ ವ[...] ಮಾರಿಕೊಂಡು ಬೀದಿಪಾಲಾಗಿದ್ದರೆ, ಉ[...] ಮಾತ್ರ ಬಂಗಲೆ, ರೆಸಾರ್ಟುಗಳನ್ನು ನಿಮಿ[...] ಕೊಂಡು ಮಜಬೂತಾಗೇ ಬದುಕುತ್ತಿದ[...]

ಇನ್ನುಳಿದಂತೆ ಶಿವರಾಜ್‌ಕುಮಾರ್ ಎ[...] ಎವರ್‌ಗ್ರೀನ್ ನಟನಿಗೆ ಚಿತ್ರ ಸೋತರೂ [...] ಬಿದ್ದರೂ ಸರಿ ಚಿತ್ರವೊಂದಕ್ಕೆ ಅರವತ್ತು [...] ಬಾಬ್ತು ಬರಲೇ ಬೇಕು. ಓಲ್ಡ್ ಲಯ[...] ವಿಷ್ಣುವರ್ಧನ್‌ಗೆ ಮಾರ್ಕೆಟ್ ಇಲ್ಲವಾದ[...] ವ್ಯವಹಾರದಲ್ಲಿ ಮಾತ್ರ ನಯ್ಯಾಪೈಸೆಯ ಚೌ[...] ಮಾಡುವಂತಿಲ್ಲ.

ನಾಲ್ಕಾಣೆ ಕೋಳಿಗೆ ಹನ್ನೆರಡಾ[...] ಮಸಾಲೆ ಎಂಬಂತೆ ಚಿತ್ರ ನಿರ್ಮಾಣ[...] ವೆಚ್ಚಕ್ಕಿಂತ ಈ ಹೀರೋಗಳ ಒಡಲಿಗೇ ಹೆ[...] ಹಣ ಸುರಿಯುವಂತಾಗಿದೆ ಕನ್ನಡ[...] ನಿರ್ಮಾಪಕನ ಪಾಡು.

ರಿಯಲ್ ಎಸ್ಟೇಟ್ ದುಡ್ಡು

ಕಳೆದ ಒಂದೆರಡು ವರ್ಷಗಳಿಂದ ತ[...] 'ಚಪಲ' ತೀರಿಸಿಕೊಳ್ಳಲು ಸಿನಿಮಾರಂ[...] ನುಗ್ಗಿದ್ದ ಸಿನಿಮಾದ ಗಂಧಗಾಳಿ ಗೊತ್ತಿರ[...] ರಿಯಲ್ ಎಸ್ಟೇಟ್ ಮೂಲದ ನಿರ್ಮಾ[...]ರೆಲ್ಲಾ ಈಗ ಸೋಲಿಗೆ ಹೆದರಿ, ಒಂದೊಂ[...] ಚಿತ್ರಗಳಿಗೆ ಸುಸ್ತಾಗಿ ಗಾಂಧಿನಗರದಿ[...] ನಾಪತ್ತೆಯಾಗುತ್ತಿದ್ದಾರೆ. ಅವರಲ್ಲೊಬ್ಬರು ವ[...] ಹೇಳಿದಂತೆ "ಅಯ್ಯೋ, ಈ ಚಿತ್ರರಂ[...] ಸಹವಾಸ ಸಾಕುಸಾಕಾಯಿತು. ನಾನು ನಿ[...]ಸಿದ ಚಿತ್ರದ ಅಸಲು ವಾಪಸ್ಸು ಬರುವುದಿರ[...] ಆ ಚಿತ್ರಕ್ಕೆ ಮಾಡಿಸಿದ್ದ ವಿನೈಲ್ ದುಡ[...] ಕೈಗೆ ಬರಲಿಲ್ಲ"

▶▶

ಕನ್ನಡದ ಬೆಡಗಿಯರ ಸುಗ್ಗಿ

ಒಟ್ಟಾರೆ ಚಿತ್ರರಂಗ ಡೇಂಜರ್ ಜೋನಿನಲ್ಲಿದ್ದರೂ ಅದರ ಮಧ್ಯೆ ಕಾಣುತ್ತಿರುವ ಆಶಾದಾಯಕವಾದ ಸಂಗತಿಯೆಂದರೆ, ಈ ವರ್ಷ ಏನಿಲ್ಲವೆಂದರೂ ಕನ್ನಡ ಚಿತ್ರರಂಗಕ್ಕೆ ಅರ್ಧ ಡಜನ್ ಅಪ್ಪಟ ಕನ್ನಡದ ಹುಡುಗಿಯರು ಸಿಕ್ಕಿರುವುದು.

'ಗಾಳಿಪಟ' ಚಿತ್ರದ ನೀತೂ ಈಗ ಕನ್ನಡದಲ್ಲಿ ಬಿಜೀ ಹೀರೋಯಿನ್. 'ನಂದ ಲವ್ಸ್ ನಂದಿತಾ' ಚಿತ್ರದ ಶ್ವೇತಾ ಇನ್ನೂ ಹದಿನೆಂಟರ ಆಜುಬಾಜಿನಲ್ಲಿದ್ದರೂ ಈಗಾಗಲೇ ಪಡ್ಡೆ ಹುಡುಗರನ್ನು ಜಿಂಕೆಮರಿಯಾಗಿ ಕಾಡುತ್ತಿದ್ದಾಳೆ. 'ನೀನೇ ನೀನೇ' ಚಿತ್ರದ ಮುಖಾಂತರ ಕಾಣಿಸಿಕೊಂಡ ಐಶ್ವರ್ಯಾ ನಾಗ್ ತನ್ನ ಸೌಂದರ್ಯ ಮತ್ತು ನಟನೆಯಿಂದ ಮೊದಲ ಚಿತ್ರದಲ್ಲೇ ಎಲ್ಲರ ಗಮನ ಸೆಳೆದಿದ್ದಾಳೆ. ಬಹು ನಿರೀಕ್ಷೆಯ ಸೂರಿ ನಿರ್ದೇಶನದ 'ಇಂತಿ ನಿನ್ನ ಪ್ರೀತಿಯ' ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದರೂ ಅದರ ನಾಯಕಿ ಮೇಕಪ್ ರಾಮಕೃಷ್ಣ ಅವರ ಮಗಳು ಸೋನು ಎಲ್ಲರ ಗಮನ ಸೆಳೆದಿದ್ದಾಳೆ. ರೇಖಾರಾಣಿಯವರ 'ನಂದಗೋಕುಲ' ಧಾರಾವಾಹಿ ಸೇರಿದಂತೆ ಕಿರುತೆರೆಗೆ ಸೀಮಿತವಾಗಿದ್ದ ರಾಧಿಕಾ ಪಂಡಿತ್ 'ಮೊಗ್ಗಿನ ಮನಸ್ಸು' ಚಿತ್ರದ ಮೂಲಕ ಹೊಸ ಭರವಸೆ ಮೂಡಿಸಿದ್ದಾಳೆ. 'ಅವ್ವ' ಖ್ಯಾತಿಯ ಸ್ಮಿತಾ ಕೂಡಾ 'ದೀನ' ಸೇರಿದಂತೆ ಕೆಲ ಚಿತ್ರಗಳಲ್ಲಿ ಅವಕಾಶ ಪಡೆದಿದ್ದಾಳೆ. ಶರ್ಮಿಳಾ ಮಾಂಡ್ರೆ, ಶುಭಾ






ಪೂಂಜಾ, ಹರಿಪ್ರಿಯಾ ಕೂಡ ಕನ್ನಡದ ಹುಡುಗಿಯರೇ.

ಇಷ್ಟೇ ಅಲ್ಲದೆ ತಾರೆಯರ ಕುಡಿಗಳೂ ಈಗ ಚಿತ್ರರಂಗಕ್ಕೆ ಧುಮುಕುತ್ತಿದ್ದಾರೆ. ಈಗ ಲೇಟೆಸ್ಟಾಗಿ ಕೇಳಿ ಬಂದಿರುವ ಸುದ್ದಿಯೇನೆಂದರೆ, ಜಯಮಾಲಾ ಅವರ ಪುತ್ರಿ ಸೌಂದರ್ಯ ನಾಯಕಿಯಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುವುದು ಬಹುತೇಕ ಖಚಿತವಾಗಿದೆ. ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ 'ಲಗೋರಿ' ಚಿತ್ರಕ್ಕೆ ಜಯಪುತ್ರಿ ಸೌಂದರ್ಯ ನಾಯಕಿ. ಈಕೆಯನ್ನು ನಿರ್ದೇಶಕ ಯೋಗರಾಜ್ ಭಟ್ ಆಯ್ಕೆ ಮಾಡಿ, ಸ್ಕ್ರೀನ್‌ಟೆಸ್ಟ್ ನಡೆಸಿರುವ ಸುದ್ದಿ ಕೇಳಿಬಂದಿದೆ.

ಸುಮಾರು 5.7'' ಅಡಿ ಎತ್ತರದ ಸೌಂದರ್ಯ ಈಗಿನ ಜಮಾನದ ಯುವತಿಯರನ್ನು ಪ್ರತಿನಿಧಿಸುವ ಬಾಲೆ ಎನ್ನಬಹುದು. ಈಕೆ ಫೆಮಿನಾದವರು ನಡೆಸುವ 'ಮಿಸ್ ಇಂಡಿಯಾ' ಸ್ಪರ್ಧೆಯಲ್ಲಿ ಭಾಗವಹಿಸಿ 'ಭಾರತ ಸುಂದರಿ'ಯಾಗಬೇಕೆಂಬ ಕನಸು ಕಂಡಿದ್ದಳು. ಅದಕ್ಕಾಗಿ ಸಾಕಷ್ಟು ಪ್ರಯತ್ನವನ್ನು ಮಾಡಿದ್ದಳು. 'ಮಿಸ್ ಇಂಡಿಯಾ' ಆದ ನಂತರ ಮಾಡೆಲಿಂಗ್ ಮತ್ತು ಹಿಂದಿ ಚಿತ್ರಗಳಲ್ಲಿ ನಟಿಸುವ ಪ್ಲಾನ್ ಕೂಡಾ ಆಕೆಯದಾಗಿತ್ತು. ಆದರೆ ಯಾಕೋ ದಿಢೀರನೆ ತನ್ನ ನಿರ್ಧಾರ ಬದಲಿಸಿ ಈಗ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಪಡೆಯುತ್ತಿದ್ದಾಳೆ.


ನಿಮಗಿದು ಗೊತ್ತಿರಬಹುದು. ಜಯಮಾಲಾ ತಮ್ಮ ವೃತ್ತಿ ಜೀವನವನ್ನು ತುಳು ಚಿತ್ರ 'ಬದ್ಕೆರಾ ಬುಡ್ಲೆ'ಯಿಂದ ಪ್ರಾರಂಭಿಸಿದ್ದರೂ ಅವರು ಕನ್ನಡ ಪ್ರೇಕ್ಷಕರಿಗೆ ಪರಿಚಿತರಾದದ್ದು ರಾಜ್‌ಕುಮಾರ್ ಅವರ ಜತೆ 'ಗಿರಿಕನ್ಯೆ'ಯಲ್ಲಿ ನಟಿಸಿದಾಗಲೇ. ಈಗ ಅವರ ಮಗಳು ಸೌಂದರ್ಯ ಕೂಡ ಅಣ್ಣಾವ್ರ ಪುತ್ರ ಪುನೀತ್‌ರಾಜ್‌ಕುಮಾರ್ ಜೊತೆ ನಟಿಸುವ ಮೂಲಕ ಪ್ರೇಕ್ಷಕರಿಗೆ ಪರಿಚಯವಾಗುತ್ತಿರುವುದು ಕಾಕತಾಳೀಯ.

ಸೌಂದರ್ಯ ಜೊತೆಗೆ ಡಿ. ರಾಜೇಂದ್ರ ಬಾಬು ಮತ್ತು ಸುಮಿತ್ರಾ ದಂಪತಿಯ ಎರಡನೆ ಪುತ್ರಿ ನಕ್ಷತ್ರ ಕೂಡ ಸದ್ಯದಲ್ಲೇ ಕನ್ನಡ ಚಿತ್ರದಲ್ಲಿ ನಟಿಸಲಿದ್ದಾಳೆ. ಈ ಮಧ್ಯೆ ಸುಂದರ್ ರಾಜ್ ಮತ್ತು ಪ್ರಮೀಳಾ ಜೋಷಾಯ್ ದಂಪತಿಗಳ ಪುತ್ರಿ ಮೇಘನಾ ರಾಜ್ ನಾಯಕಿಯಾಗಿ ಎಂಟ್ರಿ ನೀಡಿದ್ದಾಳಾದರೂ, ಆಕೆ ಕನ್ನಡಕ್ಕೆ ದಕ್ಕಿಲ್ಲ.

ಕನ್ನಡದಲ್ಲಿ ನಾಯಕಿಯರೇ ಸಿಗೋಲ್ಲ ಎಂಬ ಹಾಹಾಕಾರಕ್ಕೆ ಕೊನೆಗೂ ಈ ವರ್ಷ ಫುಲ್ ಸ್ಟಾಪ್ ಬಿದ್ದಂತಾಗಿದೆ.

ರಕ್ಷಿತಾಳ ನಿವೃತ್ತಿಯ ನಂತರ ಕನ್ನಡ ಚಿತ್ರರಂಗದ ಅಧಿನಾಯಕಿಯಂತೆ ಮೆರೆಯುತ್ತಿದ್ದ ರಮ್ಯಾಳಿಗೆ ಸದ್ಯ[...] ಅರ್ಧ ಡಜನ್ ಕನ್ನಡತಿಯರೇ ಪ್ರತಿಸ್ಪರ್ಧೆ ಒಡ್ಡಿ ನಿಂತಿದ್ದಾರೆ. ಅದರ ಮಧ್ಯೆ ರಮ್ಯಾ ಕೂಡ ಅಷ್ಟೇ ಬ್ಯುಸಿಯಾಗಿ ಹಲವಾರು ಚಿತ್ರಗಳಲ್ಲಿ ನಟಿಸುತ್ತಾ ತನ್ನ ಬೇಡಿಕೆಯಲ್ಲಿ ಇಳಿಮುಖ ಆಗದಂತೆ ಎಚ್ಚರಿಕೆವಹಿಸಿದ್ದಾಳೆ.


ಜಯಮಾಲಾ-ಸೌಂದರ್ಯ


ಸುಮಿತ್ರಾ-ನಕ್ಷತ್ರ


ಮೇಘನಾ

ಮಕ್ಕಳನ್ನು ಹೆತ್ತವರಿಗೆ ಹೆಗ್ಗಣವೂ ಮುದ್ದಂತೆ. ಆದರೆ ... ಕೊಟ್ಟು ಅವರ ಮುಖಗಳನ್ನು ದೊಡ್ಡ ಪರದೆಯ ... ನೋಡಲು ಜನ ಬರಬೇಕಲ್ಲ? ಇದರ ಬಗ್ಗೆ ...ದ ರಿಯಲ್ ಎಸ್ಟೇಟ್ ಜನ ತಮ್ಮ ...ಗಾಗಿ ಚಿತ್ರ ನಿರ್ಮಿಸಿದ್ದೂ ಉಂಟು. ... ತಾನೆ ಬಿಡುಗಡೆಯಾದ ಚಿತ್ರವೊಂದರ ...ಕನ ಮುಖವನ್ನು ಪೋಸ್ಟರ್‌ನಲ್ಲೂ ...ಡುವಂತಿರಲಿಲ್ಲ. ಅಂಥಾದ್ದರಲ್ಲಿ ...ನ್ನು ನೋಡಲು ಜನ ಹೇಗೆ ತಾನೇ ...ಟರ್‌ಗೆ ಬರುತ್ತಾರೆ? ಅಂದಹಾಗೆ ...ದ ನಿರ್ಮಾಪಕನೂ ಓರ್ವ ರಿಯಲ್ ...ಟ್ ಉದ್ಯಮಿ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ...? ಇಂಥವರಿಂದಲೂ ಚಿತ್ರರಂಗಕ್ಕೆ ಸಾಕಷ್ಟು ...ಗಿದೆ. ಆದರೂ ತಮ್ಮ ಆಸೆಗಳನ್ನು ಬಿಡದ ಎಷ್ಟೋ ...ನೂ ಇಂಥ ದುಸ್ಸಾಹಸ ಮಾಡುತ್ತಲೇ ಇದ್ದಾರೆ.



...ದಬ್ಬಾ ಚಿತ್ರಗಳದ್ದೇ ಮೇಲುಗೈ

... ವರ್ಷದ ಆರಂಭದಲ್ಲಿ ಬಂದ 'ಅಂಕುಶ', ... ಆದ್ರೆ' ಚಿತ್ರದಿಂದ ಹಿಡಿದು, 'ಹೃದಯಾ ...ಸ್ ಯೂ', 'ಜಿಂದಗಿ', 'ಪಟ್ರೆ ...ಪದ್ಮಾ', 'ನನ್ ಹೆಂಡ್ತಿ ...', 'ಪ್ರೇಮಿಗಾಗಿ ನಾ...' ... ಇತ್ಯಾದಿ ದಬ್ಬಾ ಚಿತ್ರಗಳಿಗೆ ಕೊರತೆಯಿರಲಿಲ್ಲ. ಬಿ.ಟಿ. ... ನಾಯಕ್ ಅವರ ಮಗ ಓಂ ...ಶ್ ಮತ್ತು ಬಿ.ಆರ್. ಕೇಶವ್ ...ದ ಭಯಾನಕ ನಿರ್ದೇಶಕರು ...ಗೊಂದು ಚಿತ್ರಗಳಂತೆ ರೀಲು ...ಬಿಸಾಡುತ್ತಿದ್ದಾರೆ. ...ಶೀಲತೆ, ಹೊಸತನಗಳಿಗೆ ...ವೇ ಗೊತ್ತಿರದ ಇವರು ...ನ್ನೂ ಸಾಧಿಸುವುದಿಲ್ಲ. ಆದರೆ ...ರಡು ಲಕ್ಷ ರೂಪಾಯಿಗಳಲ್ಲಿ ... ಚಿತ್ರವನ್ನು ಸಿದ್ಧಪಡಿಸಿ, ...ಬಂದು ಟೀವಿ ರೈಟ್ಸ್ ಪಡೆದು, ...ದರ ಸಬ್ಸಿಡಿ ಪಡೆದು ...ರಾಗಿ ಬದುಕುತ್ತಿದ್ದಾರೆ. ಇನ್ನು ...ಮಲ್ಲುನಂಥ ಸಿನಿಮಾ ಕ್ರಿಮಿ ...ೂ ಉಂಟೇ'? ಹಾಗು ಉಂಟೇ ... ತಲೆಬುಡವಿಲ್ಲದ ದಟ್ಟ ...ದ ಸಿನಿಮಾಗಳನ್ನೂ ...ಕೊಂಡು 'ಸುಖ'ವಾಗಿದ್ದಾರೆ! ...ವರ ಪಾಡು ಹೀಗಿರುವಾಗ ...ಕೋಟಿ ಖರ್ಚಿನಲ್ಲಿ ...ಣಗೊಂಡ 'ಮಾದೇಶ' ... ದಿನಕ್ಕೇ ಥಿಯೇಟರಿನಿಂದ ...ಡಿಯಾಗಿತ್ತು. ಆದರೆ ಶ್ರೀವತ್ಸನಂತ ...ನಾಕ್ ನಿರ್ದೇಶಕರು ಮಾತ್ರ ...ಪಕರನ್ನು ಚೌರಾ ಮಾಡುವ ಕೆಲಸವನ್ನು ... ಗೋವರ್ಧನಮೂರ್ತಿಯಂಥ ಕಿರಾತಕರು ... ತನಕ ಶ್ರೀವತ್ಸ, ಮಲ್ಲುನಂಥವರಿಗೆ ಬೆಲೆ ಇರುತ್ತೆ.

ಲಗಾಟಿ ಹೊಡೆದ ಕೋಟಿ ನಿರ್ಮಾಪಕರು

ಕಳೆದ ವರ್ಷ ಬಂದ ಉಪೇಂದ್ರನ 'ಮಸ್ತಿ' ಹೊತ್ತಿಗೆ ಸಂಪಾದಿಸಿದ ಎಲ್ಲವನ್ನೂ ಕಳೆದುಕೊಂಡು ಬರಿಗೈ ದಾಸರಾಗಿದ್ದ ಕೋಟಿ ನಿರ್ಮಾಪಕ ರಾಮುಗೆ ಈ ವರ್ಷ ನಿರ್ಮಿಸಿದ 'ಗೂಳಿ' ಅದೆಷ್ಟು ಗಂಭೀರವಾಗಿ ತಿವಿದಿದೆಯೆಂದರೆ, ಸದ್ಯಕ್ಕಂತೂ ರಾಮು ಚೇತರಿಸಿಕೊಳ್ಳುವ ಲಕ್ಷಣಗಳೇ ಕಾಣುತ್ತಿಲ್ಲ.

ಇನ್ನು ರಾಕ್‌ಲೈನ್ ವೆಂಕಟೇಶ್ ಗಣೇಶನನ್ನ ಹಾಕಿಕೊಂಡು 'ಬೊಂಬಾಟ್' ಮಾಡಿ ಗುಂಡೇಟು ಬಿದ್ದವರಂತೆ ತತ್ತರಿಸಿ ಈಗ ದುನಿಯಾ ಸೂರಿಯೊಂದಿಗೆ 'ಜಂಗ್ಲಿ'ಯಾಗಿದ್ದಾರೆ. 'ಅರಮನೆ' ನಿರ್ಮಿಸಿದ ಕೊಬ್ರಿ ಮಂಜು 'ಸಿನಿಮಾದ ಸಹವಾಸವೇ ಬೇಡ' ಎನ್ನುತ್ತಿದ್ದಾರೆ. ಒಂದು ವೇಳೆ ಲೂಸ್ ಮಾದನನ್ನು ಹಾಕಿಕೊಂಡು ಅವರು ನಿರ್ಮಿಸುತ್ತಿರುವ 'ಯೋಗಿ' ಮತ್ತು ನಾಗ್ತಿಹಳ್ಳಿಯೊಂದಿಗಿನ 'ಲೆಕ್ಕಾಚಾರ'ವೂ ಕೈಕೊಟ್ಟರೆ, ಮಂಜು ಚಿತ್ರರಂಗಕ್ಕೆ ಗುಡ್‌ಬೈ ಹೇಳುವುದು ಗ್ಯಾರಂಟಿ.



ರಾಮು



ರಾಕ್‌ಲೈನ್



ಕೆ. ಮಂಜು

ಮುಂದಿನವರ ಗತಿಯೇನು?

ಇಷ್ಟು ದಿನ ಬಿಡುಗಡೆಯಾದ ತೊಂಭತ್ತಾರು ಚಿತ್ರಗಳ ಗತಿ ಇಷ್ಟು ಹೀನಾಯವಾಗಿದ್ದರೆ ಇನ್ನು ತಮ್ಮ ಅದೃಷ್ಟ ಪರೀಕ್ಷೆಗಾಗಿ ಕಾದು ಕುಳಿತಿರುವ ಇನ್ನೂ ಇಪ್ಪತ್ತು ಚಿತ್ರಗಳಿಗೇನಾಗುತ್ತದೋ ಎಂಬ ಆತಂಕ ಇದ್ದೇ ಇದೆ. ಒಂದೂವರೆ ವರ್ಷದಿಂದ ಒಂದೇ ಸಮನೆ ಚಿತ್ರೀಕರಣಗೊಂಡಿರುವ 'ಗಂಗಾಕಾವೇರಿ', ನಾಗೇಂದ್ರ ಪ್ರಸಾದ್‌ರ 'ಮೇಘವೇ ಮೇಘವೇ', ಶ್ರೀನಗರ ಕಿಟ್ಟಿಯ 'ಜನುಮದ ಗೆಳತಿ', ದೀಪಕ್‌ನ 'ದೀನ', ಪೂಜಾ ಗಾಂಧಿಯ 'ಅನು', ಬಹುತಾರಾಗಣದ 'ಮಸ್ತ್ ಮಜಾ ಮಾಡಿ', ಉಪೇಂದ್ರನ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್', ನಾಗೇಂದ್ರ ಅರಸ್ ನಿರ್ದೇಶನದ 'ರಾಕಿ', ಮೆಂಟಲ್ ಮಂಜನ 'ಬಿಕಾಂ ಭಾಗ್ಯ', ಎಂ.ಡಿ. ಶ್ರೀಧರ್ ನಿರ್ದೇಶನದ 'ಜಾಲಿ ಡೇಸ್', ಆನೇಕಲ್ ಬಾಲರಾಜು ಮಗನ 'ಕೆಂಪ', ಎನ್.ಎಂ. ಸುರೇಶ್ ನಿರ್ಮಾಣದ 'ಕಾರಂಜಿ', 'ಗಾಂಧಿ ಸ್ಮೈಲ್', 'ಈ ಸಂಭಾಷಣೆ', 'ನೀನ್ಯಾರೇ' .... ಇನ್ನೂ ಹಲವು ಚಿತ್ರಗಳು ಡಿಸೆಂಬರ್ ಅಂತ್ಯದೊಳಗೆ ಬಿಡುಗಡೆಯಾಗಲು ಸಜ್ಜಾಗಿ ನಿಂತಿವೆ. ಇವುಗಳಲ್ಲಿ ಎಷ್ಟು ಚಿತ್ರಗಳು ಗೆಲ್ಲುತ್ತವೋ, ನಿರ್ಮಾಪಕನನ್ನು ಗಲ್ಲಿಗೇರಿಸುತ್ತವೋ ಗೊತ್ತಿಲ್ಲ.

ಒಟ್ಟಿನಲ್ಲಿ ಅನಾಹುತಕಾರಿ ಹಾದಿಯಲ್ಲಿರುವ ಚಿತ್ರರಂಗ ಈ ಚಿತ್ರಗಳಿಂದಾದರೂ ಚೇತರಿಸಿಕೊಳ್ಳುವಂತಾಗಲಿ. ಇಲ್ಲದಿದ್ದರೆ ವರ್ಷಾಂತ್ಯದಲ್ಲಿ 2008ರಲ್ಲಿ ಕನ್ನಡ ಚಿತ್ರರಂಗ ಕಳೆದುಕೊಂಡಿದ್ದು ಕೇವಲ 250 ಕೋಟಿ ಎಂಬ ದಾಖಲೆ ನಿರ್ಮಾಣವಾಗುತ್ತದೆ. ■

...ಬರಡು ನೆಲದಲ್ಲಿ ಅರಳಿದ ಪ್ರತಿಭೆಗಳು.....

...ಇದೇ ಸಮಯದಲ್ಲಿ ಕನ್ನಡಕ್ಕೆ ನಾಲ್ಕು ಯಂಗ್ ಅಂಡ್ ಎನರ್ಜಿಟಿಕ್ ...ದೇಶಕರೂ ದೊರಕಿದ್ದಾರೆ. 'ಗಜ' ಚಿತ್ರದ ಮಾದೇಶ, 'ಮುಸ್ಸಂಜೆಯ ಮಾತು' ...ದ ಮಹೇಶ್, 'ತಾಜ್ ಮಹಲ್'ನ ಚಂದ್ರು, ಇವರೆಲ್ಲರೂ ಚೊಚ್ಚಲ ...ದಲ್ಲೇ ಸೆಂಚುರಿ ಬಾರಿಸಿದ ಬ್ಯಾಟ್ಸ್‌ಮನ್‌ಗಳ ಥರ ಕಾಣಿಸುತ್ತಿದ್ದಾರೆ.

...ಸಂಗೀತ ನಿರ್ದೇಶನದ ವಿಭಾಗದಲ್ಲೂ ಅಷ್ಟೇ. ಮನೋ ಮೂರ್ತಿಯ ಹವಾ ... ಗುರುಕಿರಣ್ ಅಬ್ಬರದ ನಡುವೆಯೂ ಇಬ್ಬರು ಮೂವರು ಹೊಸ ಸಂಗೀತ ...ದೇಶಕರು ಹಳಬರನ್ನು ಮೀರಿಸುವಷ್ಟು ಶುಶ್ರಾವ್ಯವಾದ ಸಂಗೀತ ನೀಡಿ ತಮ್ಮ ಎಂಟ್ರಿಯನ್ನು ತೋರಿಸಿದ್ದಾರೆ. ಅವರಲ್ಲಿ 'ನಂದ ಲವ್ಸ್ ನಂದಿತ' ಚಿತ್ರದ ಎಮಿಲ್, 'ಸೈಕೋ' ಚಿತ್ರದ ರಘು ದೀಕ್ಷಿತ್ ಮತ್ತು 'ಮುಸ್ಸಂಜೆಯ ಮಾತು' ಚಿತ್ರದ ಶ್ರೀಧರ್, 'ಒರಟ' ಚಿತ್ರದ ಆರ್.ಪಿ. ಶಂಕರ್ ಹಾಗೂ ತಾಜ್‌ಮಹಲ್‌ನ ಅಭಿಮನ್ ಮುಖ್ಯರಾಗಿದ್ದಾರೆ.





ಹೀಗಾಗಿ ಆರು ನಾಯಕಿಯರು, ಮೂವರು ಸಂಗೀತ ನಿರ್ದೇಶಕರು, ನಾಲ್ಕು ಜನ ಉದಯೋನ್ಮುಖ ನಿರ್ದೇಶಕರು ಈ ವರ್ಷ ಭರವಸೆ ಮೂಡಿಸಿದ್ದಾರೆ. ಹಾಗೆ ನೋಡಿದರೆ ಯಾವ ವರ್ಷವೂ ಇಷ್ಟೊಂದು ಪ್ರತಿಭಾವಂತರನ್ನು ಚಿತ್ರರಂಗ ಸ್ವಾಗತಿಸಿದ್ದೇ ಇಲ್ಲ. ಹೀಗಾಗಿ ಈ ವರ್ಷ ಬಿಡುಗಡೆಯಾದ ಚಿತ್ರಗಳ ಬಾಕ್ಸಾಫೀಸ್ ಯಶಸ್ಸನ್ನೇ ಮಾನದಂಡವಾಗಿ ಪರಿಗಣಿಸಿದರೆ ಐವತ್ತರಲ್ಲಿ ಕೇವಲ ಎಂಟೇ ಚಿತ್ರ ಗೆದ್ದು, ಕನ್ನಡ ಚಿತ್ರರಂಗ ಪಾಪರ್ ಆಗಿದ್ದರೂ ಹೊಸ ಪ್ರತಿಭೆಗಳು ಇಂತಹ ಬರಡು ನೆಲದಲ್ಲೂ ಮೊಳಕೆ ಹೊಡೆದಿರುವುದು ಸ್ವಾಗತಾರ್ಹವೇ.



ರಘುದೀಕ್ಷಿತ್

ಎಡೂರಪ್ಪ, ಶೋಬಕ್ಕ ಬಹರೇನ್‌ನಲ್ಲಿ ಮೈಮರೆತಿದ್ದರಂತಲ್ಲಾ!

ನಮ್ಮ ಸಂತೆಶಿವರದ ಕಂತೆಭಕ್ಷದ ಭೈರಪ್ಪ ಕಾರಿಕೊಂಡ ಕ್ರಿಶ್ಚಿಯನ್ ಮತಾಂತರದ ಹರಿಕಥೆಯ ಮುಂದುವರಿದ ಭಾಗ ಇನ್ನೂ ಮುಂದುವರಿದಿದೆಯಂತಲ್ಲಾ, ಇದನ್ನು ಕಂಡೇ ತೇಜಸ್ವಿಯವರು ಕಡೆಯವರೆಗೂ ಇಂತಹ ಕೂಚುಭಟ್ಟರ ಜೊತೆಯಲ್ಲಿ ಮಾತನಾಡದೆ ತಮ್ಮ ಅಮೂಲ್ಯ ಸಮಯವನ್ನು ಉಳಿಸಿಕೊಂಡು ಉಪಯುಕ್ತವಾಗಿ ಬಳಸಿಕೊಂಡರಂತಲ್ಲಾ. ಇದೆಲ್ಲಾ ಇರಲಿ, ಭೈರಪ್ಪನ ವಾದವನ್ನು ತಡವಾಗಿ ಓದಿದ ಮತ್ತೀಕೆರೆಯ ಮಾದಿಗರ ಹುಡುಗನೊಬ್ಬ ಶಾನೆ ಸಿಟ್ಟಾಗಿ "ಅವುನ್ಯಾರು ಭೈರಪ್ಪ ತೋರುಸ್ರಿ, ಮಕ್ಕುಗ್ತಿನಿ" ಎಂದನಂತಲ್ಲಾ, ಇದನ್ನು ಕೇಳಿಸಿಕೊಂಡ ಉಪಾಧ್ಯಾಯರು "ಲೇ ಅಂಗ್ಯಲ್ಲ ಮಾತಾಡಬೇಡ ಕಣೊ ಮರಿ. ಭೈರಪ್ಪ ನಮ್ಮಂತ ಮೇಷ್ಟರು, ವಿದ್ವಾಂಸ, ಫಿಲಾಸಫರು, ಅದ್ರಿಂದ ಮೈಮೇಲೆ ನೆದರಿಟ್ಟಗಂಡು ಮಾತಾಡು" ಎಂದರಂತಲ್ಲಾ, ಅದಕ್ಕೆ ಆ ಹೈದ "ನಾನು ಮಾದಿಗರ ಹುಡುಗ. ನಾನು ಮತಾಂತರ ಆಯ್ತಿನಿ. ಅದಕೂ ಈ ಭೈರಪ್ಪನಿಗೂ ಏನು ಸಮಂಧ? ಹೋಗ್ಲಿ ನಮಗೂ ಇವನಿಗೂ ಏನು ಸಮಂಧ? ಇವನೇನು ನಮ್ಮ ಜಾತಿಯವನಾ? ಅಥವಾ ಕುಲದವನ? ಸಮಾಧಿಕನಾ? ತನಗೆ ಒಂದಿಷ್ಟೂ ಸಂಬಂಧವಿಲ್ಲದ ವಿಷಯದಲ್ಲಿ ಇವುನ್ಯಾಕೆ ಮುಕಳಿ ಹರಕಬೇಕು?" ಎಂದು ನಕ್ಕನಂತಲ್ಲಾ, ಥೂತ್ತೇರಿ!

* * * * * *

ಈ ನಡುವೆ ಮತಾಂತರದ ವಿಷಯದಲ್ಲಿ ಬಾಯಿಗೆ ಬಂದಂತೆ ಮಾತನಾಡಿ ಸಿಕ್ಕಿಕೊಂಡಿರುವ ಪೇಜಾವರ ಶ್ರೀಗಳು, ತಮ್ಮದೇ ಪ್ರತಿಕೃತಿಯನ್ನು ಸುಡಿಸಿಕೊಂಡರಂತಲ್ಲಾ, ಶ್ರೀಗಳವರ ಪ್ರತಿಕೃತಿಗೆ ಕಾವಿ ತೊಡಿಸಿ, ಮೆಟ್ಟಿನ ಹಾರ ಹಾಕಿ, ಮೆರವಣಿಗೆ ಮಾಡಿ, ಬೆಂಕಿಹಚ್ಚಿದ್ದು ನೋಡಿದ ಮಡಿವಂತ ಮಾಧ್ವರು "ಈ ನಮ್ಮ ಪೇಜಾವರ ಶ್ರೀಗಳಿಗೆ ಸುಮ್ಮನಿರಲು ಏನಾಗಿದೆ? ಈ ಹಿಂದೆ ಹರಿಜನರ ಕೇರಿಗೆ ಹೋದಾಗಲೆ ಅವರನ್ನು ಶುದ್ಧೀಕರಿಸಿ ಮತ್ತೆ ಮಾಧ್ವಯತಿಗಳನ್ನಾಗಿ ಮಾಡಿ ಎಚ್ಚರಿಕೆ ಕೊಟ್ಟಿದ್ದೆವು. ಆದರೂ ಪುನಃಪುನಃ ಹರಿಜನರ ವಿಷಯಕ್ಕೆ ಹೋಗಿ ಹೀಗೆ ಹೊಡೆತ ತಿನ್ನುತ್ತಾರಲ್ಲಾ?" ಎಂದು ಹಲುಬಿದರಂತಲ್ಲಾ, ಇದಕ್ಕೆ ಸಮಜಾಯಿಸಿ ನೀಡಿದ ಪೇಜಾವರ "ನಾನು ಹೇಳಿದ್ದು ಹಾಗಲ್ಲ, ಮತಾಂತರವಾದರೆ ಆರ್ಯ ಸಮಾಜಕ್ಕೆ ಬನ್ನಿ ಎಂದೆ" ಎಂದು ಸ್ಪಷ್ಟೀಕರಣ ನೀಡಿ ಧರ್ಮದ ಕೂದಲು ಸೀಳತೊಡಗಿದರಂತಲ್ಲಾ, ಥೂತ್ತೇರಿ!

* * * * * *

ನಮ್ಮ ಜನಪ್ರಿಯ ಮುಖ್ಯಮಂತ್ರಿಗಳಾದ ಎಡೂರಪ್ಪನವರು ಕರ್ನಾಟಕದಲ್ಲಿ ಉದ್ಭವಿಸಿದ ಭೂತಾಕಾರದ ಸಮಸ್ಯೆಗಳಿಗೆ ಹೆದರಿ ನಾಲ್ಕು ದಿನ ಹಾಯಾಗಿದ್ದು ಬರಲು ವಿದೇಶಕ್ಕೆ ಹೋಗಿಬಂದರಂತಲ್ಲಾ, ವಿದೇಶಕ್ಕೆ ಒಬ್ಬರೇ ಹೋಗಿಬರಲು ಬೇಸರವಾಗಿ ಶೋಭಾ ಕರಂದ್ಲಾಜೆಯನ್ನು ಕರೆದುಕೊಂಡು ಹೊರಟರಂತಲ್ಲಾ, ಆಗ ಕರ್ನಾಟಕದ ಜನ ಏನಾದರೂ ತಪ್ಪು ತಿಳಿದುಕೊಂಡಾರೆಂದು ತಮಗೆ ತಾವೇ ಯೋಚಿಸಿ, "ಹೇಗಾದರಾಗಲಿ, ಜೊತೆಗೊಬ್ಬ ಗಂಡಸು ಎಂಬ ಪ್ರಾಣಿಯಿದ್ದರೆ ಕರ್ನಾಟಕದ ಮುಗ್ಧರು ಏನೂ ತಪ್ಪು ತಿಳಿದುಕೊಳ್ಳುವುದಿಲ್ಲ" ಎಂದು ಯೋಚಿಸಿ ಸಕ್ಕರೆ ಕಾಯಿಲೆಯಿಂದ ಸುಸ್ತಾದಂತೆ ಕಾಣುವ ರಾಮಚಂದ್ರ ರಾವ್ ಅಲ್ಲಲ್ಲ ರಾಮಚಂದ್ರಗೌಡರನ್ನು ಕರೆದುಕೊಂಡು ಹೋಗಿದ್ದರಂತಲ್ಲಾ, ಈ ಪ್ರವಾಸಿ ಪ್ರಿಯರು ಬಹರೇನ್‌ನಲ್ಲಿ ಅಡ್ಡಾಡುತ್ತಿರಬೇಕಾದರೆ, ಚೂಡಿದಾರದಲ್ಲಿ ಮಿಂಚುತ್ತಿದ್ದ ಶೋಭಾ ಕರಂದ್ಲಾಜೆ ಮತ್ತು ಜೊತೆಯಲ್ಲಿದ್ದ ಇಬ್ಬರು ಮುದುಕರನ್ನು ನೋಡಿದ ಬಹರೇನ್‌ನ ಜನ ಏನೂ ತಪ್ಪು ತಿಳಿದುಕೊಳ್ಳಲಿಲ್ಲವಂತಲ್ಲಾ, ಇದನ್ನು ಕೇಳಿ ಖುಷಿಯಾದ ಎಡೂರಪ್ಪ "ಕರ್ನಾಟಕದ ಜನ ಬಹರೇನ್ ಜನರಿಂದ ಕಲಿಯೋದು ತುಂಬ ಇದೆ" ಎಂದರಂತಲ್ಲಾ, ಥೂತ್ತೇರಿ!



* * * * * *

ಯಾರೋ ಗಣ್ಯರು ಒಳಗಿದ್ದಾಗ ಬಾಗಿಲಲ್ಲಿ ಕಾಯುವ ನಿವೃತ್ತ ಗೂರ್ಕನಂತೆ ಕಾಣುವ ರಾಮಚಂದ್ರಗೌಡನನ್ನು ಕಿಡಿಗೇಡಿ ಬಜೆಪಿಗಳು ಬಂದ ಕೂಡಲೇ ಸುತ್ತುವರಿದು ಕುಚೋದ್ಯದ ಪ್ರಶ್ನೆ ಕೇಳಿದರಂತಲ್ಲಾ, ಯಾರ ಪ್ರಶ್ನೆಗೆ ಏನೆಂದೂ ಉತ್ತರ ಹೇಳದೆ ರಾಮಚಂದ್ರಗೌಡ ಶಾನೆ ಸಿಟ್ಟಾಗಿ "ಅಲ್ರೀ, ನಾವು ವಿದೇಶದಿಂದ ಏನು ವ್ಯವಹಾರ ಕುದುರಿಸಿಕೊಂಡು ಬಂದೆವು, ನಮ್ಮ ಕಾರ್ಯಕ್ರಮಗಳೇನು, ಅಭಿವೃದ್ಧಿಯೇನು ಎಂಬ ಯಾವ ಪ್ರಶ್ನೆಯನ್ನು ಕೇಳದೆ ಶೋಭಾ ಎಲ್ಲಿ ಮಲಗಿದ್ರು? ಎಡೂರಪ್ಪ ಎಚ್ಚರವಾಗಿದ್ದನೆ? ಒಂದೇ ರೂಮಿನಲ್ಲಿದ್ದರೊ? ಬೇರೆಬೇರೆ ರೂಮಿನಲ್ಲಿದ್ದರೊ ಅಂಥ ಕೇಳುತ್ತಿರಲ್ಲಾ? ಎಡೂರಪ್ಪ ಶೋಭಾ ಅಂದ್ರೆ ಅವರೇನು ರೇಣುಕಾಚಾರಿ ಜಯಲಕ್ಷ್ಮಿ ಅಂದುಕೊಂಡ್ರೇನ್ರಿ?" ಎಂದು ಗದರಿದರಂತಲ್ಲಾ, ಥೂತ್ತೇರಿ!!

ಥೂತ್ತೇರಿ

ಯಾಹೂ

* * * * * *

ಮೂರ್ಖ ಸರ್ಕಾರದ ತೀರ್ಮಾನಗಳೆಲ್ಲಾ ಮೂರ್ಖತನದಿಂದಲೇ ಕೂಡಿರುತ್ತವಂತಲ್ಲಾ. ತಾಜಾ ಉದಾಹರಣೆ ಎಂದರೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನಕ್ಕೆ ಹೋರಾಡಿದವರನ್ನ ಹಿಡಿದು ತಂದು ಶಾಲಿನಲ್ಲಿ ಮುಚ್ಚಿ ಕಳಿಸುವ ತೀರ್ಮಾನ! ಈ ತೀರ್ಮಾನ ಕೇಳಿದ ಕೂಡಲೇ ಚಿ.ಮೂ. ಎಂಬ ಹಳೆ ಚೆಡ್ಡಿಯ ಜೊತೆಗೆ ಇನ್ನುಳಿದ ಎಲ್ಲಾ ಚೆಡ್ಡಿಗಳು ಅಭೂತಪೂರ್ವ ಸನ್ಮಾನಕ್ಕೆ ತಯಾರಾದವಂತಲ್ಲಾ, ಹೇಳಿಕೇಳಿ ಈ ಸರ್ಕಾರ ಸನ್ಮಾನ, ಸಮಾರಂಭ, ಜಾಥಾ, ತಿಥಿ, ಯಾತ್ರೆಗಳಿಗೆ ಮೀಸಲಿರುವಂತದ್ದು. ಒಂದು ಮುಗಿದ ಕೂಡಲೇ ಮತ್ತೊಂದಕ್ಕೆ ತಯಾರಾಗುವಂತದ್ದು. ಶಾಸ್ತ್ರೀಯ ಭಾಷೆ ದಕ್ಕಿದ ಮೇಲೆ ಮುಂದೇನು ಮಾಡಬೇಕೆಂದು ತೋಚದ ಸರ್ಕಾರಕ್ಕೆ ಸಮಾರಂಭವೇ ಗತಿಯೆಂದು ಪ್ರಜ್ಞಾವಂತರು ಆಡಿಕೊಳ್ಳುತ್ತಿರುವಾಗಲೇ, ಮಾಜಿ ಪ್ರಧಾನಿಗಳಾದ ದೇವೇಗೌಡರು "ಹತ್ತೊಂಭತ್ತನೂರ ಎಂಭತ್ತು ನಾಲ್ಕನೇ ಇಸವಿಯಲ್ಲಿ ನಾವು ಶಾಸ್ತ್ರಿ ಭಾಷೆ ಪ್ರಸ್ತಾಪವನ್ನು ಕೇಂದ್ರದ ಮುಂದಿಟ್ಟಿದ್ದೆವು ಎಂಬ ತಕ್ಕಂತ ಮಾತನ್ನ ನಾನೀ ಸಂದರ್ಭದಲ್ಲಿ ಜ್ಞಾಪಿಸೋದಕ್ಕೆ ಹೋಗಲ್ಲ" ಎಂದರಂತಲ್ಲಾ, ಥೂತ್ತೇರಿ!!

* * * * * *


ದೇವೇಗೌಡರನ್ನು ಬಚ್ಚೇಗೌಡರು ಬೈದಿರುವ ಹೊಡೆತಕ್ಕೆ ಬಜೆಪಿಗಳೇ ಬೆಚ್ಚಿ ಬಿದ್ದಿದ್ದಾರಂತಲ್ಲಾ, ರೈಸ್ ಮಿಲ್ ರೈಟರಾಗಿದ್ದುಕೊಂಡೇ ಬಸಪ್ಪ ಶಾಸ್ತ್ರಿ ಕುಟುಂಬವನ್ನು ಮೆಂಟಲು ಮಾಡಿ, ಬಜೆಪಿಗೆ ಬೇಸ್‌ಮೆಂಟಾಕಿದವರನ್ನೆಲ್ಲಾ ಮೂಲೆಗುಂಪು ಮಾಡಿ, ಅನಾಮಧೇಯರನ್ನೆಲ್ಲಾ ಎಮ್ಮೆಲ್ಲೆ ಮಾಡಿ, ಮೂರ್ಖರನ್ನೆಲ್ಲಾ ಮಂತ್ರಿ ಮಾಡಿ, ಲಂಚ ವಸೂಲಿಗೆ ಮಕ್ಕಳನ್ನು ಬಿಟ್ಟು, ಮಂತ್ರಿಗಳನ್ನು ವಿಚಾರಿಸಿಕೊಳ್ಳಲು ಶೋಬಕ್ಕನನ್ನು ಬಿಟ್ಟು, ಎಷ್ಟೇ ಊಟಿ ಹೇಳಿದರೂ ಶೋಬಕ್ಕನೊಂದಿಗೆ ಮೆರೆಯುತ್ತಿರುವ ಶಿಕಾರಿಪುರದ ನಾಯಕ ಎಡೂರೇಶ್ವರನನ್ನು ಮುಂದೊಂದು ದಿನ ಈ ಬಚ್ಚೇಗೌಡ ದೇವೇಗೌಡರನ್ನು ಬೈದಂತೆಯೇ ಬೈದರೆ ಗತಿಯೇನೆಂದು ಎಡೂರಾಭಿಮಾನಿಗಳ ಆತಂಕವಾಗಿವೆಯಂತಲ್ಲಾ, ಥೂತ್ತೇರಿ!!! ■

ಜಗತ್ ಗುರು ಹೀರೋಯಿನ್ ಮಮತಾಳ ಡಕಾಯಿತಿ ಪ್ರಸಂಗ

'ಜಗತ್‌ಗುರು' ಚಿತ್ರದ ಹೀರೋಯಿನ್ ತನ್ನ ನಿರ್ಮಾಪಕನ ಮನೆಗೇ ಕನ್ನಹಾಕಿಸಿ ರಾತ್ರೋರಾತ್ರಿ (ಕು)ಖ್ಯಾತಿಯ ಉತ್ತುಂಗಕ್ಕೇರಿದ ಕತೆ ಕೇಳಿದ ಗಾಂಧಿನಗರದ ಸಾಬೂಗಳೆಲ್ಲ ಮೈಕೈ ಪರಚಿಕೊಳ್ಳುವುದೊಂದೇ ಬಾಕಿ!

ಮಚ್ಚು ಲಾಂಗು, ಕೊಲೆ, ದಕಾಯಿತಿಗಳೇ ಸಿನಿಮಾ ಸರಕಾದ ಮೇಲೆ ಅದರ ಪಾತ್ರಧಾರಿಗಳಿನ್ನು ಲಾಂಗ್ ಹಿಡಿಯಬಾರದೆಂದರೆ ಅದು ಯಾವ ನ್ಯಾಯ? 'ಓಕೆ ಸಾರ್ ಓಕೆ' ಚಿತ್ರದ ಮೋನಿಕಾ ತನ್ನ ಪ್ರಿಯಕರನನ್ನು ಛೂಬಿಟ್ಟು ಮತ್ತೊಬ್ಬ ಬಾಯ್‌ಫ್ರೆಂಡ್‌ನನ್ನು ಕೊಲ್ಲಿಸ ಬಹುದಾದರೆ 'ಜಗತ್‌ಗುರು' ಚಿತ್ರದ ಸೋಕಾಲ್ಡ್ ಹೀರೋಯಿನ್ ಮಮತಾ ಇಷ್ಟೂ ಮಾಡದೇ ಹೋದರೆ ಹೇಗೆ?

ಅಷ್ಟೇ ಏಕೆ, ತನ್ನನ್ನು ಹೀರೋಯಿನ್ ಮಾಡಿದ ತಪ್ಪಿಗೆ 'ಜಗತ್‌ಗುರು' ಪ್ರೊಡ್ಯೂಸರ್ ರಾಜ್‌ವೀರ್‌ನ ಮನೆಗೆ ಗೆಳೆಯರನ್ನು ನುಗ್ಗಿಸಿ ಖತರ್‌ನಾಕ್ ದಕಾಯಿತಿಯನ್ನೇ ಮಾಡಿಸಿದ್ದಾಳೆ. ಅಷ್ಟೇ ಮಾಡಿದವಳಿಗೆ ಜೈಲು ಯಾವ ಲೆಕ್ಕ? ಪೊಲೀಸರ ಏಟು, ಲಾಕಪ್ಪು ಯಾವ ಮಹಾ?




ಸದ್ಯ ತನ್ನ ಇಡೀ ದಕಾಯಿತಿ ಗ್ಯಾಂಗ್ ಸಮೇತ ಪರಪ್ಪನ ಅಗ್ರಹಾರದ ಜೈಲುಪಾಲಾಗಿರುವ ಈಕೆ ಹೆಸರು ಮಮತಾ. ಅದೂ ಆಕೆಯ ನಿಜವಾದ ಹೆಸರೇನಲ್ಲ, ಕಾವ್ಯ ಅಲಿಯಾಸ್ ಲಕ್ಷ್ಮಿ ಉರ್ಫ್ ರೇಖಾ ಇತ್ಯಾದಿ ಏನೇನೋ ಹೆಸರುಗಳನ್ನಿಟ್ಟುಕೊಂಡಿದ್ದಾಳೆ. ಈಕೆ ಜಗತ್‌ಗುರು ಚಿತ್ರಕ್ಕೆ ಹೀರೋಯಿನ್ ಆಗಿದ್ದಂತೂ ಸತ್ಯ. ಏಕಾಏಕಿ ತನ್ನನ್ನು ಹೀರೋಯಿನ್ ಪಟ್ಟದಿಂದ ಕಿತ್ತುಹಾಕಿದ ನಿರ್ಮಾಪಕ ರಾಜ್‌ವೀರ್ ಎಂಬಾತನ ಮನೆಗೆ ಬರೋಬ್ಬರಿ ಅರ್ಧ ಡಜನ್ ಪುಡಿ ರೌಡಿಗಳನ್ನು ನುಗ್ಗಿಸಿ ಎಂಟೂವರೆ ಲಕ್ಷ ರೂಪಾಯಿಗಳನ್ನು ಕಿತ್ತೊಯ್ದ ಮಮತಾ ಇದಕ್ಕೂ ಮುನ್ನ ಯಾವ್ಯಾವ ಚಿತ್ರಗಳಲ್ಲಿ ನಟಿಸಿದ್ದಾಳೆ? ಗಾಂಧಿನಗರಕ್ಕೆ ಆಕೆಯನ್ನು ಕರೆತಂದಿದ್ದು ಯಾರು? ಆಕೆಯ ಹಿನ್ನೆಲೆಯೇನು? ಇಂಥದೊಂದು ಡಕಾಯಿತಿ ಗ್ಯಾಂಗ್‌ಗೆ ಆಕೆ ತಗುಲಿಕೊಂಡಿದ್ದಾದರೂ ಹೇಗೆ? ಇತ್ಯಾದಿಯನ್ನೆಲ್ಲ ಬದಿಗಿಟ್ಟು ಮೊದಲು 'ಜಗತ್‌ಗುರು' ಎಂಬ ಚಿತ್ರದ ಕತೆಯನ್ನೇ ಕೆದಕಿದರೆ ಅದೊಂದು ವಿಚಿತ್ರ ಕತೆ.

ಇಂಥಾದ್ದೊಂದು ಚಿತ್ರವಿದೆ ಎಂದಾಗಲಿ, ಅದಕ್ಕೊಂದು ಮುಹೂರ್ತವಾದ ಬಗ್ಗೆಯಾಗಲಿ, ಶೂಟಿಂಗು, ಫೈಟಿಂಗು ಇತ್ಯಾದಿ ನಡೆದ ಸುದ್ದಿಯಾಗಲಿ ಕಂಡವರಿಲ್ಲ, ಯಾರೂ ಕೇಳಿಲ್ಲ, ಇಂಥ ಅನಾಮಧೇಯ, ಅಸಂಗತಗಳ ಕಂತೆಯನ್ನೇ ರೀಲು ಸುತ್ತಿ ಯಾವ ಥೇಟರಿಗೂ ತರದೇ ಟೀವಿ ರೈಟ್ಸ್ ಮಾರಿಕೊಂಡೇ ಪುಡಿಕಾಸು ದುಡಿಯುವವನು ಬಿ.ಆರ್. ಕೇಶವ. ಇಂಥವನೇ ನಾಚುವಂತೆ ಹುಟ್ಟಿಕೊಂಡವನು ಪೀಣ್ಯದ ರಾಜ್‌ವೀರ್. ಇಲ್ಲಿಗೆ ಆರು ವರ್ಷದ ಹಿಂದೆ ಹಿರಿಯ ನಟ ಜಯಂತಿಯ ಕಾಲಿಗೆ ಬಿದ್ದು 'ರೋಷಾಗ್ನಿ' ಎಂಬ ಚಿತ್ರಕ್ಕೆ ರೀಲು ಸುತ್ತಿದ್ದು ಬಿಟ್ಟರೆ 'ಜಗತ್‌ಗುರು' ಈತನ ಎರಡನೇ ಸೃಷ್ಟಿ. ರೋಷಾಗ್ನಿಗೆ ದುಡ್ಡು ಹಾಕಿದ್ದ ಗಂಗಾಧರ್ ಆಚಾರಿಗೆ ಬರೋಬ್ಬರಿ ನಲವತ್ತು ಲಕ್ಷಕ್ಕೆ ಕೈ ಎತ್ತಿದ ಫಲವಾಗಿ ಕೊರಗಿಗೆ ಬಿದ್ದ ಆಚಾರಿ ಸತ್ತೇಹೋದ. ಹಾಗಂತ ರೋಷಾಗ್ನಿ ಬರಕತ್ತಾಗಲಿಲ್ಲ, ಟೀವಿ ರೈಟ್ಸ್ ಅಂತ ಮೂರೂವರೆ ಲಕ್ಷ ರೂ. ಗಿಟ್ಟಿದ್ದು ಬಿಟ್ಟರೆ ಮತ್ತೇನೂ ಹುಟ್ಟಲಿಲ್ಲ ಎನ್ನುತ್ತಾನೆ ರಾಜ್‌ವೀರ್.

ಈ ರಾಜ್‌ವೀರ್ ಮೊದಲು ಸಾಹಸ ಕಲಾವಿದನಾಗಿದ್ದ. ಥ್ರಿಲ್ಲರ್ ಮಂಜು, ನಂಜುಂಡಿ ನಾಗರಾಜ್ ತಂಡದಲ್ಲಿ ಒಂದಷ್ಟು ಕಾಲ ಚಾಲ್ತಿಯಲ್ಲಿದ್ದವನು ಕ್ರಮೇಣ ತಾನೇ 'ರೋಷಾಗ್ನಿ'ಗೆ ಕೈಯಿಟ್ಟ. ಯಾವ ಧೈರ್ಯದ ಮೇಲೆ 'ಜಗತ್‌ಗುರು' ಮಾಡ್ತಿದ್ದೀಯಾ? ಅಂತ ಪ್ರಶ್ನೆಯಿಟ್ಟರೆ ರಾಜ್‌ವೀರ್ ತನ್ನದೇ ವಿಚಿತ್ರ ಥಿಯರಿಯೊಂದನ್ನು ಬಿಚ್ಚಿಡುತ್ತಾನೆ.

ಈ 'ಜಗತ್‌ಗುರು' ಚಿತ್ರಕ್ಕೆ ಈತನೇ ನಿರ್ಮಾಪಕ ನಿಜ; ಹೀರೋ ಯಾರಪ್ಪಾ ಅಂದರೆ ನಾನೇ ಅನ್ನುತ್ತಾನೆ.





ಹೋಗಲಿ ಡೈರೆಕ್ಟರ್ ಯಾರು ಅಂತ ಕೇಳಿದರೆ ಅದಕ್ಕೂ ನಾನೇ ಎಂಬ ಡೈಲಾಗ್ ಬಿಡುತ್ತಾನೆ. ತಮಾಷೆಯೆಂದರೆ ಕತೆ, ಚಿತ್ರಕತೆ, ಸಂಭಾಷಣೆ, ಕ್ಯಾಮರಾ, ಸಂಗೀತ, ಸಾಹಸ, ನೃತ್ಯ ಎಲ್ಲವೂ ತಾನೊಬ್ಬನೇ ನಿರ್ವಹಿಸುತ್ತಾನಂತೆ. ಹೀಗ್ಯಾಕೆ? ಅಂತ ಪ್ರಶ್ನೆಯಿಟ್ಟರೆ 'ಏನಣ್ಣಾ ಮಾಡೋದು? ನನ್ನತ್ರ ದುಡ್ಡಿಲ್ಲ, ಇರೋದು ಬರೇ ಹತ್ತು ಲಕ್ಷ ಮಾತ್ರ. ಕ್ಯಾಮೆರಾ ಬಾಡಿಗೆಗೆ ತಂದು ಫಿಲ್ಮನ್ನಷ್ಟೇ ದುಡ್ಡು ಕೊಟ್ಟು ತರ್‍ತೀನಿ. ನನ್ನ ಹತ್ತು ವರ್ಷದ ಮಗನೇ ಕ್ಲಾಪ್ ಮಾಡ್ತಾನೆ. ನಾನೇ ಹೀರೋ ಪಾರ್ಟ್ ಮಾಡ್ತೀನಿ. ಯೂನಿಟ್ಟು, ಲೈಟ್ ಬಾಯ್‌ಗಳು, ಅಸಿಸ್ಟೆಂಟ್ಸು ಅಂತ ಇಟ್ಕೊಳ್ಳೋಕೆ ದುಡ್ಡೆಲ್ಲಿದೆ?

ಬೆಳಿಗ್ಗೆ ಎದ್ದಿದ್ದೇ ನನ್ನ ಹೆಂಡ್ತಿ ಇಪ್ಪತ್ತು ಜನಕ್ಕಾಗೋವಷ್ಟು ಅಡುಗೆ ಮಾಡ್ತಾಳೆ. ಮನೇಲೇ ನಾನು ಮೇಕಪ್ ಮಾಡ್ಕೊಂಡು ಅಷ್ಟು ಅಡುಗೆ, ಕ್ಯಾಮೆರಾನ್ನ ವ್ಯಾನಿಗೆ ಹಾಕ್ಕೊಂಡು ಲೋಕೇಶನ್ನಿಗೆ ಹೆಂಡ್ತಿ, ಮಗನ ಜೊತೆ ಬರ್‍ತೀನಿ. ನಾನು ಆಕ್ಟ್ ಮಾಡುವಾಗ ನನ್ಹೆಂಡ್ತಿ ಕ್ಯಾಮೆರಾ ಸ್ಟಾರ್ಟ್ ಮಾಡ್ತಾಳೆ. ಮಿಕ್ಕಂತೆ ನಂದೇ ಡೈರೆಕ್ಷನ್ನು, ಕ್ಯಾಮೆರಾ, ಡೈಲಾಗು, ಪ್ರೊಡಕ್ಷನ್ನು ನೋಡಿ. ಎಲ್ಲಾನೂ ನಾನೇ ಮಾಡ್ಕೋತೀನಿ....!'

ಇದು ರಾಜ್‌ವೀರ್‌ನ ಶೂಟಿಂಗ್ ಕತೆಯಾದರೆ ಈತನಿಗೆ ಹೀರೋಯಿನ್ ಮಮತಾ ಗಂಟುಬಿದ್ದದ್ದೂ ವಿಚಿತ್ರ ಕತೆಯೆ. ಮೂಲತಃ ಆಂಧ್ರದ ರಾಜ್‌ವೀರ್ ಸ್ಟಂಟ್‌ಮನ್ ಆಗಿದ್ದವನು ಕನ್ನಡ ಜನತೆಗೆ ಏನಾದರೂ ಸೇವೆ ಸಲ್ಲಿಸಬೇಕು ಅಂತಲೇ ಎಷ್ಟೇ ಕಷ್ಟವಾದರೂ ಸಿನಿಮಾ ಮಾಡುತ್ತಿದ್ದಾನಂತೆ. ದುಡ್ಡು ಕಾಸಿಲ್ಲದೇ ಸಿನಿಮಾ ಮಾಡಬೇಕಲ್ಲ; ಅದಕ್ಕೆ ಯೂನಿಟ್ಟು, ಲೈಟ್ ಬಾಯ್‌ಗಳು ಯಾವುದೂ ಇಲ್ಲದೇ ಆಲ್ ಇನ್ ಆಲ್ ತಾನೇ ನಿಭಾಯಿಸುತ್ತಾನಂತೆ. ಹೀಗೆ ಕೂಲಿ, ಬಟವಾಡೆ ಯಾವುದರ ಹಂಗೂ ಇಲ್ಲದೆ ಆತನ ಚಿತ್ರದಲ್ಲಿ ನಟಿಸಲು ಜನ ಬೇಕಲ್ಲ; ಅದಕ್ಕೆ ಕಂಠೀರವ ಸ್ಟುಡಿಯೋ ಸುತ್ತ ಇಟ್ಕಾಡುವ ನಿರುದ್ಯೋಗಿಗಳನ್ನೇ ಹಿಡಿದು ತರುತ್ತಾನಂತೆ.

ಹಾಗೇ ಕಂಠೀರವ ಸ್ಟುಡಿಯೋ ಸುತ್ತ ಠಳಾಯಿಸುತ್ತಿದ್ದ ಈ ರಾಜವೀರನ ಕಣ್ಣಿಗೆ ಬಿದ್ದವಳೇ ಮಮತಾ ಅಲಿಯಾಸ್ ಕಾವ್ಯ ಉರ್ಫ್ ಲಕ್ಷ್ಮಿ ಎಂಬ ಅನಾಮಿಕ ಹುಡುಗಿ. ಬಹುಶಃ ಆಕೆ ದಿನಗೂಲಿಯ ಮೇರೆಗೆ ಕೆಲಸ ಕೇಳಲು ಬಂದಿದ್ದ ಎಕ್ಸ್‌ಟ್ರಾ ನಟಿಯಿರಬೇಕು. ನೋಡಲು ಸುಮಾರಾಗೇ ಇದ್ದ ಆಕೆಯನ್ನು ರಾಜವೀರ್ ಮಾತಿಗೆಳೆದಿದ್ದಾನೆ. ಯಾವುದೋ ಟೀವಿ ಸೀರಿಯಲ್ ಶೂಟಿಂಗ್ ನೋಡಿಕೊಂಡಿದ್ದ ಆಕೆ 'ಹೌದು ಇದರಲ್ಲಿ ನಾನೇ ಸೆಕೆಂಡ್ ಹೀರೋಯಿನ್ನು' ಎಂದಿದ್ದಾಳೆ. ಇನ್ನಾರೋ ಇಬ್ಬರು ಪ್ರೊಡ್ಯೂಸರ್‌ಗಳ ಹೆಸರು ಹೇಳಿ ಅವರು ನನ್ನನ್ನೇ ಹೀರೋಯಿನ್ ಮಾಡ್ತೀನಿ ಅಂತ ಪ್ರಾಮಿಸ್ ಮಾಡಿದ್ದಾರೆ ಅಂತ ರೈಲು ಬಿಟ್ಟಿದ್ದಾಳೆ. ಇದನ್ನೇ ನಂಬಿದ ರಾಜ್‌ವೀರ್ ನಾನೂ ಸಿನಿಮಾ ಮಾಡ್ತೀನಿ ಹೀರೋಯಿನ್ನಾಗ್ತಿಯಾ? ಎಂದು ಕೇಳಿದ್ದಾನೆ.

ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ ಮಮತಾಗೆ. ಯಾವುದೋ ದೊಡ್ಡ ಬ್ಯಾನರ್ ಇರಬೇಕೆಂದು ಲೆಕ್ಕ ಹಾಕಿದ ಆಕೆ ಶೂಟಿಂಗ್‌ಗೆ ಬಂದರೆ ಲೆಕ್ಕಾಚಾರ ತಲೆಕೆಳಗಾಗಿದೆ. ಚಿತ್ರದ ಹೆಸರಷ್ಟೇ ಜಗತ್‌ಗುರು. ಚಿತ್ರಾನ್ನ ಬಿಟ್ಟರೆ ಬೇರೆ ಗತಿಯಿಲ್ಲ. ಮೊದಮೊದಲು 'ನೀನೇ ಹೀರೋಯಿನ್' ಎನ್ನುತ್ತಿದ್ದ ರಾಜವೀರ್ ಬರಬರುತ್ತ ತನ್ನಂತೆ ನಾಲ್ಕೈದು ಮಂದಿ ಹುಡುಗಿಯರನ್ನು ಗುಡ್ಡೆ ಹಾಕಿ ಅವರಿಗೂ 'ಹೀರೋಯಿನ್' ರೈಲು ಹತ್ತಿಸುತ್ತಿದ್ದ.

ಅಸಲಿಗೆ 'ಜಗತ್‌ಗುರು' ಚಿತ್ರಕ್ಕೆ ಹೀರೋಯಿನ್ನೇ ಇರಲಿಲ್ಲ, ಶಾಸ್ತ್ರಕ್ಕಷ್ಟೇ ಬ್ಯಾಂಕ್ ಜನಾರ್ಧನ್, ಡಿಂಗ್ರಿ ನಾಗರಾಜ್, ಜೂನಿಯರ್ ನರಸಿಂಹರಾಜು, ಕರಿಸುಬ್ಬು ಥರದ ಸವಕಲು ನಟರನ್ನು ಹಾಕಿಕೊಂಡು ರೀಲು ಸುತ್ತುತ್ತಿದ್ದದ್ದು ಬಿಟ್ಟರೆ 'ಜಗತ್‌ಗುರು' ಅತ್ತ ಕಲಾತ್ಮಕವೂ ಅಲ್ಲದ ಇತ್ತ ಕಮರ್ಷಿಯಲ್ಲೂ ಅಲ್ಲದ ಕಾಂಜಿಪಿಂಜಿ ಚಿತ್ರವಾಗಿತ್ತು, ಇನ್ನೊಂದೆಡೆ ಮೊದಮೊದಲು ಒಂಟಿಯಾಗೇ ಬರುತ್ತಿದ್ದ ಮಮತಾ ಬರುಬರುತ್ತ ತನ್ನ ಜೊತೆ ಹುಡುಗರ ಹಿಂಡನ್ನೇ ಕಟ್ಟಿಕೊಂಡು ಶೂಟಿಂಗಿಗೆ ಬರಲಾರಂಭಿಸಿದ್ದಾಳೆ. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ ರಾಜ್‌ವೀರ್ ಅದೇನು ಲೆಕ್ಕ ಹಾಕಿದ್ದನೋ; ನೀನೇ ಹೀರೋಯಿನ್ನು ಎನ್ನುತ್ತಿದ್ದವನು ಇದ್ದಕ್ಕಿದ್ದಂತೆ, 'ನಿನಗೆ ಹೀರೋಯಿನ್ ರೋಲು ಸೆಟ್ ಆಗಲ್ಲ, ಸೈಡ್ ಆಕ್ಟಿಂಗ್ ಮಾಡು' ಎಂದುಬಿಟ್ಟ.

ಹಾಗಂತ ಮಮತಾ ತಲೆಬಿಸಿ ಮಾಡಿಕೊಳ್ಳಲಿಲ್ಲ, ಮೊದಲೇ ಕಾಂಜಿಪಿಂಜಿ ಸಿನಿಮಾ. ಹೀರೋಯಿನ್ ಆಗದಿದ್ದರೂ ಊಟ-ನಾಷ್ಟಾ ಮಾತ್ರವೇ ಗಟ್ಟಿ. ಯಾರಿಗೂ ನಯಾಪೈಸೆ ಬಿಚ್ಚದ ಚಿತ್ರಾನ್ನ ಗಿರಾಕಿ ರಾಜ್‌ವೀರ್‌ಗೆ ತಕ್ಕಶಾಸ್ತಿಯನ್ನೇ ಲೆಕ್ಕಹಾಕಿದ್ದ ಮಮತಾ ಬರುಬರುತ್ತ ಆತನ ಪತ್ನಿ ಜೊತೆ ವಿಪರೀತ ಸಲುಗೆಯಿಂದ ವರ್ತಿಸಲಾರಂಭಿಸಿದ್ದಾಳೆ. ಕೆಲಸವಿಲ್ಲದಿದ್ದರೂ ಪದೇಪದೇ ಮನೆಗೆ ಬಂದು ಡ್ಯಾನ್ಸ್ ಮಾಡುವುದು, ತಿಂಡಿ ಮಾಡುವುದು ಶುರು ಹಚ್ಚಿಕೊಂಡಿದ್ದಾಳೆ.

ಅಪಾಯದ ಯಾವುದೇ ಮುನ್ಸೂಚನೆಯಿಲ್ಲದ ರಾಜವೀರ್ ತನ್ನ ಪಾಡಿಗೆ ಶೂಟಿಂಗು ಅದೂಇದೂ ಎಂದು ಸುತ್ತಾಡಿಕೊಂಡಿದ್ದರೆ ಕಳೆದ ಅಕ್ಟೋಬರ್ 14 ರ ಮಟಮಟ ಮಧ್ಯಾಹ್ನ ಏಕಾಏಕಿ ನಾಲ್ವರು ಹುಡುಗರು ರಾಜ್‌ವೀರ್‌ನ ಮನೆಗೆ ನುಗ್ಗಿದ್ದಾರೆ. ಅದೂ ಆತನ ಪತ್ನಿ ಬಸಂತಿಬಾಯಿ ಒಬ್ಬಳೇ ಇದ್ದ ಸಮಯ ಕಾದು ಮನೆಗೆ ನುಗ್ಗಿದ ಹುಡುಗರು ಸಿನಿಮಾ ಶೂಟಿಂಗಿಗೆಂದು ರಾಜ್‌ವೀರ್ ತಿಜೋರಿಯಲ್ಲಿ ಜೋಪಾನವಾಗಿಟ್ಟಿದ್ದ ಎಂಟೂವರೆ ಲಕ್ಷ ರೂಪಾಯಿ ಕಿತ್ತೊಯ್ದುಬಿಟ್ಟರು. ರಾಜ್‌ವೀರ್ ಪತ್ನಿ[...] ಬಾಯಿಗೆ ಬಟ್ಟೆ ತುರುಕಿ ಕೈಕಾಲು ಕಟ್ಟಿಹಾಕಿದ್ದರು. ಬಂದು ನೋಡಿದ ರಾಜ್‌ವೀರ್ ಎದೆಎದೆ ಬಡಿದುಕೊಂಡವನೇ ಪೀಣ್ಯ ಇನ್ಸ್‌ಪೆಕ್ಟರ್ ಶ್ರೀನಿವಾಸರೆಡ್ಡಿಗೆ ದೂರು ಕೊಟ್ಟ. ಪೊಲೀಸರು ತಾ[...] ಏನು ಮಾಡಲು ಸಾಧ್ಯ?

ಆದರೆ ಮಮತಾ ಮಾತ್ರ ದಕಾಯಿತಿಯ ನಂತರ[...] ಪದೇಪದೇ ರಾಜ್‌ವೀರ್‌ನ ಕರಿಓಬನಹಳ್ಳಿಯ ಮ[...] ಬಂದು ಏನೂ ಆಗೇ ಇಲ್ಲ ಎಂಬಂತೆ ಆ[...] ಮಾಡಲಾರಂಭಿಸಿದಾಗಲೇ ಗುಮಾನಿ ಶುರುವಾಗಿ[...] ಅದನ್ನಾತ ಪೀಣ್ಯ ಪೊಲೀಸರಿಗೆ ಹೇಳಿದ್ದಾನೆ. ಆದ[...] ಸಾಕ್ಷಿ ಬೇಕಲ್ಲ! ಇದಾಗಿ ಹತ್ತೊಂಬತ್ತನೇ ದಿನಕ್ಕೆ ಸರಿಯಾ[...] ಅಂದರೆ 2008 ರ ನವೆಂಬರ್ ಏಳರ ಹೊತ್ತಿ[...] ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಇನ್ಸ್‌ಪೆಕ್[...] ಎನ್.ಎಚ್. ರಾಮಚಂದ್ರಯ್ಯರ ತಂಡ ಮೂಡಲಪಾ[...] ಯೋಗ ಅಲಿಯಾಸ್ ಯೋಗಾನಂದ ಎಂ[...] ಪಾತಕಿಯೊಬ್ಬನನ್ನು ಹಿಡಿದು ಬಾಯಿಬಿಡಿಸಿದರೆ [...] ಹೊರಗೆಡುಹಿದ್ದು ಇದೇ ಮಮತಾ ಅಲಿಯಾಸ್ ಕಾವ[...] ಹೆಸರನ್ನು!

ಸಿಕ್ಕಿಬಿದ್ದ ಯೋಗ, ಮೂಡಲಪಾಳ್ಯದ ಸುನೀಲ್‌ಸಿಂ[...] ಚೇತನ್ ಮತ್ತು ನಾಗರಬಾವಿಯ ಚಂದ್ರಾಲೇಔಟ[...] ಸುಧಾಕರ್ ಬಾಯಿಬಿಟ್ಟ ಕತೆಯೇ ವಿಚಿತ್ರವಾಗಿತ್ತು. ಸಿನಿ[...] ಶೂಟಿಂಗ್‌ನಲ್ಲಿ ಮೇಕಪ್‌ಮ್ಯಾನ್ ಆಗಿದ್ದ ಚಂದ್ರು ಉರ್ಫ[...] ರಾಜೇಂದ್ರನ ನೇತೃತ್ವದ ದಕಾಯಿತಿ ತಂಡದಲ್ಲಿ ಈ ಮಮ[...] ಅಲಿಯಾಸ್ ಕಾವ್ಯ ಪ್ರಮುಖ ಸದಸ್ಯೆಯಾಗಿದ್ದಳು. ಜಾ[...] ಸತೀಶ, ಮಣಿಕಂಠ ಉರ್ಫ್ ದಿಕ್ಕ, ಶ್ರೀರಾಂಪುರದ ರಾ[...] ಆಟೋ ಭರತ್ ಮತ್ತು ಸೋಮ ಮುಂತಾದ ಪಡ್ಡೆಗಳ[...] ಇದೇ ದಕಾಯಿತಿ ಗ್ಯಾಂಗಿನ ಸದಸ್ಯರಾಗಿದ್ದರು. ಈ ಪ[...] ಮಮತಾ ಅನುಕೂಲಸ್ಥ ಹೆಂಗಸರನ್ನು ಪರಿಚಯಿಸಿಕೊಂ[...] ಅವರ ಮನೆಯ ವಿವರಣೆ ಒದಗಿಸುತ್ತಿದ್ದಳು. ಆಕೆ[...] ಇರಾದೆಯ ಮೇರೆಗೆ ಉಳಿದ ಹುಡುಗರು ನುಗ್ಗಿ ದಕಾಯಿ[...] ಮಾಡುತ್ತಿದ್ದರು.

ಮೊದಲು ಜಯನಗರದ ಯಡಿಯೂರು ಕೆರೆ ಪಕ್[...] ಮನೆಗೆ ನುಗ್ಗಿ ಚಿನ್ನಾಭರಣಗಳನ್ನು ದೋಚಿದ ಇ[...] ಗ್ಯಾಂಗ್ ಪೀಣ್ಯದ ಕರಿಓಬನಹಳ್ಳಿಯ 'ಜಗತ್‌ಗುರ[...] ಹೀರೋ ರಾಜ್‌ವೀರ್‌ನ ಮನೆಯನ್ನು ದೋಚಿತ್ತು, ಮಿಕ್ಕ[...] ಬೈಕ್ ಕದಿಯುವುದು ಇದೀ ಗ್ಯಾಂಗಿನ ಫುಲ್‌ಟೈ[...] ದಂಧೆಯಾಗಿತ್ತು, ಕಾಮಾಕ್ಷಿಪಾಳ್ಯದ ಪೊಲೀಸರೆದುರ[...] ಯೋಗನ ಗ್ಯಾಂಗ್ 'ಕಾವ್ಯ' ಎಂಬ ಹೆಸರು ಹೇಳುತ್ತಿದ್ದಂ[...] ತಲೆಕೆಡಿಸಿಕೊಂಡ ಪೊಲೀಸರಿಗೆ ಆಕೆಯ ಇದೀ ವೃತ್ತಾಂತ[...] ಎಳೆಎಳೆಯಾಗಿ ಗೋಚರಿಸಿತ್ತು. ಕಾವ್ಯ ಉರ್ಫ್ ಮಮತ[...] ಮೂಲತಃ ಕೋಲಾರದ ರಾಧಮ್ಮ ಮತ್ತು ಲಕ್ಷ್ಮಯ[...] ದಂಪತಿಗಳ ಒಬ್ಬಳೇ ಮಗಳು.

ಈಕೆಯದೂ ವಿಚಿತ್ರ ಕತೆಯೇ. ಈಕೆಯ ತಂ[...] ಲಕ್ಷ್ಮಯ್ಯ ಒಂದಲ್ಲ ಎರಡು ಕೊಲೆ ಕೇಸಿನಲ್ಲಿ ಜೈಲುಪಾಲಾ[...] ಮೇಲೆ ಇದೀ ಕುಟುಂಬ ಅತಂತ್ರಕ್ಕೀಡಾಗಿದೆ. ಅಣ್ಣನ[...] ತಂದೆಯ ಜೊತೆಗೇ ಕೊಲೆ ಆರೋಪ ಹೊತ್ತು ಜೈಲ[...] ಸೇರಿಕೊಂಡಿದ್ದೇ ಗಾರ್ಮೆಂಟ್ ಕೆಲಸಕ್ಕೆಂದು ಬೆಂಗಳೂರಿ[...] ಬಂದವಳು ಕಾವ್ಯ. ಮೊದಲು ಗೆಳೆಯರ ಬಳಗದ[...] ಯಾರೋ ಹುಡುಗನ ಜೊತೆಗಿದ್ದಳು. ರಾಜ್‌ವೀರ್[...] ಮನೆಗೂ ದಕಾಯಿತಿ ಮುನ್ನ ಮೂಡಲಪಾಳ್ಯಕ್ಕೆ ತ[...] ಮನೆ ಬದಲಾಯಿಸಿ ಚೇತನ್ ಎಂಬಾತನ ಜೊತೆಗಿದ್ದಳ[...] ಮಿಕ್ಕಂತೆ ಸಿನಿಮಾ ಶೂಟಿಂಗಿಗೆಂದು ದಿನಗೂಲಿಯ ಮೇ[...] ಹೊಟ್ಟೆಪಾಡು ಆರಂಭಿಸಿದ ಕಾವ್ಯಳನ್ನು ತನ್ನ ದಕಾಯಿ[...] ಗ್ಯಾಂಗಿಗೆ ಬಳಸಿಕೊಂಡವನು ಮೇಕಪ್‌ಮ್ಯಾನ್ ಚಂದ[...] ಅಲಿಯಾಸ್ ರಾಜೇಂದ್ರ. ಅಪ್ಪ ಅಣ್ಣ ಕುಟುಂಬ ಕಲಹದ[...] ಜೈಲುಪಾಲಾದರೆ ಮಗಳು ಹೊಟ್ಟೆಪಾಡಿಗೆ ಬಿದ್ದು ಜೈಲ[...] ಸೇರಿದ್ದಾಳೆ.

ಜಗತ್‌ಗುರು ಕತೆ ಹಾಳಾಗಲಿ ಈಕೆಯ ನಿ[...] ಬದುಕಿದೆಯಲ್ಲ; ಸಿನಿಮಾಕ್ಕೆ ಅದಕ್ಕಿಂತ ಕತೆ ಬೇಕೆ?

■ ರಾ. ಸೋಮನಾಥ



ರಾಜ್‌ವೀರನಿಗೆ ಈ ತರದ ಯೋಗದ ಚಟವೂ ಇದೆ.

▶▶▶ 3

ಗಗನಕ್ಕೇರಿದ ಕೀರ್ತಿ, ಪಾತಾಳ ಮುಟ್ಟಿದ ಬದುಕು

ಪ್ರವಾಹವನ್ನು ನಿವಾರಿಸಲಾಗಲಿಲ್ಲ ಆ ಮೂಲಕ ...ವಿದಾರು ಜನ ನೀರು ಪಾಲಾಗುವುದನ್ನು, ...ಕ್ಷಾಂತರ ಜನ ನಿರಾಶ್ರಿತರಾಗುವುದನ್ನು ...ಡೆಯಲಾಗಲಿಲ್ಲ ಎಂಬುದು ಮರೆತೇ ಹೋಗಿದೆ.

ಇತ್ತೀಚೆಗೆ ಪ್ರಕಟಗೊಂಡ ವರದಿಗಳ ಪ್ರಕಾರ ಭಾರತದಲ್ಲಿ ಆರು ಲಕ್ಷಕ್ಕಿಂತ ಹೆಚ್ಚು ಜನ ಕೋಟ್ಯಾಧೀಶ್ವರರಾಗಿದ್ದಾರಂತೆ. ಅಷ್ಟೊಂದು ಜನ ಅಷ್ಟೊಂದು ಸಂಪತ್ತನ್ನು ಹೊಂದಿರುವುದು ಭಾರತ ಅಭಿವೃದ್ಧಿಗೊಳ್ಳುತ್ತಿರುವುದರ ಸೂಚನೆಯಂತೆ. ಆದರೆ ಆರು ಲಕ್ಷ ಕೋಟ್ಯಾಧಿಪತಿಗಳ ಬಗ್ಗೆ ...ತನಾಡುತ್ತಿರುವವರು 45 ಕೋಟಿ ಭಾರತೀಯರು ...ತ್ತಿಗೂ ಬಡತನದ ಬೇಗುದಿಯಲ್ಲಿ ಜೀವನ ...ಗಿಸುತ್ತಿರುವ ಬಗ್ಗೆ ಚಕಾರವೆತ್ತುತ್ತಿಲ್ಲ. ವಿಶ್ವ ಬ್ಯಾಂಕ್ ಇತ್ತೀಚೆಗೆ ಬಿಡುಗಡೆಗೊಳಿಸಿರುವ ವರದಿಯ ಪ್ರಕಾರ ಭಾರತದ ಶೇ. 41.6 ಜನಸಂಖ್ಯೆ (ಅಂದರೆ ...,60,00,000 ಜನರು) ಬಡತನ ರೇಖೆಯಡಿ ...ಕಿದ್ದಾರೆ. ಅಷ್ಟೇ ಅಲ್ಲ ಜಗತ್ತಿನ ಬಡವರಲ್ಲಿ ಶೇ. ... ಜನ ಭಾರತೀಯರೇ ಆಗಿದ್ದಾರೆ.

ಇದು ನಿಜಕ್ಕೂ ಅವಮಾನಕರ ಸಂಗತಿ. ಆದರೆ ...ವನ್ನು ಅಲ್ಲಗಳೆಯುವುದು ಹೇಗೆ? ಅಂತಹ ಒಂದು ...ರ್ಯಕ್ಕೆ ಭಾರತದ ಸರ್ಕಾರ ಮುಂದಾಯಿತು. ಭಾರತದ ಯೋಜನಾ ಆಯೋಗವು ಒಂದು ಹೊಸ ...ದಿಯನ್ನು ತಯಾರಿಸಿ ಭಾರತದಲ್ಲಿ ಕೇವಲ 27.5 ... ಜನ ಬಡತನ ರೇಖೆಯಡಿ ಇದ್ದಾರೆ ಎಂದಿತು. ...ವರದಿಗೆ ಸರ್ಕಾರ ಉಪಯೋಗಿಸಿದ ...ಾನದಂಡವೇನು ಗೊತ್ತೆ? ತಿಂಗಳಿಗೆ 356 ...ಪಾಯಿಗಳಿಗಿಂತ ಕಡಿಮೆ ಆದಾಯವನ್ನು ...ಹೊಂದಿರುವ ಕುಟುಂಬಗಳನ್ನು ಮಾತ್ರ ಬಡವರೆಂದು ...ಕ್ಕೆ ತೆಗೆದುಕೊಂಡಿದ್ದು. ಸದ್ಯ ಯಾವ ಆದಾಯವೂ ...ಲ್ಲದವರನ್ನು ಮಾತ್ರ ಬಡವರೆಂದು ಪರಿಗಣಿಸಲಿಲ್ಲ ...ಬುದೇ ಈ ದೇಶದ ಬಡವರ ಪುಣ್ಯ.

ಇನ್ನೊಂದು ಸಮೀಕ್ಷೆಯ ಪ್ರಕಾರ ದೇಶದ ...ಪನ್ಮೂಲದಲ್ಲಿ ಶೇ. 33 ಭಾಗ ಕೋಟ್ಯಾಧೀಶ್ವರರಾದ ... 10 ಜನರ ಪಾಲಾಗುತ್ತಿದ್ದರೆ, ಶೇ. 40 ಭಾಗ ಈ ...ಶದಲ್ಲೇ ಇರುವ ಶೇ. 20 ರಷ್ಟು ಮೇಲ್ವರ್ಗದ ...ತ್ತು ಮಧ್ಯಮ ವರ್ಗದ ಪಾಲಾಗುತ್ತಿದೆ. ಅಂದರೆ ...ಳಿದ ಶೇ. 70 ಜನರಿಗೆ ಸಿಗುತ್ತಿರುವುದು ದೇಶದ ...ಪನ್ಮೂಲದಲ್ಲಿ ಕೇವಲ 27% ಮಾತ್ರ.

ಛೆ, ಇದೆಲ್ಲಾ ತುಂಬಾ ಬೇಸರ ತರುವ ...ಷಯಗಳು. ಆದ್ದರಿಂದ ಚಂದ್ರಲೋಕದ ಬಗ್ಗೆ ...ತಿಸುತ್ತಾ, ಅದೆಷ್ಟೋ ಪತ್ರಕರ್ತರು ವರದಿ ...ಡಿದಂತೆ ಹಾಗೂ ಕಲಾವಿದರು ಕಲ್ಪಿಸಿಕೊಂಡಂತೆ ...ವರ್ಣ ಧ್ವಜದ ಚಿತ್ರವನ್ನು ಚಂದ್ರಯಾನದ ...ಪಕರಣ ಅಲ್ಲಿಬಿಟ್ಟು ಬಂದದ್ದನ್ನೇ) ಚಂದ್ರನ ಮೇಲೆ ...ಣ್ಣನೆ ಗಾಳಿಯಲ್ಲಿ ಮೃದುವಾಗಿ ಹಾರಾಡುತ್ತಿರುವ ಭಾರತದ ಧ್ವಜದ ಬಗ್ಗೆ ಹೆಮ್ಮೆ ಪಡುತ್ತಾ, ವಿಜಯ ಕರ್ನಾಟಕ ಎಂಬ ಪತ್ರಿಕೆ ನೀಡಿದ್ದ ಶೀರ್ಷಿಕೆ 'ಚಂದ್ರನ ...ಬನ' ಎಷ್ಟು ಹಿತಕರವಾಗಿದೆ ಎಂದು ...ೀಚಿಸುತ್ತಾ ಕಾಲ ಕಳೆಯುವುದು ಚೆನ್ನ ಅಲ್ಲವಾ...

■ ಗೌರಿ ಲಂಕೇಶ್


ಜೆಡಿಎಸ್ ಸೇನಾಪತಿ ಕುಮಾರಸ್ವಾಮಿ

ಎಚ್.ಡಿ. ಕುಮಾರಸ್ವಾಮಿ ಇನ್ನು ಮುಂದೆ ರಾಜ್ಯ ಜಾತ್ಯತೀತ ದಳದ ಅಧ್ಯಕ್ಷ.


ಪಕ್ಷದ ಗ್ರಾಮಮಟ್ಟದ ಕಾರ್ಯಕರ್ತರೊಂದಿಗೂ ಸ್ನೇಹಭಾವದಿಂದ ವರ್ತಿಸುವ, ದಣಿವರಿಯದ ಈ ಯುವ ನಾಯಕ ಈಗ ಕೊಂಚ ನಿತ್ರಾಣಗೊಂಡಿರುವ ಜೆಡಿಎಸ್ ಅನ್ನು ಮತ್ತೆ ಕಟ್ಟಿ ಬಲಿಷ್ಠಗೊಳಿಸಬಲ್ಲರಾ ಎಂಬ ಪ್ರಶ್ನೆ ಎಲ್ಲರ ಮನಸ್ಸಿನಲ್ಲೂ ಇದೆ.


ಈ ವಿಚಾರದಲ್ಲಿ ಕುಮಾರಸ್ವಾಮಿಯಲ್ಲಿ ದೇವೇಗೌಡರಲ್ಲಿ ಕಾಣಸಿಗುವ ಎಲ್ಲಾ ಗುಣಗಳೂ ಇವೆ. ಅಂದರೆ ಅತ್ಯಂತ ಕಷ್ಟದ, ಅಸಹಾಯಕ ಸಂದರ್ಭದಲ್ಲೂ ಛಲ ಬಿಡದೆ ಬಡಿದಾಡುವುದು ದೇವೇಗೌಡರ ಜಾಯಮಾನ. ಕುಮಾರಸ್ವಾಮಿಯೂ ಅದಕ್ಕೆ ಹೊರತಲ್ಲ. ಜೆಡಿಎಸ್‌ನ ಈಗಿನ ಸ್ಥಿತಿ ಏನೆಂಬುದು ಎಲ್ಲರಿಗೂ ಗೊತ್ತಿದೆ. ಕಳೆದ ಚುನಾವಣೆಯಲ್ಲಿ 59 ರಷ್ಟಿದ್ದ ದಳ ಶಾಸಕರ ಸಂಖ್ಯೆ ಈ ಬಾರಿ 29 ಕ್ಕಿಳಿಯಿತು. ವಚನ ಭ್ರಷ್ಟರೆಂಬ ಆರೋಪ, ಕಾಂಗ್ರೆಸ್-ಬಿಜೆಪಿಯೊಂದಿಗಿನ ಕಾದಾಟ, ಸಿದ್ದರಾಮಯ್ಯನವರ ಪ್ರಭಾವದಿಂದಾಗಿ ದೂರವಾದ ಕುರುಬ ಇನ್ನಿತರ ಹಿಂದುಳಿದ ವರ್ಗದ ಸಮೂಹ, ಯಡ್ಡಿಗೆ ಸಿಎಂ ಪದವಿ ತಪ್ಪಿಸಿದರೆಂಬ ಲಿಂಗಾಯತರ ಸಿಟ್ಟು ಇವೆಲ್ಲವನ್ನು ಏಕಕಾಲಕ್ಕೆ ಎದುರಿಸುತ್ತಲೇ ಚುನಾವಣೆ ಹೋರಾಟ ನಡೆಸಿದ ಜೆಡಿಎಸ್ ಕಡೆಗೂ ತನ್ನ ಅಸ್ತಿತ್ವ ಉಳಿಸಿಕೊಂಡೇ ಹೊರಬಂದಿತ್ತು.

ಆಮೇಲಾದರೂ ಏನು?



ಸ್ವತಃ ನಾಯಕ ಕುಮಾರಸ್ವಾಮಿಗೆ ಬೈಪಾಸ್ ಹಾರ್ಟ್ ಸರ್ಜರಿ, ಪಾರ್ಟಿ ಅಧ್ಯಕ್ಷ ಮೆರಾಜುದ್ದೀನ್‌ರ ಸಾವು, ಶಾಸಕರಾದ ಗೌರಿಶಂಕರ, ಉಮೇಶ್ ಕತ್ತಿ, ಶಿವಾನಂದ್... ಸೇರಿದಂತೆ ಐವರು ಶಾಸಕರ ಪಕ್ಷಾಂತರ, ಬಿಜೆಪಿಗಳ ಆಪರೇಷನ್ ಕಮಲದ ಕಿರುಕುಳ, ನೈಸ್ ಕಂಪನಿಯ ಬೇಣಿ ಕಾಟ, ನೂರೈವತ್ತು ಕೋಟಿ ಗಣಿ ಲಂಚ ಹಗರಣದ ತನಿಖೆ.... ಇಷ್ಟು ಸಾಲದೆಂಬಂತೆ ಈಗ ಕೆಎಂಎಫ್ ಅಧ್ಯಕ್ಷ ರೇವಣ್ಣನ ವಿರುದ್ಧ ಬಿಜೆಪಿಗಳ ಪಿತೂರಿ. ಒಂದಾ ಎರಡಾ ಹೇಳಿ. ಬಹುಶಃ ಬೇರೆ ಇನ್ಯಾವುದೇ ಲೀಡರ್‌ಗಳಾಗಿದಿದ್ದರೆ 'ಸಾಕಪ್ಪ ಸಾಕು ಈ ರಾಜಕೀಯದ ಸಾವಾಸ' ಎಂದು ತಲೆ ತಪ್ಪಿಸಿಕೊಂಡು ಅಖಾಡ ಬಿಟ್ಟೇ ಓಡಿಹೋಗುತ್ತಿದ್ದರೇನೊ!





ಆದರೆ ದೇವೇಗೌಡರಾಗಲಿ, ಕುಮಾರಸ್ವಾಮಿಯಾಗಲಿ ಇಂತದಕ್ಕೆಲ್ಲಾ ವಿಚಲಿತರಾದಂತೆ ಯಾರಿಗೂ ಅನ್ನಿಸುತ್ತಿಲ್ಲ. ಅಷ್ಟೆಲ್ಲಾ ಯಾಕೆ ಸಾರ್ವಜನಿಕವಾಗಿ ಅಷ್ಟೇನೂ ನಾಯಕತ್ವದ ಇಮೇಜ್ ಇರದ ರೇವಣ್ಣ ಕೂಡ ಇವತ್ತು ಬಿಜೆಪಿಗಳ ವಿರುದ್ಧ ರಣಕಹಳೆ ಊದುತ್ತಾ ಕೆಎಂಎಫ್ ಮೇಲೆ ತಮ್ಮ ಅಧಿಕಾರ ಉಳಿಸಿಕೊಳ್ಳಲು ಕತ್ತಿ ಹಿರಿದು ನಿಂತುಬಿಟ್ಟಿದ್ದಾರೆ.

ಈಗ ಹೇಳಿ

ಜೆಡಿಎಸ್ ಕತೆ ಮುಗಿದೇಹೋಯಿತು ಅನ್ನುವ ಧೈರ್ಯ ಯಾರಿಗಿದೆ? ದೇವೇಗೌಡ ಮತ್ತು ಸನ್ಸ್ ಮೂಲೆಗುಂಪಾದರು ಅನ್ನುವ ತಾಕತ್ತು ಯಾರಿಗಿದೆ?

ಮೇಲ್ನೋಟಕ್ಕೆ ಜೆಡಿಎಸ್ ದನಿ ಕುಂದಿದೆ ಅಂತನ್ನಿಸಬಹುದಾದರೂ ಆ ಪಕ್ಷಕ್ಕೆ ಈಗಲೂ 25 ಶಾಸಕರಿದ್ದಾರೆ. ಇಡೀ ರಾಜ್ಯದಲ್ಲಿರುವ 1005 ಜಿಲ್ಲಾ ಪಂಚಾಯ್ತಿ ಸದಸ್ಯರ ಪೈಕಿ ಈಗಲೂ ಜೆಡಿಎಸ್‌ನ 269 ಮಂದಿ ಸದಸ್ಯರಿದ್ದಾರೆ. ಅದೇ ರೀತಿ ನೂರಾ ಎಪ್ಪತ್ತೈದು ತಾಲ್ಲೂಕು ಪಂಚಾಯಿತಿಗಳ ಮೂರೂವರೆ ಸಾವಿರ ಚಿಲ್ಲರೆ ಸ್ಥಾನಗಳಲ್ಲಿ ದಳದ ಮೆಂಬರ್‌ಗಳೇ ಹತ್ತಿರತ್ತಿರ ಸಾವಿರ ಮಂದಿ ಇದ್ದಾರೆ. ಜೊತೆಗೆ ರಾಜ್ಯದ ಉದ್ದಗಲಕ್ಕೂ ದಳಕ್ಕೆ ಇನ್ನೂ ಹತ್ತಾರು ಸಾವಿರ ಗ್ರಾಮ ಪಂಚಾಯಿತಿ ಮೆಂಬರ್‌ಗಳೂ, ಲಕ್ಷಾಂತರ ಕಾರ್ಯಕರ್ತರೂ ಉಳಿದುಕೊಂಡಿದ್ದಾರೆ.

ಇದೆಲ್ಲದರ ಅರ್ಥ ಇಷ್ಟೆ.

ಜೆಡಿಎಸ್ ಅನ್ನು ಮುಗಿಸಿಬಿಡುವುದು ಬಿಜೆಪಿಗಳಿಗೆ ಅಷ್ಟು ಸುಲಭದ ಮಾತಲ್ಲ, ಅದೇ ರೀತಿ ಜೆಡಿಎಸ್ ಅನ್ನು ನಿರ್ಲಕ್ಷಿಸಿಬಿಡುವುದು ಕಾಂಗ್ರೆಸ್‌ಗೆ ಅಷ್ಟು ಸರಳವಾದ ಸಂಗತಿಯೂ ಅಲ್ಲ. ರಾಜಕೀಯದಲ್ಲಿ ದೇವೇಗೌಡರ ಮುಂದಾಲೋಚನೆ, ಬುದ್ಧಿವಂತಿಕೆ ಎಷ್ಟೆಂದು ಅರ್ಥ ಮಾಡಿಕೊಳ್ಳಲು ಜೆಡಿಎಸ್ ಅನ್ನೇ ಅವರು ಹೇಗೆ ಗಟ್ಟಿ ಮಾಡುತ್ತಿದ್ದಾರೆಂಬ ನಡೆಯಲ್ಲಿ ನೋಡಬೇಕು.

ಎಲ್ಲರಿಗೂ ಗೊತ್ತಿದ್ದಂತೆ ಕೇರಳದ ಜೆಡಿಎಸ್ ಸಂಸದ ವೀರೇಂದ್ರ ಕುಮಾರ್ ಬಿಜೆಪಿ ಜೊತೆಗಿನ ಸಖ್ಯ ವಿರೋಧಿಸಿ, ಗೌಡರನ್ನು ದೂಷಿಸಿ ದೂರವಾಗಿದ್ದರು. ಈಗ ಅಂತ ಖಡಕ್ ನಾಯಕನಿಗೂ ಗೌಡರು ಲಾಲಿಪಪ್ ತಿನ್ನಿಸಿ ಸಮಾಧಾನ ಮಾಡಿ ಈಗ ಜೊತೆಗೆ ಕರೆದುಕೊಂಡಿದ್ದಾರೆ. ಇತ್ತ ಕರ್ನಾಟಕದಲ್ಲೂ ಪಕ್ಷ ಬಿಟ್ಟಿರುವ ಸಿಂಧ್ಯಾ, ಸಿದ್ದರಾಮಯ್ಯ, ಇಬ್ರಾಹಿಂ ಇನ್ನೂ ಮುಂತಾದವರನ್ನು ಮತ್ತೆ ಕರೆತರಲು ಯತ್ನಿಸಲಾಯಿತು. ಸಿದ್ದು ಬರಲ್ಲ ಅಂತ ಗೊತ್ತಿದ್ದರೂ ಒಂದು ತಮಾಷೆ ರೀತಿಯ ಪ್ರಯತ್ನ ಮಾಡಲಾಗಿದೆಯಾದರೂ ಗೌಡರ ಮನಸ್ಸಿನಲ್ಲಿ ಸಿದ್ದು ಕಾಂಗ್ರೆಸ್‌ನಲ್ಲೇ ಇದ್ದು ಬಿಡಲಿ ಎಂಬ ಒಳ ಆಸೆಯಂತೂ ಇದೆ. ಅದು ಯಾಕೆಂದರೆ ಈಗ ಕಾಂಗ್ರೆಸ್ ಬಗ್ಗೆ ಮುನಿದುಕೊಂಡಿರುವ ಸಿದ್ದು ಅಕಸ್ಮಾತ್ ಬಹುಜನ ಪಾರ್ಟಿ ಸೇರಿಬಿಟ್ಟರೆ ಅವರ ಹಿಂದೆ ಹಿಂದುಳಿದ ವರ್ಗದ ನಾಯಕರ ಒಂದು ಗುಂಪೇ ಬಿಎಸ್‌ಪಿಯತ್ತ ಚಲಿಸುತ್ತದೆ. ಹಾಗಾಗಿಬಿಟ್ಟರೆ ಮುಂದಿನ ಸಂಸತ್ ಚುನಾವಣೆಯಲ್ಲಿ ದಳಕ್ಕೆ ಭಾರಿ ಹೊಡೆತ. ನಾಳೆ ಬರಬಹುದಾದ ಆಪತ್ತನ್ನು ಮೊನ್ನೆಯೇ ಯೋಚಿಸಿ, ನೆನ್ನೆಯೇ ಅದಕ್ಕೊಂದು ಪರಿಹಾರ ಹುಡುಕಿ ಇವತ್ತಿನ ದಿನ ಕುಳಿತು ನಾಳೆ-ನಾಡಿದ್ದರ ಬಗ್ಗೆ ಪ್ಲಾನ್ ಮಾಡುವುದೇ ದೇವೇಗೌಡರ ಬುದ್ಧಿವಂತಿಕೆ.

ಜೆಡಿಎಸ್ ಉಳಿದುಕೊಂಡಿರುವುದೇ ಅದರ ಅಧಿನಾಯಕ ಗೌಡರ ಮುಂದಾಲೋಚನೆ, ದಣಿವರಿಯದ ಓಡಾಟ, ಹೋರಾಟದ ಮನೋಭಾವಗಳಿಂದ.


ಈಗ ಗೌಡರ ಪಡಿಯಚ್ಚಿನಂತಿರುವ ಕುಮಾರಸ್ವಾಮಿ ರಾಜ್ಯ ಜೆಡಿಎಸ್‌ನ ಚುಕ್ಕಾಣಿ ಹಿಡಿಯುತ್ತಿದ್ದಾರೆ. ಇನ್ನು ಮುಂದೆ ರಾಜ್ಯ ರಾಜಕಾರಣ ಇನ್ನಷ್ಟು ರಂಗೇರಲಿರುವುದು ಖಚಿತ. ■

ಹಿಂದೂ ಟೆರರಿಸಂ: ಸಾಧ್ವಿ, ಸ್ವಾಮಿ, ಸೈನಿಕ

■ ಕುಮಾರ್ ಬುರಡಿಕಟ್ಟಿ








ಭರತಖಂಡವನ್ನು ರಕ್ಷಿಸುತ್ತೇವೆಂದು ಭಾಜಾಭಜಂತ್ರಿಗಳೊಂದಿಗೆ ಭಾರಿ ಭಾಷಣ ಬಿಗಿಯುತ್ತಿದ್ದ ಹಿಂದೂತ್ವವಾದಿಗಳಿಂದಲೇ ಭರತಖಂಡಕ್ಕೆ ಇಂತಹದ್ದೊಂದು ಆಪತ್ತು ಕಾದಿದೆಯೆಂದು ಪ್ರಾಯಶಃ ಬಹಳಷ್ಟು ಜನ ಕನಸಿನಲ್ಲಿಯೂ ಯೋಚಿಸಿರಲಿಲ್ಲವೇನೋ?

ಆರ್‌ಎಸ್‌ಎಸ್ ಒಂದು ದೇಶಪ್ರೇಮಿ ಸಂಘಟನೆ ಎಂದು ನಿಜಕ್ಕೂ ನಂಬಿಕೊಂಡವರು ಇದ್ದರು. ಭಜರಂಗದಳ ಮತ್ತು ವಿಶ್ವಹಿಂದೂ ಪರಿಷತ್ತಿನ ಮಂಗಗಳು ಅಲ್ಲಲ್ಲಿ ಚರ್ಚುಗಳಿಗೆ ಬೆಂಕಿಯಿಟ್ಟಾಗ, ಮುಸ್ಲಿಮರ ಮೇಲೆ ಹಲ್ಲೆಗಿಳಿದಾಗ ಅದನ್ನೊಂದು 'ಕಿತಾಪತಿ' ಎಂದಷ್ಟೇ ಗೇಲಿ ಮಾಡಿದ್ದವರೂ ಇದ್ದರು. ಬಿಜೆಪಿಯು ತನಗೆ ಸಿಕ್ಕ ಅಧಿಕಾರವನ್ನು ಬಳಸಿಕೊಂಡು ಶಾಲಾ ಪಠ್ಯಪುಸ್ತಕಗಳಲ್ಲಿ ಹಿಂದೂತ್ವವಾದಿ ಸಿದ್ಧಾಂತವನ್ನು ತುರುಕುವ ಮೂಲಕ ಎಳೆಯ ಮನಸ್ಸುಗಳಿಗೆ ಹಿಂದೂತ್ವದ ವಿಷಯುಣಿಸಿದಾಗ ಅದೊಂದು 'ಸೌಮ್ಯಯುತ ಕೇಸರೀಕರಣ' ಎಂದಷ್ಟೇ ಉದಾಸೀನ ಮಾಡಿದವರೂ ಉಂಟು.

ಆದರೆ, ದೇಶವನ್ನು ಹೊರಗಿನ ಶತ್ರುಗಳಿಂದ ರಕ್ಷಿಸುವುದಕ್ಕಾಗಿಯೇ ಕಟಿಬದ್ಧವಾಗಿರುವ, ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಮತ್ತು ಲಕ್ಷಾಂತರ ಧೀರಯೋಧರಿಂದ ಬಲಿಷ್ಠವಾಗಿರುವ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಸೈದ್ಧಾಂತಿಕ-ರಾಜಕೀಯ ನಿಲುವುಗಳಿಗೆ ಅಂಟಿಕೊಳ್ಳದೇ ಭಾರತೀಯ ಸಂವಿಧಾನದ ಜಾತ್ಯತೀತ ತತ್ವವನ್ನು ಪರಿಪಾಲಿಸುತ್ತಿರುವ ಭಾರತೀಯ ಸೇನೆಯನ್ನೇ ಅವರು ಕೇಸರೀಮಯಗೊಳಿಸಿ ಇಡೀ ಭರತಖಂಡವನ್ನೇ ಸರ್ವನಾಶ ಮಾಡುವುದಕ್ಕೆ ಅದನ್ನು ಬಳಸಿಕೊಳ್ಳುತ್ತಾರೆ, ಆ ಮೂಲಕ ದೇಶದಲ್ಲಿ ಹಿಂದೂತ್ವದ ಫ್ಯಾಸಿಸಂ ತರುತ್ತಾರೆ ಎಂದು ದೂರದೃಷ್ಟಿಯಿಂದ ನೋಡಿ ಆತಂಕಪಟ್ಟವರು ಬೆರಳೆಣಿಕೆಯಷ್ಟು ಜನ ಮಾತ್ರವೆ.



ಆ ಬೆರಳೆಣಿಕೆಯಷ್ಟು ಜನರ ಆತಂಕವೇ ಈಗ ನಿಜವಾಗುತ್ತಿದೆ. ಮಹಾರಾಷ್ಟ್ರದ ಮಾಲೇಗಾಂವ್ ಸ್ಫೋಟದಲ್ಲಿ ಭಾಗಿಯಾಗಿದ್ದಾನೆಂದು ಭಾರತೀಯ ಸೇನೆಯಲ್ಲಿ ಕರ್ತವ್ಯನಿರತನಾಗಿರುವ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತನನ್ನು ಮಹಾರಾಷ್ಟ್ರದ ಭಯೋತ್ಪಾದನೆ ನಿಗ್ರಹ ದಳ (ಎಟಿಎಸ್) ಬಂಧಿಸಿದೆ. ಜೊತೆಗೆ ಭಾರತೀಯ ಸೇನೆಯಲ್ಲಿ ಮೇಜರ್ ಆಗಿ ಕಾರ್ಯನಿರ್ವಹಿಸಿದ ನಿವೃತ್ತ ಸೇನಾಧಿಕಾರಿ ರಮೇಶ್ ಶಿವಾಜಿ ಉಪಾಧ್ಯ ಅವರನ್ನೂ ಎಟಿಎಸ್ ಬಂಧಿಸಿದೆ. ವಿಚಾರಣೆ ವೇಳೆಯಲ್ಲಿ ಮಾಲೇಗಾಂವ್ ಬಾಂಬ್ ಸ್ಫೋಟದ ರೂವಾರಿ ತಾನೆ ಎಂದು ಶ್ರೀಕಾಂತ್ ಪುರೋಹಿತ್ ಒಪ್ಪಿಕೊಂಡಿದ್ದಾನೆ. ತಾನೇ ಸಂಚನ್ನು ರೂಪಿಸಿದ್ದು ಮಾತ್ರವಲ್ಲ ಅಭಿನವ ಭಾರತ್ ಸಂಘಟನೆಗೆ ಸ್ಫೋಟ ನಡೆಸುವುದಕ್ಕಾಗಿ ಆರ್‌ಡಿಎಕ್ಸ್ ಮತ್ತಿತರ ಆಯುಧಗಳನ್ನು ಪೂರೈಸಿದ್ದಾಗಿಯೂ ಆತ ಒಪ್ಪಿಕೊಂಡಿದ್ದಾನೆ. ನಂತರದ ವಿಚಾರಣೆಯಲ್ಲಿ ಈತ ಸೇನಾ ಗುಪ್ತಚರ ವಿಭಾಗದ ನಿಧಿಯನ್ನು ಭಯೋತ್ಪಾದನಾ ಚಟುವಟಿಕೆಗಳಿಗೆ ಬಳಸಿಕೊಂಡಿದ್ದ ಎಂಬ ಆಘಾತಕಾರಿ ವಿಚಾರವನ್ನೂ ಎಟಿಎಸ್ ತನಿಖೆ ಮಾಡಿ ಹೊರಗೆಡವಿದೆ. ಬಾಂಬ್ ಸ್ಫೋಟಗಳಂಥ ಭಯೋತ್ಪಾದನಾ ಕೃತ್ಯಗಳನ್ನು ನಡೆಸುವುದಕ್ಕಾಗಿ ಹಣ ಯಾರ್‍ಯಾರಿಂದ ಯಾರ್‍ಯಾರಿಗೆ ಹೋಗಿದೆ ಎಂಬ ವಿಚಾರಗಳ ಬಗ್ಗೆ ಎಟಿಎಸ್ ತನಿಖೆ ನಡೆಸುತ್ತಿದೆ. ಅವರ ಮೇಲಿರುವ ಆರೋಪ ಸಾಬೀತಾದರೆ ಭರತಖಂಡಕ್ಕೆ ಕಾದಿರುವ ಅಪಾಯವನ್ನು ವಿವರಿಸಲೂ ಸಾಧ್ಯವಿಲ್ಲ.



ಒಟ್ಟು ಇಪ್ಪತ್ತೈದು ಲಕ್ಷದಷ್ಟು ಸಂಖ್ಯೆಯ ಯೋಧರನ್ನು, ಸಿಬ್ಬಂದಿಗಳನ್ನು, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಭಾರತೀಯ ಸೇನೆ ಇಡೀ ಪ್ರಪಂಚದಲ್ಲಿಯೇ ಎರಡನೇ ಅತಿದೊಡ್ಡ Standing Army ಆಗಿದೆ (ಅಂದರೆ, ಕೆಲವು ದೇಶಗಳ ಸೈನ್ಯಗಳು ಯುದ್ಧಗಳ ಸಂದರ್ಭದಲ್ಲಿ ಮಾತ್ರವೇ ಕಾರ್ಯನಿರ್ವಹಿಸುತ್ತಿದ್ದು ಉಳಿದಂತೆ ಸಾಪೇಕ್ಷವಾಗಿ ಶಾಂತವಾಗಿರುವ ಸಮಯದಲ್ಲಿ ನಾಗರಿಕ ಸೇವೆಯಲ್ಲಿ ತೊಡಗಿರುತ್ತವೆ. ಆದರೆ, ಭಾರತೀಯ ಸೇನೆ ಹಾಗಲ್ಲ, ಯುದ್ಧವಿರಲಿ ಇಲ್ಲದಿರಲಿ, ಅದು ಯಾವಾಗಲೂ ಯುದ್ಧಕ್ಕೆ ಸಜ್ಜಾಗಿ ನಿಂತಿರುತ್ತದೆ. ಇದನ್ನು Standing Army ಎಂದು ಕರೆಯಲಾಗುತ್ತದೆ.) ಭಾರತೀಯ ಸಶಸ್ತ್ರ ಪಡೆಗಳು (ವಾಯುಸೇನೆ, ಭೂಸೇನೆ ಮತ್ತು ನೌಕಾಪಡೆ) 'ನಾಗರಿಕರಿಂದ ನಿಯಂತ್ರಿಸಲ್ಪಡುವ ಸೈನ್ಯ' ಎಂಬ ತತ್ವದಡಿಯಲ್ಲಿಯೇ ಕಾರ್ಯನಿರ್ವಹಿಸುವ ಸೇನೆಯಾಗಿದೆ. ಅಂದರೆ, ಸೈನ್ಯವೇ ನಾಗರಿಕರನ್ನು ನಿಯಂತ್ರಿಸುವ ಸೇನಾಪ್ರಧಾನ ತತ್ವಕ್ಕೆ ವಿರುದ್ಧವಾಗಿ ಪ್ರಜಾತಾಂತ್ರಿಕವಾಗಿ ನಾಗರಿಕರಿಂದ ಆಯ್ಕೆಗೊಳ್ಳುವ ರಾಜಕೀಯ ನಾಯಕತ್ವವೇ ಸೇನೆಯನ್ನು ನಿಯಂತ್ರಿಸುತ್ತದೆ. ಆದರೂ ಯಾವುದೇ ರಾಜಕೀಯ-ಸಿದ್ಧಾಂತಗಳಿಗೆ ಅಂಟಿಕೊಳ್ಳದೇ ಹೊರಗಿನ ಶತ್ರುಗಳಿಂದ ದೇಶವನ್ನು ರಕ್ಷಿಸುವ ಮಹತ್ತರ ಹೊಣೆಗಾರಿಕೆಯನ್ನು ಹೊತ್ತುಕೊಂಡು ಸಂವಿಧಾನದ ಜಾತ್ಯತೀತ ಮೌಲ್ಯಗಳಿಗೆ ಕಟಿಬದ್ಧವಾಗಿ ಇರುವ ಸೇನೆಯಿದು. ಇಂತಹ ಸೇನೆಯೇ ಹಿಂದೂತ್ವವಾದಿಗಳ ಕೇಸರಿ ಸಿದ್ಧಾಂತಕ್ಕೆ ತುತ್ತಾಗಿಬಿಟ್ಟರೆ ಆಗುವ ಅಪಾಯವನ್ನು ಊಹಿಸಲು ಸಾಧ್ಯವೆ? ಈಗ ಮಾಲೇಗಾಂವ್ ಸ್ಫೋಟ ಪ್ರಕರಣದಲ್ಲಿ ಕರ್ತವ್ಯನಿರತ ಸೇನಾಧಿಕಾರಿಯೇ ಭಾಗಿಯಾಗಿರುವುದನ್ನು ನೋಡಿದರೆ ಅಂತಹ ಅಪಾಯ ದೂರದಲ್ಲಿಲ್ಲ ಎನಿಸುತ್ತದೆ.

ಇಡೀ ಪಾಕಿಸ್ತಾನದ ಒಟ್ಟಾರೆ ಜನಸಂಖ್ಯೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಭಾರತದಲ್ಲಿ ಮುಸ್ಲಿಮರ ಜನಸಂಖ್ಯೆಯಿದೆ. ಅಷ್ಟು ದೊಡ್ಡ ಪ್ರಮಾಣದಲ್ಲಲ್ಲದಿದ್ದರೂ

▶▶▶14

ಭೋನ್ಸಾಲಾ ಮಿಲಿಟರಿ ಸ್ಕೂಲ್
ಭಯೋತ್ಪಾದಕರನ್ನು ಉತ್ಪಾದಿಸುವ ಕಾರ್ಖಾನೆ

ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ ಎಂಬ ಹಿಂದೂತ್ವವಾದಿ ಭಯೋತ್ಪಾದಕನನ್ನು ಸೃಷ್ಟಿಸಿದ್ದು ನಾಸಿಕ್‌ನಲ್ಲಿರುವ ಭೋನ್ಸಾಲಾ ಮಿಲಿಟರಿ ಸ್ಕೂಲ್. ಇದನ್ನು 1937ರಲ್ಲಿ ಸ್ಥಾಪಿಸಿದವನು ಬಿ.ಎಸ್.ಮೂಂಜೆ ಎಂಬ ಹಿಂದೂತ್ವವಾದಿ. ಬ್ರಿಟಿಷ್-ಇಂಡಿಯನ್ ಆರ್ಮಿಯಲ್ಲಿ ಡಾಕ್ಟರ್ ಆಗಿ ಸೇವೆ ಸಲ್ಲಿಸಿದ ಈತ ಇಟಲಿಯ ಸರ್ವಾಧಿಕಾರಿ ಮುಸ್ಸೋಲೋನಿಯನ್ನು ಖುದ್ದಾಗಿ ಭೇಟಿಯಾಗಿ ಆತನ ಫ್ಯಾಸಿಸ್ಟ್ ಸಿದ್ಧಾಂತದಿಂದ ಬಹಳಷ್ಟು ಪ್ರಭಾವಿತನಾಗಿದ್ದ. ಇಟಲಿಯಲ್ಲಿ ಮುಸಲೋನಿಯ ಫ್ಯಾಸಿಸ್ಟ್ ಸಂಸ್ಥೆಗಳನ್ನೆಲ್ಲ ಅಧ್ಯಯನ ಮಾಡಿ ನಾಸಿಕ್‌ನಲ್ಲಿ ಬಂದು ಈ ಮಿಲಿಟರಿ ಶಾಲೆಯನ್ನು ಪ್ರಾರಂಭಿಸಿದ. ಅಕ್ಷರಶಃ ಇಂದು ಅದು ಹಿಂದೂತ್ವ ಭಯೋತ್ಪಾದಕರನ್ನು ಉತ್ಪಾದಿಸುವ ಕಾರ್ಖಾನೆಯಾಗಿದೆ.

ಇಲ್ಲಿ ಸೇರುವ ವಿದ್ಯಾರ್ಥಿಗಳಿಗೆ ಮಿಲಿಟರಿ ಜ್ಞಾನದ ಜೊತೆಗೆ ಹಿಂದೂತ್ವದ ನಂಜನ್ನೂ ವ್ಯವಸ್ಥಿತವಾಗಿ ತುರುಕಲಾಗುತ್ತದೆ. ಮಹಾರಾಷ್ಟ್ರದ ಮಾಲೇಗಾಂವ್, ಮಧ್ಯಪ್ರದೇಶದ ನಾಂದೇಡ್, ಗುಜರಾತ್‌ನ ಮೊಡಸಾ, ರಾಜಸ್ಥಾನದ ಅಜ್ಮೇರ್‌ಗಳಲ್ಲಿ ಬಾಂಬ್ ಸ್ಫೋಟಿಸಿದ ಆರೋಪಕ್ಕೊಳಗಾಗಿರುವ ಆರೋಪಿಗಳೆಲ್ಲರೂ ಅಭಿನವ ಭಾರತ್ ಸಂಘಟನೆಗೆ ಸೇರಿದವರಾಗಿದ್ದಾರೆ. ಅಭಿನವ ಭಾರತ್ ತನ್ನ ಸಭೆಗಳನ್ನು ನಡೆಸುತ್ತಿದ್ದುದು, ತನ್ನ ಕಾರ್ಯಕರ್ತರಿಗೆ ಮಿಲಿಟರಿ ಟ್ರೇನಿಂಗ್ ಕೊಡುತ್ತಿದ್ದುದು ಇದೇ ಶಾಲೆಯಲ್ಲಿ. 2001ರಲ್ಲಿ ಇದೇ ಶಾಲೆಯಲ್ಲಿ ಸಂಘಪರಿವಾರದ 54 ಮಂದಿಗೆ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ತಯಾರಿಸುವ, ಬಳಸುವ ಬಗ್ಗೆ ತರಬೇತಿ ನೀಡಲಾಗಿತ್ತೆಂಬುದು ಇದೀಗ ತನಿಖೆಯಿಂದ ಹೊರಬಿದ್ದಿದೆ. ಈ ತರಬೇತಿಯನ್ನು ಬೇರೆ ಯಾರೂ ಅಲ್ಲ, ಈಗ ಬಂಧಿತನಾಗಿರುವ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತನೇ ಕೊಟ್ಟಿದ್ದ.

ಮದರಸಾಗಳು ಜಿಹಾದಿಗಳನ್ನು ಉತ್ಪಾದಿಸುತ್ತಿವೆ ಎಂದು ಮಾಧ್ಯಮಗಳು, ಹಿಂದೂತ್ವ ಕೋಮುವಾದಿಗಳು ಬೊಬ್ಬಿಡುತ್ತಲೇ ಬಂದಿದ್ದರು. ಈಗ ಭಯೋತ್ಪಾದಕರನ್ನು ಉತ್ಪಾದಿಸುತ್ತಿರುವ ಭೋನ್ಸಾಲಾ ಮಿಲಿಟರಿ ಸ್ಕೂಲ್ ಬಗ್ಗೆ ಎಲ್ಲರೂ ಬಾಯ್ಮುಚ್ಚಿಕೊಂಡಿದ್ದಾರೆ.

ಇದೇ ಮೊದಲಲ್ಲ!

ಸಂಘಪರಿವಾರದ ಚೆಡ್ಡಿಗಳೇ ಖುದ್ದಾಗಿ ಬಾಂಬುಗಳನ್ನು ತಯಾರಿಸಿ ಅವುಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಸ್ಫೋಟಿಸಿ, ಅದನ್ನು ಇಸ್ಲಾಮಿಕ್ ಭಯೋತ್ಪಾದಕರ ತಲೆಗೆ ಕಟ್ಟಿ ಇಡೀ ಮುಸ್ಲಿಮ್ ಸಮುದಾಯವನ್ನೇ ಭಯೋತ್ಪಾದಕರೆಂದು ಚಿತ್ರಿಸಿ ಅವರ ಮೇಲೆ ದಾಳಿ ಮಾಡುವ ಕುತಂತ್ರ ನಿನ್ನೆ ಮೊನ್ನೆ ಪ್ರಾರಂಭವಾದ ಪ್ರಕ್ರಿಯೆಯೇನಲ್ಲ.

ಈ ಹಿಂದೆ ಕಾನ್ಪುರದ ಹಾಸ್ಟೆಲ್ ಒಂದರಲ್ಲಿ ಬಾಂಬ್ ತಯಾರಿಸುತ್ತಿದ್ದಾಗಲೇ ಅಕಸ್ಮಾತ್ತಾಗಿ ಅದು ಸ್ಫೋಟಗೊಂಡು ರಾಜೀವ್ ಅಲಿಯಾಸ್ ಪಿಯೂಶ್ ಮತ್ತು ಭೂಪಿಂದರ್ ಸಿಂಗ್ ಅರೋರ ಎಂಬಿಬ್ಬರು ಯುವಕರು ಸತ್ತುಹೋಗಿದ್ದರು.

ಆ ಘಟನೆಯಲ್ಲಿ ಸತ್ತ ಪಿಯೂಶ್, ಎಸ್.ಎಸ್. ಮಿತ್ರ ಎಂಬ ಭಜರಂಗದಳದ ನಾಯಕನ ಮಗನಾಗಿದ್ದ ನಲ್ಲದೇ ಖುದ್ದು ಭಜರಂಗದಳದ ಕಾರ್ಯಕರ್ತನಾಗಿದ್ದ, ಇನ್ನು ಭೂಪಿಂದರ್ ಸಿಂಗ್ ಎಂಬುವವನು ಭಜರಂಗದಳದ ಕಾನ್ಪುರ ನಗರ ಘಟಕದ ಸಂಚಾಲಕನಾಗಿದ್ದ. ಅವರು ತಯಾರಿಸುತ್ತಿದ್ದ ಬಾಂಬ್ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಅಕಸ್ಮಾತ್ತಾಗಿ ಅದು ಸ್ಫೋಟಗೊಂಡಾಗ ಇಡೀ ಹಾಸ್ಟೆಲ್‌ನ ಗೋಡೆಗಳೆಲ್ಲಾ ಬಿರುಕುಬಿಟ್ಟಿದ್ದವು. ಸ್ಫೋಟದ ತುಣುಕುಗಳು 50 ಮೀಟರ್ ಆಚೆಗೆ ಹೋಗಿ ಬಿದ್ದಿದ್ದವು. ಘಟನೆಯಲ್ಲಿ ಹತ್ತಾರು ವಿದ್ಯಾರ್ಥಿಗಳೂ ಗಂಭೀರವಾಗಿ ಗಾಯಗೊಂಡಿದ್ದರು. ಅಲ್ಲದೇ ಪೊಲೀಸರು ಇಡೀ ಪ್ರದೇಶವನ್ನು ಶೋಧಿಸಿದಾಗ ಇನ್ನೂ ಅಚ್ಚರಿ ಕಾದಿತ್ತು, ಅರ್ಧ ಕಾನ್ಪುರವನ್ನು ಸರ್ವನಾಶ ಮಾಡುವುದಕ್ಕೆ ಬೇಕಾದಷ್ಟು ಸ್ಫೋಟಕ ವಸ್ತುಗಳು ಅಲ್ಲಿ ದೊರೆತವು.

ಕಾನ್ಪುರದ ರೀತಿಯಲ್ಲಿಯೇ 2006ರಲ್ಲಿ ನಾಂದೇಡ್‌ನಲ್ಲೂ ಬಾಂಬ್ ತಯಾರಿಸುತ್ತಿದ್ದಾಗ ಇಬ್ಬರು ಭಜರಂಗದಳದ ಕಾರ್ಯಕರ್ತರು ಸತ್ತು ಹೋದರು. ಆಗಲೂ ಸಿಬಿಐ ಭಜರಂಗದಳವನ್ನು ರಕ್ಷಿಸುವುದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನು ಚಾಚೂತಪ್ಪದೇ ಮಾಡಿತು.

ಲಕ್ಷ್ಮಣ್ ರಾಜ್‌ಕೊಂಡ್ವರ್ ಎಂಬ ಆರ್‌ಎಸ್‌ಎಸ್ ಕಾರ್ಯಕರ್ತನೊಬ್ಬನ ಮನೆಯಲ್ಲಿ ಬಾಂಬ್ ತಯಾರಿಸುತ್ತಿದ್ದಾಗಲೇ ಅದು ಸ್ಫೋಟಗೊಂಡು ಸಂಘಪರಿವಾರದ ಕಾರ್ಯಕರ್ತ ವೆಂಕಟೇಶ್ ಫಣ್ಣೆ ಸತ್ತು ಹೋದ ಎಂಬುದನ್ನು 2003-04ರಲ್ಲಿ ನಾಂದೇಡ್‌ನಲ್ಲಿ ನಡೆದ ಬಾಂಬ್ ಸ್ಫೋಟದ ಆರೋಪಿಗಳಲ್ಲೊಬ್ಬನಾದ ಸಂಜಯ್ ಚೌಧರಿ 2006ರಲ್ಲಿ ತನಿಖೆಯ ಸಮಯದಲ್ಲಿ ತಿಳಿಸಿದ್ದನು.



ಅದು ಹಳೆಯ ಮಾತು ಎನ್ನಿಸಬಹುದು. ಆದರೆ ಇದೇ ತಿಂಗಳ 9ರಂದು ಕೇರಳದ ಕಣ್ಣೂರು ಜಿಲ್ಲೆಯ ಚಿರುವಂತೇರಿ ಎಂಬಲ್ಲಿ ಬಾಂಬ್ ತಯಾರಿಸುತ್ತಿದ್ದಾಗ ಅದು ಅಕಸ್ಮಾತ್ ಸ್ಫೋಟಗೊಂಡು ಕೆ.ಪ್ರದೀಪ್ ಮತ್ತು ಕೆ.ದಿಲೀಪ್ ಎಂಬ ಇಬ್ಬರು ಆರ್‌ಎಸ್‌ಎಸ್ ಕಾರ್ಯಕರ್ತರು ಸತ್ತರು. ಈ ಘಟನೆಯಲ್ಲಿ ಸಿಕ್ಕ ಸುಳಿವುಗಳನ್ನಾಧರಿಸಿ ಕೇರಳ ಪೊಲೀಸರು ತನಿಖೆಯನ್ನು ಮುಂದುವರೆಸಿದಾಗ ಇನ್ನಷ್ಟು ಅಚ್ಚರಿ ಕಾದಿತ್ತು, ಇದೇ ಜಿಲ್ಲೆಯ ಕೊಳವಲ್ಲೂರು ಪ್ರದೇಶದಲ್ಲಿ ಪರಿಶೀಲನೆ ನಡೆಸಿದಾಗ 125 ಶಕ್ತಿಶಾಲಿ ಬಾಂಬ್‌ಗಳು ದೊರೆತವು. ಆರ್ಸನಿಕ್ ಆಸಿಡ್ ಸೇರಿಸಿ ತಯಾರಿಸಲಾದ ಈ ಬಾಂಬುಗಳು ಅತ್ಯಂತ ಶಕ್ತಿಶಾಲಿಯಾಗಿದ್ದವು. ಇದರ ಜೊತೆಗೆ ಬಾಂಬ್ ತಯಾರಿಕೆಗೆ ಬಳಸಲಾಗುವ ಕೋವಿ ಮದ್ದು, ಗಾಜಿನ ಚೂರು, ಮೊಳೆ ಮತ್ತಿತರ ಸಾಮಗ್ರಿಗಳೂ ದೊರೆತವು.

ಆದರೆ, ಈ ಯಾವ ಸುದ್ದಿಗಳೂ ದೊಡ್ಡ ಮಟ್ಟದಲ್ಲಿ ಸುದ್ದಿಯಾಗಲೇ ಇಲ್ಲ ಎಂಬುದು ಬೇರೆ ಮಾತು. ಇದೇ ಕೆಲಸವನ್ನು ಯಾರಾದರೂ ಮುಸ್ಲಿಮರು ಮಾಡಿದ್ದರೆ ಇಡೀ ದೇಶದಾದ್ಯಂತ ದೊಡ್ಡ ಮಟ್ಟದ ಹುಯಿಲೆಬ್ಬಿಸುತ್ತಿದ್ದರು; ಹಿಂದು-ಮುಂದು ನೋಡದೆ ಮುಸ್ಲಿಮ್ ಸಮುದಾಯದ ಮೇಲೆ ದಾಳಿ ಪ್ರಾರಂಭಿಸುತ್ತಿದ್ದರು.

ಹೀಗೆ, ಸಂಘಪರಿವಾರವೇ ಖುದ್ದಾಗಿ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿರುವುದಕ್ಕೆ ದೊಡ್ಡ ಚರಿತ್ರೆಯೇ ಇದೆ. ಬಾಂಬುಗಳನ್ನು ಕೇವಲ ಇಸ್ಲಾಮಿಕ್ ಭಯೋತ್ಪಾದಕರು ಮಾತ್ರವೇ ಸ್ಫೋಟಿಸುತ್ತಾರೆಂಬ ಮನಸ್ಥಿತಿಯಿಂದ ಇನ್ನಾದರೂ ಮಾಧ್ಯಮಗಳು, ಪೊಲೀಸರು ಹೊರಬರಬೇಕಿದೆ. ಯಾವುದೇ ಸ್ಫೋಟ ಸಂಭವಿಸಿದಾಗಲೂ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿದರೆ ಅವುಗಳಲ್ಲಿ ಹಿಂದೂ ಭಯೋತ್ಪಾದಕರ ಪಾತ್ರ ಎಷ್ಟಿದೆ, ಮುಸ್ಲಿಮ್ ಭಯೋತ್ಪಾದಕರ ಪಾತ್ರ ಎಷ್ಟಿದೆ ಎಂಬ ಅಸಲೀಯತ್ತು ಹೊರಬರುತ್ತದೆ.

ಆರೋಗ್ಯ ಇಲಾಖೆ ಖರೀದಿ ಮೋಸ

ಸುಂದರಿ ಭಾನು ಪಾದಕ್ಕೆ 13 ಕೋಟಿ



ನಿಗೂಢ ಹೆಂಗಸು ಭಾನು

ರಾ ಸೋಮನಾಥ್

ಮದ್ದು ಮತ್ತು ಆಯುಧ ಬಳಸಿ ಏನನ್ನು ಸಾಧಿಸಲ ...ವೋ ಅದನ್ನು ಹೆಣ್ಣಿನ ಮೂಲಕ ಸಾಧಿಸು ...ದು ಚಾಣಕ್ಯನೀತಿ!

...ದೇ ತಂತ್ರ ಬಳಸಿದ ಚಾಣಾಕ್ಷನೊಬ್ಬ ಸರ್ಕಾರಿ ...ಕ್ಕೆ ಹದಿಮೂರು ಕೋಟಿ ರೂಪಾಯಿಗಳ ಮೊತ್ತದ ...ರೆದ ಕತೆಯಿದು. ಕುಮಾರಸ್ವಾಮಿ ಮುಖ್ಯಮಂತ್ರಿ ...ಗಿದ್ದ ಕಾಲಕ್ಕೆ ಆರೋಗ್ಯ ಮಂತ್ರಿಯಾಗಿದ್ದ ...ಅಶೋಕ್ ಮತ್ತವರ ನೆಚ್ಚಿನ ಬಂಟನಂತಿದ್ದ ಆರೋಗ್ಯ ...ಖೆ ನಿರ್ದೇಶಕ ಪ್ರಸಾದ್ ಸೇರಿಕೊಂಡು ಎಸಗಿದ ...ಮೂರು ಕೋಟಿಯ ಖರೀದಿ ಹಗರಣಕ್ಕೂ ...ಳೂರಿನ ದೊಮ್ಮಲೂರಿನ ಹೆವೆನ್-2 ಎಂಬ ಐಷಾ ... ಅಪಾರ್ಟ್‌ಮೆಂಟಿಗೂ ಮತ್ತು ಅದರ ಮೂರನೇ ...ಡಿಯ 302 ನೇ ನಂಬರಿನ ನಿಗೂಢ ... ಒಂದಕ್ಕೂ ಇರುವ ವಿಲಕ್ಷಣ ...ಂಧವನ್ನು ಕೆದಕುತ್ತಾ ಹೋದಂತೆಲ್ಲ ...ರೋಗ್ಯ ಇಲಾಖೆಯ ಒಂದೊಂದೇ ...ಗಳು ಕಂಪಿಸಲಾರಂಭಿಸುತ್ತವೆ.



ಆರ್. ಅಶೋಕ್



...ಸದ್ಯ ಮುಖ್ಯಮಂತ್ರಿ ಯಡಿಯೂರಪ್ಪ ...ಗೆ ವಿರೋಧಿ ಜೆಡಿಎಸ್ ಮತ್ತು ...ಸ್ಸಿನ ಅರ್ಧಡಜನ್ ಎಮ್ಮೆಲ್ಲೆಗಳು ...ಕೊಂಡು ಕಳೆದೆರಡು ವರ್ಷಗಳ ...ರೋಗ್ಯ ಇಲಾಖೆಯ ಖರೀದಿ ಹಗರಣ ...ಸಿಬಿಐ ತನಿಖೆಗೆ ವಹಿಸುವಂತೆ ... ಮನವಿಗೇನಾದರೂ ಬೆಲೆ ಸಿಕ್ಕಿದ್ದೇ ... ದೊಮ್ಮಲೂರಿನ ಹೆವೆನ್-2 ಎಂಬ ...ರಾಮಿ ಅಪಾರ್ಟ್‌ಮೆಂಟಿನ ಕೂರ್ಗಿ ...ಪತ್ನಿ ಭಾನು, ಆಕೆಯ ಸೋಕಾಲ್ಡ್ ...ಶ್ರೀಚಂದ್ರ, ಆರೋಗ್ಯ ಇಲಾಖೆಯ ... ನಿರ್ದೇಶಕ ಪ್ರಸಾದ್ ಮತ್ತು ಹಾಲೀ ...ಗೆ ಮಂತ್ರಿ ಅಶೋಕ್ ಒಟ್ಟೊಟ್ಟಿಗೆ ...ಎಣಿಸುವುದಂತೂ ಶತಸ್ಸಿದ್ಧ.

2006 ಮತ್ತು 2007ರಲ್ಲಿ ಆರೋಗ್ಯ ಮಂತ್ರಿ ...ಗಿದ್ದ ಆರ್. ಅಶೋಕ್ ಪಾಲಿಗೆ ಸರ್ವಸ್ವವೂ ...ದವನು ಆಗ ಆರೋಗ್ಯ ಇಲಾಖೆಯ ನಿರ್ದೇಶಕ ...ದ್ದ ಪ್ರಸಾದ್. ಮೂಲತಃ ಹಾಸನದ ಈ ಅಧಿ...ಯ ಮೂಲಕ ಮಂತ್ರಿ ಅಶೋಕ್ ತೆಕ್ಕೆಗೆ ಬಿದ್ದವನು ... ಹಾಸನದ ಶ್ರೀಚಂದ್ರ ಎಂಬ ಮರಿಪುಢಾರಿ. ...ಯಾರಿಗೂ ಅಚ್ಚರಿ ಹುಟ್ಟಿಸುವಂತೆ ಕೇವಲ ಆರು ತಿಂಗಳ ಅವಧಿಯಲ್ಲಿ ಈತನಿಗೆ ಆರೋಗ್ಯ ಇಲಾಖೆಯ ಒಟ್ಟು ಹದಿಮೂರು ಕೋಟಿಯ ಖರೀದಿ ಕಾಂಟ್ರಾಕ್ಟ್ ಸಿಕ್ಕಿಬಿಡುತ್ತದೆ!

ಈ ಪೈಕಿ ಆರ್.ಸಿ.ಹೆಚ್. ಅಂದರೆ ಗ್ರಾಮೀಣ ಮಕ್ಕಳ ಆರೋಗ್ಯಕ್ಕೆಂದು (Rural Child Health) ನಾಲ್ಕು ಕೋಟಿಯ ಔಷಧಿ, National Rural Health Mission (NRHM) ಅಂದರೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಹೆಸರಲ್ಲಿ ಮತ್ತೆ 4 ಕೋಟಿಯ ಬ್ಯಾಂಡೇಜ್ ಇತ್ಯಾದಿ ಔಷಧಿಗಳ ಖರೀದಿ, ಆರೋಗ್ಯ ಇಲಾಖೆಯ ಡೈರೆಕ್ಟರ್ ಜನರಲ್ ಆಫ್ ಸಪ್ಲೈಸ್ ಅಂಡ್ ಡ್ರಗ್ಸ್‌ಗೆಂದು 2 ಕೋಟಿ ರೂಪಾಯಿಗಳ ಸೊಳ್ಳೆ ಪರದೆ ಖರೀದಿ ಮತ್ತು ಸಾಕ್ಷ್ಯಚಿತ್ರ ತೆಗೆಯುವುದಕ್ಕೆಂದೇ ಮತ್ತೆ ಮೂರು ಕೊಟಿಯ ಗುತ್ತಿಗೆಗಳೆಲ್ಲ ಏಕಾಏಕಿ ಈ ಶ್ರೀಚಂದ್ರನ ಬೋಗಸ್ ಕಂಪನಿಯ ಪಾಲಾಗುತ್ತದೆ.

ಅಷ್ಟಕ್ಕೂ ಈ ಶ್ರೀಚಂದ್ರ ಔಷಧಿ ಸರಬರಾಜುದಾರನಲ್ಲ, ಈತ ಬೆಂಗಳೂರಿಗೆ ಕಾಲಿಟ್ಟದ್ದೇ 2005ರಲ್ಲಿ. ಅದಕ್ಕೂ ಮುನ್ನ ಹಾಸನದಲ್ಲಿ ಬೇಕಾಬಿಟ್ಟಿ ಸಾಲ ಮಾಡಿಕೊಂಡು ಕಂಡಕಂಡವರಿಗೆಲ್ಲ ಟೋಪಿ ಹಾಕಿ ಬೆಂಗಳೂರಿಗೆ ಪರಾರಿಯಾದ ಈ ಶ್ರೀಚಂದ್ರ 2006 ರ ಹೊತ್ತಿಗೆ ರಾತ್ರೋರಾತ್ರಿ ಕೋಟ್ಯಾಧಿಪತಿಯಾಗಿದ್ದು, ಐಷಾರಾಮಿ ಕಾರುಗಳಲ್ಲಿ ಓಡಾಡಲಾರಂಭಿಸಿದ್ದು ಎಂಥವರಿಗೂ ಅಚ್ಚರಿ ಹುಟ್ಟಿಸುವಂತಿತ್ತು.

ಅದಕ್ಕೆ ಕಾರಣಳಾದವಳು ಶ್ರೀ ಚಂದ್ರನ ಕೂರ್ಗಿ ಪತ್ನಿ ಭಾನು. ಈಕೆ ಹಾಸನದ ನಟೋರಿಯಸ್ ಹೆಂಗಸು ದೊಡ್ಡಿಮನೆ ಭೋಜಮ್ಮನ ಮೊಮ್ಮಗಳು. ಈಕೆಯ ತಾಯಿ ಅಕ್ಕಯ್ಯ ಹೊಸಕೋಟೆಯ ನಿವೃತ್ತ ಅಧಿಕಾರಿಯೊಬ್ಬನ ಆಸ್ತಿಗೆ ವಕ್ಕರಿಸುವುದಕ್ಕೂ ಮಗಳು ಭಾನು ಬೆಂಗಳೂರಿಗೆ ಕಾಲಿಡುವುದಕ್ಕೂ ಯಾವ ಬಾದರಾಯಣ ಸಂಬಂಧವಿತ್ತೋ ಏನೋ?

ಗಂಡ ಶ್ರೀ ಚಂದ್ರ ಬೆಂಗಳೂರಿಗೆ ಬಂದವನೇ ಆರೋಗ್ಯ ಇಲಾಖೆಯ ಡೈರೆಕ್ಟರ್ ಪ್ರಸಾದ್ ಚೇಂಬರಿನಲ್ಲಿ ಠಿಕಾಣಿ ಹಾಕಿದ್ದ. ಕೆಲವೇ ದಿನಗಳಲ್ಲಿ ತನ್ನ ಪತ್ನಿಯ ಹೆಸರಿಗೆ ಶ್ರೀಮಾರಮ್ಮ ಪ್ರಸನ್ನ ಎಂಟರ್‌ಪ್ರೈಸಸ್ ಮತ್ತು ತನ್ನ ಹೆಸರಲ್ಲಿ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್ ಎಂಬ ಎರಡು ಬೋಗಸ್ ಕಂಪೆನಿಗಳನ್ನು ಹುಟ್ಟುಹಾಕಿದ. ದೊಮ್ಮಲೂರಿನ ಏರ್‌ಪೋರ್ಟ್ ರಸ್ತೆಯ ಹೆವೆನ್ ಎಂಬ ಅಪಾರ್ಟ್‌ಮೆಂಟಿನಲ್ಲಿ ಐಷಾರಾಮಿ ಫ್ಲಾಟ್ ಒಂದನ್ನು ಬಾಡಿಗೆಗೆ ಹಿಡಿದ.





ಮೊದಮೊದಲು ಡೈರೆಕ್ಟರ್ ಪ್ರಸಾದ್‌ನ ಕಾರಷ್ಟೇ ಹೆವೆನ್ ಅಪಾರ್ಟ್‌ಮೆಂಟ್‌ಗೆ ಬರುತ್ತಿದ್ದದ್ದು ಕ್ರಮೇಣ ಆರೋಗ್ಯ ಮಂತ್ರಿಗಳ ಖಾಸಗೀ ಕಾರೇ ಬಂದು ನಿಲ್ಲಲಾರಂಭಿಸಿತು. ಅದಕ್ಕೆ ತಕ್ಕಂತೆ ಆರ್‌ಸಿಎಚ್ ಎಂದರೆ ಗ್ರಾಮೀಣ ಮಕ್ಕಳ ಆರೋಗ್ಯ ಯೋಜನೆಯ 4 ಕೋಟಿಯ ಕಾಂಟ್ರ್ಯಾಕ್ಟು ಶ್ರೀಚಂದ್ರನ ಪತ್ನಿ ಭಾನು ಒಡೆತನದ ಶ್ರೀ ಮಾರಮ್ಮ ಪ್ರಸನ್ನ ಎಂಟರ್‌ಪ್ರೈಸಸ್ ಪಾಲಾಯಿತು. ಬೆನ್ನಲ್ಲೇ ಗಂಡ ಶ್ರೀಚಂದ್ರನ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್‌ಗೆ ಎನ್‌ಆರ್‌ಎಚ್‌ಎಂ ಯೋಜನೆಯ ಮತ್ತೆ 4 ಕೋಟಿಯ ಔಷಧಿ ಖರೀದಿ ಗುತ್ತಿಗೆಯೂ ಸಿಕ್ಕಿಬಿಟ್ಟಿತು. ಇಷ್ಟೇ ಅಲ್ಲದೇ 3 ಕೋಟಿಯ ಸೊಳ್ಳೆ ಪರದೆ ಖರೀದಿ, ಮತ್ತೆ ಮೂರು ಕೋಟಿಯ ಆರೋಗ್ಯ ಇಲಾಖೆಯ ವಿವಿಧ ಯೋಜನೆಗಳ ಡಾಕ್ಯುಮೆಂಟರಿ ಅಂದರೆ ಸಾಕ್ಷ್ಯಚಿತ್ರಗಳ ನಿರ್ಮಾಣ ಗುತ್ತಿಗೆ ಪೂರ್ತಿ ಇದೇ ಎರಡೂ ಕಂಪೆನಿಗಳ ಪಾಲಾಯಿತು.

ದುರಂತವೆಂದರೆ, ಪುಢಾರಿ ಶ್ರೀಚಂದ್ರ ಮತ್ತು ಡೈರೆಕ್ಟರ್ ಪ್ರಸಾದ್ ಸೇರಿಕೊಂಡು ಅವಧಿ ಮುಗಿದಿದ್ದ ಜಾನ್ಸನ್ ಅಂಡ್ ಜಾನ್ಸನ್ ಕಂಪೆನಿಯ ಕಳಪೆ ಸಾಮಗ್ರಿಗಳನ್ನೇ ಕರ್ನಾಟಕದ ಗ್ರಾಮೀಣ ಆಸ್ಪತ್ರೆಗಳಿಗೆ ಪೂರೈಕೆ ಮಾಡಿ ಬೋಗಸ್ ಬಿಲ್ ಜಡಿದಿದ್ದರು. 2 ಕೋಟಿ ಸೊಳ್ಳೆ ಪರದೆಗಳಿಗೆ ಮಾರುಕಟ್ಟೆ ರೇಟಿನ ದುಪ್ಪಟ್ಟು ಬೆಲೆಯ ಲೇಬಲ್ ಅಂಟಿಸಲಾಗಿತ್ತು. ಟೆಂಡರ್‌ನ ಅರ್ಧದಷ್ಟು ಸರಬರಾಜು ಮಾಡಿ ಉಳಿಕೆಗೂ ಸೇರಿಸಿ ಕಳ್ಳ ಬಿಲ್ಲು ಬರೆದರು. ಗ್ರಾಮೀಣ ಮಕ್ಕಳ ಆರೋಗ್ಯ ಯೋಜನೆಯ ಹೆಸರಲ್ಲಿ ಸರಬರಾಜು ಮಾಡಿದ ಬಹುತೇಕ ಔಷಧಿಗಳೆಲ್ಲ ಕಳಪೆ ಗುಣಮಟ್ಟದ ಸರಕಾಗಿತ್ತು. ಇಂಥ ಕಳಪೆ ಔಷಧಿಯೇನಾದರೂ ಹಳ್ಳಿಗಳ ಆರೋಗ್ಯ ಕೇಂದ್ರಗಳನ್ನು ತಲುಪಿಬಿಟ್ಟರೆ ಎಲ್ಲಿ ಸಿಕ್ಕಿಬೀಳುತ್ತೇವೋ ಎಂದು ಹೆದರಿದ ಉಗ್ರಾಣದ ಸಿಬ್ಬಂದಿ ಮೂಟೆಗಟ್ಟಲೇ ಕಳಪೆ ಔಷಧಿಗಳನ್ನೊಯ್ದು ಮೈಸೂರಿನ ಹಾಳುಬಾವಿಯೊಂದಕ್ಕೆ ಎಸೆದಿದ್ದು ಲೋಕಾಯುಕ್ತ ವೆಂಕಟಾಚಲರ ಕೈಗೆ ರೆಡ್‌ಹ್ಯಾಂಡ್ ಸಿಕ್ಕಿಬಿತ್ತು!

ಇದು ಹತ್ತುಕೋಟಿಯ ಔಷಧಿ ಮತ್ತು ಸೊಳ್ಳೆ ಪರದೆಗಳ ಕತೆಯಾದರೆ, ಮೂರುಕೋಟಿಯ ಡಾಕ್ಯುಮೆಂಟರಿಗಳ ಕತೆ ಇನ್ನೂ ವಿಚಿತ್ರ. ಶಾಸ್ತ್ರಕ್ಕೇ ಎಂಬಂತೆ ಒಂದಷ್ಟು ಡಾಕ್ಯುಮೆಂಟರಿಗಳನ್ನು ಚಿತ್ರೀಕರಿಸಿದ ಶ್ರೀಚಂದ್ರ, ಉಳಿದಂತೆ ಬರ್ಮಾಬಜಾರಿನಲ್ಲಿ ಸಿಗುವ ಸಿನಿಮಾಗಳ ಅಸಂಖ್ಯಾತ ನಕಲಿ ಸಿಡಿಗಳನ್ನೇ ತಂದು ಅವಕ್ಕೆ ಹೊಸ ಲೇಬಲ್ ಅಂಟಿಸಿ ಕಳ್ಳಲೆಕ್ಕ ಬರೆದಿದ್ದ. ಕೊಟ್ಟ ಸಿಡಿಗಳನ್ನು ನೋಡುವವರ್ಯಾರು? ಲೆಕ್ಕ ಕೇಳುವವರ್ಯಾರು?

ಈ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಿದ Comptroller and Auditor general ತಮ್ಮ 2007ರ ವರದಿಯಲ್ಲಿ ಇಡೀ ಕರ್ಮಕಾಂಡವನ್ನೇ ಬಯಲಿಗೆಳೆದು ಸರ್ಕಾರದ ಗಮನಕ್ಕೆ ತರುವ ಹೊತ್ತಿಗೆ ಇಷ್ಟೆಲ್ಲದರ ಸೂತ್ರಧಾರ ಪ್ರಸಾದ್ ತನ್ನ ನೌಕರಿಯಿಂದಲೇ ನಿವೃತ್ತನಾಗಿಬಿಟ್ಟಿದ್ದ. ಕುಮಾರಸ್ವಾಮಿ ಸಂಪುಟದಲ್ಲಿ ಆರೋಗ್ಯ ಮಂತ್ರಿಯಾಗಿದ್ದ ಅಶೋಕ್ ಬಿಜೆಪಿಗೆ ಬಹುಮತ ಗಿಟ್ಟಿದ್ದೇ ಸಾರಿಗೆ ಇಲಾಖೆಗೆ ಮಂತ್ರಿಯಾಗಿದ್ದ. NRHM ನ ಯೋಜನಾ ನಿರ್ದೇಶಕರಾದ ಐಎಎಸ್ ಅಧಿಕಾರಿ ನಿಲಯ್ ಮಿತಾಷ್ ಮತ್ತು ಆರೋಗ್ಯ ಇಲಾಖೆಯ ಕಾರ್ಯದರ್ಶಿ ಮದನಗೋಪಾಲ್ ಇಡೀ ಹಗರಣವನ್ನು ಮುಖ್ಯಕಾರ್ಯದರ್ಶಿಗೆ ಬರೆದು ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದರಾದರೂ ಈ ಬಗ್ಗೆ ಹೊಸ ಆರೋಗ್ಯ ಮಂತ್ರಿ ಶ್ರೀರಾಮುಲು ಆಗಲಿ ಮುಖ್ಯಮಂತ್ರಿಯಾಗಲಿ ಕಾಟಾಚಾರಕ್ಕೂ ಚಕಾರವೆತ್ತಲಿಲ್ಲ.


ಬಯಲಾದರೆ ಮಾಜಿ ಆರೋಗ್ಯಮಂತ್ರಿ ಚಲುವರಾಯಸ್ವಾಮಿ ಮತ್ತು ಆರ್. ಅಶೋಕ್ ಇಬ್ಬರ ಕರ್ಮಕಾಂಡಗಳೂ ಒಟ್ಟೊಟ್ಟಿಗೆ ಬಯಲಾಗಬೇಕಿತ್ತು. ಇಡೀ ಆರೋಗ್ಯ ಇಲಾಖೆಗೇ ಗೊತ್ತಿದ್ದ ಒಂದು ಕಹಿಸತ್ಯವೆಂದರೆ ಈ ಪ್ರಕರಣದಲ್ಲಿ ಲಂಚವೇ ಮುಖ್ಯವಾಗಿದ್ದ ಪಕ್ಷದಲ್ಲಿ ಅದನ್ನು ಆ ಕಾಲದಿಂದಲೂ ಪೂರೈಸಿಕೊಂಡೇ ಬಂದಿದ್ದ ಅನೇಕ ಮಾರ್ವಾಡಿ ಕಂಪೆನಿಗಳಿದ್ದವು. ಈ ಪೈಕಿ ಮೂರ್‍ನಾಲ್ಕು ಕಂಪೆನಿಗಳಿಗಾದರೂ ಸರಬರಾಜು ಗುತ್ತಿಗೆ ಸಿಗಬೇಕಿತ್ತು.

ಇಂಥ ಘಟಾನುಘಟಿ ಏಜೆನ್ಸಿಗಳೆಲ್ಲವನ್ನೂ ಬದಿಗೊತ್ತಿ ಆರೋಗ್ಯ ಇಲಾಖೆಯ ಗಂಧಗಾಳಿ ಗೊತ್ತಿಲ್ಲದ, ಔಷಧಿ ಸರಬರಾಜಿನ ಅನುಭವವೇ ಇಲ್ಲದ, ವಂಚನೆಗೆಂದೇ ಸೃಷ್ಟಿಯಾದ ಪುಢಾರಿ ಶ್ರೀಚಂದ್ರನ ನಕಲಿ ಏಜೆನ್ಸಿಗೆ ಅದೂ ಕೇವಲ ಆರು ತಿಂಗಳ ಅವಧಿಯಲ್ಲಿ ಹದಿಮೂರು ಕೋಟಿಯ ಗುತ್ತಿಗೆ ಸಿಗುತ್ತದೆ ಎಂದರೆ ಏನರ್ಥ?

ಅದು ಶ್ರೀಚಂದ್ರನ ಪತ್ನಿ ಭಾನು ಮಹಾತ್ಮೆ. ಮೊದಮೊದಲು ಆರೋಗ್ಯ ಇಲಾಖೆ ನಿರ್ದೇಶಕ ಪ್ರಸಾದ್‌ನ ಚೇಂಬರಿನಲ್ಲಿ ಮಿಂಚುತ್ತಿದ್ದ ಭಾನು ಕ್ರಮೇಣ ಚಲುವರಾಯಸ್ವಾಮಿಯ ಚೇಂಬರ್‌ಗೂ ಕಾಲಿಟ್ಟಳು. ಚಲುವರಾಯಸ್ವಾಮಿ ಸ್ಥಾನಕ್ಕೆ ಆರ್.ಅಶೋಕ್ ಬರುತ್ತಿದ್ದಂತೆ ಮಂತ್ರಿ ಅಶೋಕ್‌ರ ಗೂಟದ ಕಾರೇ ದೊಮ್ಮಲೂರಿನ ಹೆವೆನ್ ಅಪಾರ್ಟ್‌ಮೆಂಟ್‌ನ ಮುಂದೆ ನಿಂತಿರುತ್ತಿತ್ತು. ಅಶೋಕ್ ಆರೋಗ್ಯ ಮಂತ್ರಿಯಾಗಿದ್ದಷ್ಟೂ ಕಾಲ ಆರೋಗ್ಯ ಇಲಾಖೆಗಳ ವರ್ಗಾವಣೆಯಲ್ಲಿ ಶ್ರೀಮತಿ ಭಾನು ಕೈಚಳಕ ತೋರಿದ್ದು, ಕುಷ್ಠರೋಗಿಗಳಿಗೆ ಸರ್ಕಾರಿ ಉದ್ಯೋಗ ಕಲ್ಪಿಸುವಲ್ಲಿ ತನ್ನ ಮೂಲಕ ಬಂದ ಮೂವತ್ತಕ್ಕೂ ಹೆಚ್ಚು ಮಂದಿಗೆ ಕುಷ್ಠರೋಗಿಗಳೆಂದು ಹಣೆಪಟ್ಟಿ ಹಾಕಿ ಉದ್ಯೋಗ ಕಲ್ಪಿಸಿದ್ದು, ಕೆಲವೆಡೆ ತಾನೇ ಮಂತ್ರಿ ಅಶೋಕ್‌ರ ಪರಮಾಪ್ತೆ ಎಂದು ಭಾನು ಹೇಳಿಕೊಂಡಿದ್ದು ಆರೋಗ್ಯ ಇಲಾಖೆಯ ಅಸಹ್ಯ ಮುಖವೊಂದರ ಸಂಕೇತವಷ್ಟೆ.


RCH ಮತ್ತು NRHM ಯೋಜನೆಗಳ ಔಷಧಿ ಖರೀದಿ ಕರ್ಮಕಾಂಡದ ಬಗ್ಗೆ ಲೋಕಾಯುಕ್ತ ತನಿಖೆ ಏನಾಯಿತು? ಎಲ್ಲೋ ಇರುವ ಹಳ್ಳಿ ರೈತರ ಆರೋಗ್ಯದ ಹೆಸರಲ್ಲಿ ಭ್ರಷ್ಟ ಅಧಿಕಾರಿಗಳು ಮತ್ತು ಲಂಪಟ ಮಂತ್ರಿಗಳು ಹೊಡೆದ ಕೊಳ್ಳೆಯನ್ನು ಕೇಳುವವರ್‍ಯಾರು?

ಸುಂದರಿಯೊಬ್ಬಳ ಪಾದಕ್ಕೆ ಇಡೀ ಆರೋಗ್ಯ ಇಲಾಖೆಯನ್ನೂ, ಅಸಂಖ್ಯಾತ ಬಡಬಗ್ಗರ ಜೀವನವನ್ನೂ ಸಮರ್ಪಿಸಿದ ಕಾಮುಕ ಮಂತ್ರಿ ಮತ್ತು ಅಧಿಕಾರಿಗಳಿಗೆ ಯಾವುದೇ ಶಿಕ್ಷೆಯಿಲ್ಲವೇ? ವಿರೋಧಿ ನಾಯಕ ಉಗ್ರಪ್ಪನವರಿಗಾಗಲಿ, ಅವರ ಗುರು ಖರ್ಗೆಗಾಗಲೀ ಇದೊಂದು ಹಗರಣ ಎನಿಸದೇ ಹೋದರೆ ಅವರಿಗೆ ಇನ್ನೆಂಥ ಹಗರಣಬೇಕು?



ಖಾತೆ ಸಚಿವರು ಭಾನು ಭೇಟಿಗೆ ಹೋಗುವ ದೊಮ್ಮಲೂರಿನ ಹೆವೆನ್ ಅಪಾರ್ಟ್‌ಮೆಂಟ್

ಭೀಮಾ ತೀರದಲ್ಲಿ ಮತ್ತೆರಡು ಹೆಣ!


ಸತ್ತ ವಿಜಯ್‌ಕುಮಾರ್

ಭೀಮಾ ತೀರದಲ್ಲಿ ರಕ್ತ ಹರಿಯುವುದು ನಿಂತಿಲ್ಲ. ಸಾಲು ಸಾಲು ಹೆಣಗಳು ಒಂದಾದಮೇಲೊಂದರಂತೆ ಉರುಳುತ್ತಲೇ ಇವೆ; ಭೀಮೆಯ ನೀರು ಕೆಂಪಾಗುತ್ತಲೇ ಇದೆ. ಭೀಮಾ ತೀರದ ಗ್ಯಾಂಗ್‌ವಾರ್‌ಗಳಿಗೆ ದಶಕಗಳ ಇತಿಹಾಸವಿದೆ. ಅದೊಂಥರಾ ವಿಷಚಕ್ರ. ಒಮ್ಮೆ ಸಿಕ್ಕಿಹಾಕಿಕೊಂಡರೆ ಹೊರಬರುವುದಕ್ಕೆ ಸಾಧ್ಯವೇ ಇಲ್ಲ. ದಾಳಿಗಳು-ಪ್ರತಿದಾಳಿಗಳು, ಕೊಲೆಗಳು-ರಿವೇಂಜ್ ಕೊಲೆಗಳು - ಹೀಗೆ ಸಾಗುತ್ತಲೇ ಇರುತ್ತದೆ.

ವಿಧಾನಸಭೆ ಚುನಾವಣೆಗಳು ಮುಗಿದಾಗಿನಿಂದ ಕೊಂಚ ತಣ್ಣಗಾದಂತೆ ಕಂಡಿದ್ದ ಈ ಪ್ರದೇಶದಲ್ಲಿ ಮತ್ತೆ ಗುಂಡಿನ ಸದ್ದು ಕೇಳತೊಡಗಿದೆ. ಉಮರಾಣಿಯ ನೆಲದಲ್ಲಿ ಸಧ್ಯಕ್ಕೆ ಎರಡು ಹೆಣ ಉರುಳಿವೆ. ಗ್ಯಾಂಗ್‌ವಾರ್‌ಗಳಿಗಾಗಿ ಭೀಮಾ ತೀರ ಸಜ್ಜಾಗುತ್ತಿರುವುದರ ಮುನ್ಸೂಚನೆ ಇದಾಗಿದೆ.


ಪುತ್ರಪ್ಪ ಭೈರಗೊಂಡ


ಮಲ್ಲಿಕಾರ್ಜುನ

ಭೀಮಾ ತೀರದಲ್ಲಿ ಇಂತಹ ರಕ್ತಸಿಕ್ತ ಅಧ್ಯಾಯ ಆರಂಭವಾದದ್ದೇ ಇಬ್ಬರು ಜಮೀನ್ದಾರಿ ಕುಳಗಳಿಂದ. ಎರಡು ಕುಟುಂಬಗಳ ವೈಯಕ್ತಿಕ ಮಾರಾಮಾರಿಗಳಲ್ಲಿ ಒಂದು ಕುಟುಂಬದ ಆಳಾಗಿದ್ದ ಚಂದಪ್ಪ ಹರಿಜನ್ ತನ್ನ ಯಜಮಾನನ ಬೆಂಗಾವಲಿಗೆ ನಿಂತಾಗ ಮುಂದಾಗುವ ಅನಾಹುತಗಳ ಬಗ್ಗೆ ಪ್ರಾಯಶಃ ಯಾರೂ ಯೋಚಿಸಿರಲಿಲ್ಲವೇನೋ? ತನ್ನ ಯಜಮಾನನ ಬೆಂಗಾವಲಿಗೆ ನಿಂತ ಚಂದಪ್ಪ ಹರಿಜನ ಕೊಲೆಗಳ ಮೇಲೆ ಕೊಲೆಗಳನ್ನು ನಡೆಸುತ್ತಾ ತನ್ನದೇ ಆದ ಭೂಗತಲೋಕವನ್ನು ಕಟ್ಟಿಕೊಂಡು ಅದಕ್ಕೆ ಅಧಿನಾಯಕನಾಗಿ ಬೆಳೆದುಬಿಟ್ಟದ್ದು, ಭೀಮೆ ತೀರದಲ್ಲಿಯೇ ರಕ್ತದೋಕುಳಿಯಾಡುತ್ತಾ ಕೊನೆಗೆ ಅದೇ ತೀರದಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ರಕ್ತದ ಮಡುವಿನಲ್ಲಿ ಬಿದ್ದು ಸತ್ತಿದ್ದು ಈಗ ಇತಿಹಾಸ.

ಚಂದಪ್ಪ ಹರಿಜನ ಎಂಬ ಸೀರಿಯಲ್ ಕಿಲ್ಲರ್‌ನೇನೋ ಸತ್ತುಹೋದ. ಆದರೆ, ಆತ ಕಟ್ಟಿಕೊಂಡಿದ್ದ ಭೂಗತಲೋಕವಿನ್ನೂ ಜೀವಂತವಾಗಿದೆ. ಆತ ಪ್ರಾರಂಭಿಸಿದ ರಕ್ತದೋಕುಳಿಯಾಟ ಇನ್ನೂ ಮುಂದುವರೆಯುತ್ತಿದೆ. ಅದರ ಪರಿಣಾಮವಾಗಿಯೇ ಚಂದಪ್ಪ ಹರಿಜನ ಕೊಲೆಯಾದ ನಂತರವೂ ಭೀಮೆಯ ತೀರದಲ್ಲಿ ರಕ್ತದೋಕುಳಿ ನಿಂತಿಲ್ಲ, ಸದ್ಯಕ್ಕದು ಉಮರಾಣಿಯಲ್ಲಿ ಈಗ ಎರಡು ಹೆಣಗಳುರುಳುವ ತನಕ ಬಂದುನಿಂತಿದೆ.

ಉಮರಾಣಿಯ ಪುತ್ರಪ್ಪ ಭೈರಗೊಂಡನಿಗೆ ಮೊನ್ನೆಯ ಅಸೆಂಬ್ಲಿ ಚುನಾವಣೆಯಲ್ಲಿ ಗುಂಡು ತಗುಲಿದ ಸುದ್ದಿ ರಾಜ್ಯಾದ್ಯಂತ ಹರಡಿತ್ತು, ಅಂತೆಯೇ ಭೀಮೆಯ ತೀರ ಮತ್ತೆ ರಕ್ತದೋಕುಳಿಗೆ ಸಿದ್ಧವಾಗುತ್ತಿರುವುದನ್ನು ಸೂಚ್ಯವಾಗಿಯೇ ಎಚ್ಚರಿಸಿತ್ತು, ಬಿಜಾಪುರ ಜಿಲ್ಲೆಯ ಗಡಿ ಎನ್ನುವುದಕ್ಕಿಂತ ಕರ್ನಾಟಕದ ಗಡಿ ಎಂದೇ ಗುರುತಿಸಿಕೊಂಡಿರುವ ಉಮರಾಣಿ ಎಂಬ ಸ್ಮಶಾನಸದೃಶ ಊರು ಪುತ್ರಪ್ಪ ಭೈರಗೊಂಡ ಕುಟುಂಬಕ್ಕೂ ಮತ್ತು ಮಲ್ಲಿಕಾರ್ಜುನ ಚಡಚಣನ ಕುಟುಂಬಕ್ಕೂ ನಡೆಯುತ್ತಿರುವ ಯುದ್ಧದ ರಣರಂಗವಾಗಿಬಿಟ್ಟದೆ. ಭೈರಗೊಂಡ-ಚಡಚಣ ಗ್ಯಾಂಗ್‌ವಾರ್ ಬರೊಬ್ಬರಿ ಐವತ್ತು ವಸಂತಗಳನ್ನು ಕಂಡಿದೆ. ದುರಂತ ಎಂದರೆ ಈ ವಾರ್‌ನಲ್ಲಿ ಅಮಾಯಕರು ಸತ್ತಿದ್ದೇ ಜಾಸ್ತಿ.

ಈ ಹಿಂದೆ ನಿರ್ದಯ ಪಾತಕತನಕ್ಕೆ ಕುಖ್ಯಾತಿಹೊಂದಿದ್ದ ಶಾಂತಪ್ಪನ ಉಪಟಳದಿಂದ ಬೇಸತ್ತಿದ್ದ ಜನ ಅವನನ್ನು ಬೀದಿಯಲ್ಲಿ ಅಟ್ಟಾಡಿಸಿಕೊಂಡು ಬಡಿದು ಸಾಯಿಸಿದ್ದರು. ಅವನ ಕುಲಕುಡಿಗಳೇ ಮಲ್ಲಿಕಾರ್ಜುನ ಚಡಚಣ ಮತ್ತು ಶ್ರೀಶೈಲ ಚಡಚಣ. ತಂದೆಗೆ ತಕ್ಕ ಮಕ್ಕಳಂತೆ ಇವರಿಬ್ಬರೂ ಅಪ್ಪನ ಪಾಪದ ಪರಂಪರೆಯನ್ನು ಚಾಚೂತಪ್ಪದೇ ಪಾಲಿಸಿದವರು. ಅದರ ಪರಿಣಾಮವಾಗಿಯೇ ಶ್ರೀಶೈಲ ಪೊಲೀಸರ ಗುಂಡೇಟು ತಿಂದು ನರಕ ಸೇರಿದರೆ ಮಲ್ಲಿಕಾರ್ಜುನ ಜೈಲುಪಾಲಾಗಿ ಜೀವ ಉಳಿಸಿಕೊಂಡ. ಈ ಮಧ್ಯೆ ಆತ ಜೈಲಿನಲ್ಲಿ ಕಂಬಿ ಎಣಿಸುತ್ತಿರುವಾಗಲೇ ಅವನ ಕುಟುಂಬದ ಕುಲವೈರಿ ಭೈರಗೊಂಡ ಕುಟುಂಬದ ಪುತ್ರಪ್ಪ ಸಾವ್ಕಾರ್ ಮಲ್ಲಿಕಾರ್ಜುನನ ಕುಲಪುತ್ರನನ್ನು ಮಟಾಷ್ ಮಾಡಿಸಿಬಿಟ್ಟ. ಅಲ್ಲಿಗೆ ಒಂದು ವಿಚಾರವಂತೂ ಸ್ಪಷ್ಟವಾಗಿಹೋಯಿತು; ಭೀಮಾ ತೀರದ ರಕ್ತದೋಕುಳಿ ಈ ಎರಡೂ ಕುಟುಂಬಗಳ ಸರ್ವನಾಶದೊಂದಿಗೆ ಮಾತ್ರವೇ ನಿಲ್ಲಬಹುದೆಂಬ ಸತ್ಯ ಅದು.

ಇದೇ ತಿಂಗಳ ಎಂಟನೇ ತಾರೀಖಿನ ರಾತ್ರಿ ಎಂಟು ಗಂಟೆ ಹೊತ್ತಿಗೆ ಮಲ್ಲಿಕಾರ್ಜುನ ಚಡಚಣನ ಕಡೆಯವರೆಂದು ಗುರುತಿಸಲಾಗಿರುವ ಮೂರು ಜನ ತಮ್ಮ ಡಿಸ್ಕವರ್ (ಕೆಎ-28, ಕ್ಯೂ-1820) ಬೈಕಿನಲ್ಲಿ ಸೋಲ್ಲಾಪುರದ ಬಳಿ ತಿರುಗಾಡುತ್ತಿದ್ದ ಹೊತ್ತಿನಲ್ಲಿ ಪುತ್ರಪ್ಪ ಭೈರಗೊಂಡನ ಬ್ರದರ್ ಮಹಾದೇವ ಭೈರಗೊಂಡ ತನ್ನ ಬೊಲೇರೋ (ಕೆಎ-32, ಎಂ-6222) ವಾಹನದಲ್ಲಿ ರಾಜು ಕಟಬರ್ ಎಂಬ ಹಂತಕನನ್ನು ಕೂರಿಸಿಕೊಂಡು ಹೋಗಿ ಚಡಚಣನ ಕಡೆಯವರ ಬೈಕಿಗೆ ಗುದ್ದಿದ್ದಾರೆ. ಗುದ್ದಿದ ಹೊಡೆತಕ್ಕೆ ಬೈಕು ಗಿರಿಕಿ ಹೊಡೆದು ಅದರ ಮೇಲಿದ್ದವರೆಲ್ಲ ನೆಲಕ್ಕೆ ಬಿದ್ದಿದ್ದೇ ತಡ ಬೊಲೆರೋದಲ್ಲಿದ್ದ ಭೈರಗೊಂಡನ ಗ್ಯಾಂಗ್ ದಾಳಿ ಮಾಡಿದೆ. ಒಬ್ಬ ಹೇಗೋ ತಪ್ಪಿಸಿಕೊಂಡು ಪರಾರಿಯಾದರೆ ಉಳಿದವರಿಬ್ಬರನ್ನು ಹಿಗ್ಗಾಮುಗ್ಗಾ ಥಳಿಸಿ ಕೊನೆಗೆ ಮುಖದ ಮೇಲೆ ಚಪ್ಪಡಿ ಕಲ್ಲು ಹಾಕಿ ಫಿನಿಷ್ ಮಾಡಿಬಿಟ್ಟರು. ಇದೊಂದು ರಿವೇಂಜ್ ಕಿಲ್ಲಿಂಗ್, ಅದನ್ನು ಮಾಡಿದ್ದು ತಾವೇ ಎಂದು ಭೈರಗೊಂಡ ಕುಟುಂಬದವರು ಎದೆತಟ್ಟಿ ತೋರಿಸಬೇಕಿತ್ತು. ಅದಕ್ಕಾಗಿಯೇ ಮಹಾದೇವ ಭೈರಗೊಂಡ ಹೆಣಗಳನ್ನು ತನ್ನ ಗಾಡಿಯಲ್ಲಿ ಎತ್ತಾಕಿಕೊಂಡು ರೋರ್ ಗ್ರಾಮದ ಸರಹದ್ದಿಗೆ ತಂದು ಬಿಸಾಡಿದ್ದಾನೆ. ಇದೊಂದು ರಿವೇಂಜ್ ಕಿಲ್ಲಿಂಗ್ ಎಂದು, ಅದನ್ನು ಭೈರಗೊಂಡ ಕುಟುಂಬದವರೇ ಮಾಡಿರುವುದೆಂದು ಇಡೀ ಭೀಮಾ ತೀರಕ್ಕೆ ಗೊತ್ತಿದ್ದರೂ ಪೊಲೀಸರು ಮಾತ್ರ ಬೇರೆ ಕತೆ ಹೆಣೆಯುತ್ತಾ ಆರೋಪಿಗಳನ್ನು ರಕ್ಷಿಸುತ್ತಿದ್ದಾರೆ.

ಸತ್ತವರಲ್ಲಿ ಒಬ್ಬ ಗುಲ್ಬರ್ಗಾದ ಆಳಂದ ತಾಲ್ಲೂಕಿನ ವಿಜಯ ಕುಮಾರ ಎಂದು ಗೊತ್ತಾಗಿದ್ದರೆ, ಇನ್ನೊಬ್ಬನ ಗುರುತು ಇನ್ನೂ ಪತ್ತೆಯಾಗಿಲ್ಲ. ಪರಾರಿಯಾಗಿ ಬದುಕಿದವನು ಮಲ್ಲಿಕಾರ್ಜುನನ ಮಗ ಧರ್ಮಣ್ಣನೇ ಇರಬೇಕು ಎಂಬ ಅನುಮಾನ ಎಲ್ಲರನ್ನು ಕಾಡುತ್ತಿದೆ. ಪ್ರಾಯಶಃ ಅವನೇ ಈ ದಾಳಿಯ ಪ್ರೈಮ್ ಟಾರ್ಗೆಟ್ ಇದ್ದಿರಬೇಕು.

ಆದರೆ ಎಸ್ಪಿ ಅರುಣ್ ಚಕ್ರವರ್ತಿ ಹೇಳುತ್ತಿರುವ ಕತೆಯೇ ಬೇರೆ. ಅವರ ಪ್ರಕಾರ: ಪುತ್ರಪ್ಪನ ಕಿಲ್ಲರ್ ತಮ್ಮ ಮಹದೇವ ಭೈರಗೊಂಡ ಪೊಲೀಸ್ ಸೆಕ್ಯೂರಿಟಿಯೊಂದಿಗೆ ತನ್ನ ಬೊಲೆರೋ ಗಾಡಿಯಲ್ಲಿ ರೋರ್ ಗ್ರಾಮದ ಮೂಲಕ ಹೊರಟಿದ್ದಾಗ ಮಲ್ಲಿಕಾರ್ಜುನ ಚಡಚಣರ ಸಹಚರರಾದ ವಿಜಯಕುಮಾರ್ ಹಾಗೂ ಮತ್ತೊಬ್ಬ ಡಿಸ್ಕವರ್ ಬೈಕಿನಲ್ಲಿ ಬಂದು ಮಹಾದೇವನ ಮೇಲೆ ಗುಂಡು ಹಾರಿಸಿದರಂತೆ. ಮಹಾದೇವನ ಸೆಕ್ಯೂರಿಟಿಗಿದ್ದ ಪೊಲೀಸರು ಆತನನ್ನು ರಕ್ಷಿಸುವ ಸಲುವಾಗಿ ಪ್ರತಿಗುಂಡು ಹಾರಿಸಿದಾಗ ಅವರಿಬ್ಬರೂ ಸತ್ತು ಹೋದರಂತೆ. ಅರುಣ್ ಚಕ್ರವರ್ತಿ ಹೇಳುತ್ತಿರುವ ಚಂದಮಾಮ ಕತೆಯನ್ನು ಆ ಹೆಣಗಳೂ ಒಪ್ಪಿಕೊಳ್ಳುವುದಿಲ್ಲ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪುತ್ರಪ್ಪ ಇಂಡಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಪಡೆದು ಗೆಲ್ಲುವ ಆಕಾಂಕ್ಷೆ ಹೊಂದಿದ್ದ. ಅದು ಸಾಧ್ಯವಾಗುವುದಿಲ್ಲ ಎಂಬುದು ಗೊತ್ತಾಗುತ್ತಿದ್ದಂತೆ ಪಕ್ಕದ ನಾಗಠಾಣ ಕ್ಷೇತ್ರಕ್ಕೂ ಕಣ್ಣಹಾಯಿಸಿ ಅಲ್ಲೂ ವಿಫಲನಾಗಿದ್ದ. ಅಂತಿಮವಾಗಿ ಬೇರೆದಾರಿಯಿಲ್ಲದೇ ರಾಜು ಅಲಗೂರ ಎಂಬ ಸಿದ್ರಾಮಯ್ಯನ ಶಿಷ್ಯನ ಪರ ಪ್ರಚಾರಕ್ಕಿಳಿದಿದ್ದ. ಬಿ.ಕೆ.ಲೋಣಿ ಗ್ರಾಮದಲ್ಲಿ ಹೀಗೆ ಪ್ರಚಾರ ಮಾಡುತ್ತಿರುವಾಗಲೇ ನೂರಾರು ಜನರ ಕಣ್ಣೆದುರಿಗೇ ಮಲ್ಲಿಕಾರ್ಜುನ ಚಡಚಣನ ಎರಡನೇ ಮಗ ಪುತ್ರಪ್ಪನ ಮೇಲೆ ಫೈರ್ ಮಾಡಿದ್ದ. ಅವನ ಅದೃಷ್ಟಕ್ಕೆ ಅದು ಪಕ್ಕೆಲಬು ಹೊಕ್ಕು ಪುತ್ರಪ್ಪ ಬಚಾವಾಗಿದ್ದ. ಇದಕ್ಕೂ ಮುಂಚೆ ಪುತ್ರಪ್ಪನ ತಮ್ಮ ಮಹಾದೇವ ಭೈರಗೊಂಡ ಬೆಳಗಾವಿಯ ಹತ್ತಿರ ಪೊಲೀಸರ ಕಣ್ಗಾವಲಿನ ಮಧ್ಯೆಯೇ ಮಲ್ಲಿಕಾರ್ಜುನ ಚಡಚಣನ ಮೇಲೆ ಗುಂಡು ಹಾರಿಸಿದ್ದ. ಆ ಹೊಡೆತಕ್ಕೆ ಸಾಯಲೇಬೇಕಿದ್ದ ಮಲ್ಲಿಕಾರ್ಜುನ ಹೇಗೋ ಬಚಾವಾಗಿಬಿಟ್ಟ. ಆದರೆ, ಶಾಶ್ವತ ಅಂಗವಿಕಲನಾಗಿಬಿಟ್ಟ. ಅದಕ್ಕೆ ಪ್ರತೀಕಾರ ತೀರಿಸಿಕೊಳ್ಳುವುದಕ್ಕಾಗಿ ಪುತ್ರಪ್ಪನ ಮೇಲೆ ಮಲ್ಲಿಕಾರ್ಜುನನ ಮಗ ಹಾರಿಸಿದ ಗುಂಡು ವಿಫಲವಾಯಿತು. ಅದರ ಮುಂದುವರೆದ ಭಾಗವಾಗಿ ಈಗ ಪುತ್ರಪ್ಪನ ತಮ್ಮ ಮಹಾದೇವ ಇವತ್ತು ಚಡಚಣನ ಕಡೆಯ ಇಬ್ಬರನ್ನು ಫಿನಿಷ್ ಮಾಡಿದ್ದಾನೆ. ಇದು ನಿಲ್ಲುವುದಿಲ್ಲ, ಇದಕ್ಕೆ ಮತ್ತೆ ರಿವೇಂಜ್ ಅಟ್ಯಾಕ್ ಇರುತ್ತದೆ.

ಈಗ ಕೊಲೆಯಾಗಿರುವ ವಿಜಯ್ ಕುಮಾರ್ ಬಿಜಾಪುರದ ಬಾಲಚಂದ್ರ ವಾಲಿಯ ಸಂಬಂಧಿಕನಾಗಿ ಬಾಲಚಂದ್ರ ವಾಲಿ ಬಿಜಾಪುರದ ಸ್ಟೇಶನ್ ರಸ್ತೆಯಲ್ಲಿ ಸಾಸನೂರು ಭಾಯಿ ಆಸ್ಪತ್ರೆ ಎದುರಿಗೆ ವಾಸವಿ ಮಲ್ಲಿಕಾರ್ಜುನ ಚಡಚಣನ ಮಕ್ಕಳಿಗೆ ಆಶ್ರಯ ಕೆ ತನ್ನ ಮನೆಯಲ್ಲಿಯೇ ಅವರಿಗೆ ಓದಲು ವ ಮಾಡಿರುವುದರಿಂದ ಕೊಲೆಯಾಗಿರುವ ವಿಜಯಕುಮ ವಾಲಿ ಈತನ ಮೂಲಕವೇ ಚಡಚಣ ಫ್ಯಾಮಿ ಪರಿಚಯವಾಗಿದ್ದಾನೆಂಬದು ನಗ್ನ ಸತ್ಯ. ಮಹಾ ಭೈರಗೊಂಡನ ರಕ್ತ ಪಿಪಾಸುತನಕ್ಕೆ ಬಲಿಯಾದವರ ಎರಡು ಕಂಟ್ರಿ ರಿವಾಲ್ವಾರ್‌ಗಳು ದೊರೆತಿವೆ ಎ ಹೇಳಲಾಗುತ್ತಿದೆ. ಅದನ್ನು ಪೊಲೀಸರೇ ಮ್ಯಾನ ಮಾಡಿದ್ದರೂ ಆಶ್ಚರ್ಯವಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಪುತ್ರಪ್ಪ ಭೈರಗೆ ಮತ್ತು ಮಲ್ಲಿಕಾರ್ಜುನ ಚಡಚಣ ಕುಟುಂಬಗಳ ನಡು ಗ್ಯಾಂಗ್‌ವಾರ್ ಇಲ್ಲಿಗೇ ನಿಲ್ಲುವುದಿಲ್ಲ. ಮತ್ತೊ ರಕ್ತದೋಕುಳಿಗೆ ಭೀಮಾ ತೀರ ಸಜ್ಜಾಗುತ್ತಿದೆ. ಭೀ ನದಿ ನೀರು ರಕ್ತದಿಂದ ಕೆಂಪಾಗುತ್ತಲೇ ಹೋಗು ಇದು ನಿಲ್ಲದ ಚಕ್ರ.

■ ಹುರುಳಿಕುಪ್ಪಿ ವಿನಂ

ಭುಗಿಲೆದ್ದ ಭಾಗಪ್ಪ





ಚಂದಪ್ಪ ಹರಿಜನ ಪೊಲೀಸ್ ಎನ್‌ಕೌಂಟರಿನಲ್ಲಿ ಮಣ್ಣಾದ ಮೇಲೆ ಭೀ ತೀರದಲ್ಲಿ ರಕ್ತದೋಕುಳಿ ಹರಿಸಿದ್ದರಲ್ಲಿ ಹೆಚ್ಚಿನ ಪಾಲು ಭಾಗಪ್ಪ ಹರಿಜನ ಸಲ್ಲುತ್ತದೆ. ಪುತ್ರಪ್ಪ ಸಾವ್ಕಾರನ ಮೇಲೆ ಬಿ.ಕೆ.ಲೋಣಿ ಗ್ರಾಮದಲ್ಲಿ ಚಡಚ ಮಗ ಗುಂಡು ಹೊಡೆದ ಸಂದರ್ಭದಲ್ಲಿ ಚಡಚಣನ ಮಗನ ಬೆಂಗಾವಲಿಗಿದ್ದ ಭಾಗಪ್ಪನ ಹುಡುಗರು ಎನ್ನುವುದು ಅನುಮಾನಪಡದ ವಿಷಯವೇ. ತನ ಮುಗಿಸುವುದಕ್ಕೆ ಭಾಗಪ್ಪ ಕೂಡ ಚಡಚಣನೊಂದಿಗೆ ಕೈಜೋಡಿಸಿರುವುದು ಪುತ್ರ ಅರಗಿಸಿಕೊಳ್ಳದ ವಿಚಾರವೆ.


ಹೀಗಾಗಿ ಪುತ್ರಪ್ಪನಿಗೆ ಈಗ ಕೇವಲ ಮಲ್ಲಿಕಾರ್ಜುನ ಮಾತ್ರ ಶತ್ರು ಭಾಗಪ್ಪ ಕೂಡ ಹೌದು. ಆದ್ದರಿಂದಲೇ ಮುತ್ತು ಮಾಸ್ತರನ ಕೊಲೆಗೆ ಪ್ರತೀಕಾರ ಜೂನ್ 11ರಂದು ಸಿಂದಗಿ-ಆಲಮೇಲಾ ರಸ್ತೆಯಲ್ಲಿ ಭಾಗಪ್ಪನ ಹೆಂಡತಿಯ ತ ಪರಶುರಾಮ್ ಮತ್ತು ಅವನ ಮಗಳ ಗಂಡ ರಾಜಶೇಖರ್ ಸುಖದೇವ್ ಮೇಲಿನಕೇರಿ ಎಂಬುವವರನ್ನು ತುಂಡುತುಂ ಕತ್ತರಿಸಿದ್ದಕ್ಕೆ ಪುತ್ರಪ್ಪನ ಬೆಂಬಲವೂ ಇತ್ತು. ಅಮತ್ತು ಭಾಗಪ್ಪ ಹರಿಜನನ ಅಳಿಯಂದಿರನ್ನು ಕೊಂದಿದ್ದು ಚಂ ಹರಿಜನನ ತಮ್ಮ ಬಸವರಾಜ್ ಹರಿಜನ, ಅವನ ಅಣ್ಣ ಯಲ್ಲಪ್ಪನ ಮಗ ಭೀಮ್ಯಾ ಮುತ್ತು ಮಾಸ್ತರನ ರಾತ್ರಿ ರ ಬೇಬಿ ಎಂಬುವವಳ ತಮ್ಮಂದಿರಾದ ಆಲಮೇಲದ ರಾಜಾ, ಪರ್ವೇಜ್ ಮತ್ತು ಚಡಚಣದ ಸುಪಾರಿ ಹಂತಕ ರಾ ಕಟಬರ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ, ಈ ಗ್ಯಾಂಗ್‌ಗೆ ಬೆಂಬಲವಾಗಿ ನಿಂತಿದ್ದು ಪುತ್ರಪ್ಪ ಎಂಬುದು ಬ [illegible] ಗೊತ್ತಿಲ್ಲ.

ಈಗ ಅದೇ ಪುತ್ರಪ್ಪ ತನ್ನ ತಮ್ಮ ಮಹಾದೇವ ಭೈರಗೊಂಡನ ಮೂಲಕ ಚಡಚಣ ಫ್ಯಾಮಿಲಿಯ ಭಂಟ ಫಿನಿಷ್ ಮಾಡಿದ್ದಾನೆ. ಸುದ್ದಿ ತಿಳಿಯುತ್ತಿದ್ದಂತೆಯೇ ಅತ್ತ ಗುಲ್ಬರ್ಗಾ ಜೈಲಿನಲ್ಲಿರುವ ಭಾಗಪ್ಪ ವ್ಯಾಘ್ರನಂತಾಗಿದ ಪುತ್ರಪ್ಪ ಸಾವ್ಕಾರ ತನ್ನ ಭಂಟ ರಾಜು ಕಟಬರನನ್ನು ವ್ಯವಸ್ಥಿತವಾಗಿ ಬೆಳೆಸಿ ಈ ಭಾಗದ ಅಂಡರ್ ವರ್ಲ್ಡ್ ಡ ಪಟ್ಟಾಭಿಷೇಕ ಮಾಡುವುದಕ್ಕೆ ಪ್ರಯತ್ನಿಸುತ್ತಿರುವುದು ಭಾಗಪ್ಪ ಹರಿಜನ ಕುದಿಯುತ್ತಿರುವುದಕ್ಕೆ ಇನ್ನೊಂದು ಕಾರಣ

ಆದರೆ, ಭೀಮಾ ತೀರದಲ್ಲಿ ತನ್ನ ಭೂಗತ ಸಾಮ್ರಾಜ್ಯ ಬೇರೊಬ್ಬನ ಪಾಲಾಗುವುದನ್ನು ತಡೆಯುವುದಕ್ಕಾಗಿ ಭಾ ಹರಿಜನ ಗುಲ್ಬರ್ಗಾ ಜೈಲಿನಿಂದಲೇ ಬ್ಲೂಪ್ರಿಂಟ್ ತಯಾರಿಸುತ್ತಿದ್ದಾನೆ. ಆದರರ್ಥ ಇಷ್ಟೇ. ಭೀಮೆಯ ತೀರ ಮತ್ತಷ್ಟು ಹೆಣಗಳು ಉರುಳುತ್ತವೆ. ಭೀಮಾ ನದಿ ನೀರು ಕೆಂಪಾಗುತ್ತದೆ.





ಶವಾಗಾರದ ದೃಶ್ಯಗಳು....



ಹಳ್ಳಹಿಡಿದಿರುವ ಧರ್ಮಸಿಂಗ್-ಖರ್ಗೆ





ಕಲಬುರ್ಗಿ ಜಿಲ್ಲಾ ಪಂಚಾಯತಿಯಲ್ಲಿ ಇತ್ತೀಚೆಗೆ ನಡೆದಿರುವ ಪ್ರಕರಣಗಳಿಗೆ ಮೂಲ ಕಾರಣ ರಾಜ್ಯದ ಕರಟಕ ದಮನಕ ಖ್ಯಾತಿಯ ಧರ್ಮ ಸಿಂಗ್- ಮಲ್ಲಿಕಾರ್ಜುನ್ ಖರ್ಗೆ ಎನ್ನದೆ ವಿಧಿಯಿಲ್ಲ. ಇಂದು ಕಲಬುರ್ಗಿ ಜಿಲ್ಲಾ ಪಂಚಾಯತಿಯಲ್ಲಿ ಎಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರೆ ಅದ ಇಲ್ಲಿನ ಯಾವ ಸದಸ್ಯರು ಯಾವ ಪಕ್ಷದಿಂದ ಗೆದ್ದು ಬಂದರು ಎಂದು ಸ್ಪಷ್ಟವಾಗಿ ಹೇಳುವುದೇ ಕಷ್ಟವಾಗುತ್ತದೆ. ಯಾಕೆಂದರೆ ಇಲ್ಲಿ ಎಲ್ಲವೂ ಕಲಸು ಮೇಲೋಗರವಾಗಿದೆ. ರಾಜಕೀಯ ಪ್ರಲೋಭನೆ(ಹಣದ ಥೈಲಿ)ಗೆ ಒಳಗಾದ ಜಿಲ್ಲಾ ಪಂಚಾಯತ್ ಸದಸ್ಯರು ತಮ್ಮ ಮೂಲ ಪಕ್ಷಕ್ಕೆ ತಿಲಾಂಜಲಿ ನೀಡಿ, ಸಾಂದರ್ಭಿಕವಾಗಿ ಯಾವ ಪಕ್ಷವನ್ನು ಅಪ್ಪಿಕೊಂಡು ಮುದ್ದಾಡಿದರೆ ಮುದನೀಡುತ್ತದೋ ಅದನ್ನೆ ಅಪ್ಪಿಕೊಂಡು ಹೊರಟಿದ್ದಾರೆ.

"ನಮ್ಮ ಮಾತುಗಳನ್ನು ಮೀರಿ ಅದು ಹೇಗೆ ಇವರೆಲ್ಲ ಹೋಗುತ್ತಾರೆ" ಎಂದು ಮೊಗಮ್ಮಾಗಿ ಕೂತಿದ್ದ ನಾಯಕರಿಗೆ, ತಮ್ಮ ದಾರಿಯನ್ನು ತಾವೇ ಹುಡುಕಿಕೊಂಡು ಹೋಗುವ ಮೂಲಕ ಇಲ್ಲಿನ ಜಿಪಂ ಸದಸ್ಯರು ಮರ್ಮಾಘಾತ ಉಂಟುಮಾಡಿದ್ದಾರೆ.

ಮಾಲೀಕಯ್ಯ ಗುತ್ತೇದಾರ ಕೂಡ "ಕೈ ಮೀರಿದ ಇಂಥ ಸಂದರ್ಭದಲ್ಲಿ ತಾನು ಮಧ್ಯ ಪ್ರವೇಶಿಸಿ ಮುಖಭಂಗ ಅನುಭವಿಸುವುದು ಬೇಡ" ಎಂದು ಸುಮ್ಮನಾದರು. ಮಾಲೀಕಯ್ಯನಂತೂ "ಎಲ್ಲಾ ಹಾಳಾಗಿ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದವನು ನಾನು" ಎಂಬ ಅಭಿದಾನಕ್ಕೆ ಪಾತ್ರರಾಗುವುದು ಬೇಡ ಎಂದು ದೂರ ಸರಿದರು.

ಆದರೆ ಜಟ್ಟ ಸೋತರೂ ತನ್ನ ಮೀಸೆಗೆ ಮಣ್ಣು ಹತ್ತಿಲ್ಲ ಎಂಬ ವಿತಂಡವಾದಕ್ಕೆ ಜೋತುಬಿದ್ದ ಧರ್ಮ ಸಿಂಗ್ ಕೊನೆ ಘಳಿಗೆಯಲ್ಲಿ 'ಪಕ್ಷದ ವಿಪ್' ಜಾರಿಮಾಡಿದರು. ಆದರೆ ಆದಾಗಲೆ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದ ಕಾಂಗ್ರೆಸ್‌ನ ಅತೃಪ್ತ ಸದಸ್ಯರು ವಿಪ್ ಅನ್ನು ಉಲ್ಲಂಘಿಸಿದರು. ಆ ಸಂದರ್ಭದಲ್ಲಿ ಅವರನ್ನು ಮತ್ತೆ ಮತ್ತೆ ಒಂದುಗೂಡುವಂತೆ ಮಾಡಿದ್ದು ಹಾಗೂ ಒಗ್ಗಟ್ಟಾಗುವಂತೆ ಪ್ರಚೋದನೆ ನೀಡಿದ್ದು ಬಸವಣ್ಣನವರ "ಭಕ್ತಿ ಶುಭಾಶಯದ ನುಡಿಯ ನುಡಿವೆ. ನುಡಿದಂತೆ ನಡೆವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯ್ಯಲ್ಲಿದೆ. ಒಂದು ಜವೆ ಕೊರತೆಯಾದಡೆ ಎನ್ನನ್ನದ್ದಿ ನೀ ಎದ್ದು ಹೋಗಾ!" ಎಂಬ ವಚನವಂತೆ.



ಡಾ. ಶೈಲಜಾಶರಣಭೂಪಾಲರೆಡ್ಡಿ ಅಧ್ಯಕ್ಷರು ಜಿ.ಪಂ, ಸುಭಾಸ ರಾಠೋಡ ಸದಸ್ಯರು ಜಿ.ಪಂ. ಹಾಗೂ ಸುರೇಶ ಸಜ್ಜನ

ಬಂಡಾಯ ಗುಂಪಿನ ನಾಯಕರು ನಿರ್ಧರಿಸಿದವರೇ ಜಿಲ್ಲಾ ಪಂಚಾಯತಿ ಅಧ್ಯಕ್ಷಳಾಗಬೇಕು ಎಂಬಂತೆ ಇದೀಗ ಯಾದಗಿರಿ ಮತಕ್ಷೇತ್ರದ ನಾಯ್ಕಲ್ ಜಿಲ್ಲಾ ಪಂಚಾಯತಿ ಸದಸ್ಯೆ ಡಾ.ಶೈಲಜಾ ಶರಣಭೂಪಾಲರೆಡ್ಡಿ ಅಧ್ಯಕ್ಷಳಾಗಿದ್ದಾಳೆ. ಬಿಜೆಪಿ ಮೂಲದ ಸುರೇಶ್ ಸಜ್ಜನ ಉಪಾಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಕಾಂಗ್ರೆ ನಾಯಕರ ಮುಖಕ್ಕೆ ಮಸಿ ಬಳಿದಿದ್ದಾರೆ. ಇಷ್ಟೆಲ್ಲ ಆದರೂ ಬಂಡಾಯ ಸಾರಿದ ಹದಿನಾರು ಕಾಂಗ್ರೆಸ್ ಜಿಪಂ ಸದಸ್ಯರ ವಿರುದ್ಧ ಕ್ರಮ ತೆಗೆದುಕೊಳ್ಳಲು ಆ ಪಕ್ಷ ಮುಂದಾಗಿಲ್ಲ. ಬದಲಾಗಿ ಈ ಎಲ್ಲಾ ಕರಾಮತ್ತುಗಳಿಗೆ ಕಾರಣಿಕರ್ತರಾದ ನಾಲ್ಕು (ಕಸ್ತೂರಿಬಾಯಿ ನೀಲಕಂಠ ಬಡಿಗೇರ, ಸುಭಾಸ ರಾಠೋಡ, ಶ್ರೀನಿವಾಸಾಚಾರಿ ಮತ್ತು ಹರ್ಷಾನಂದ ಗುತ್ತೇದಾರ) ಜಿಪಂ ಸದಸ್ಯರ ಮೇಲಷ್ಟೆ ಗದಾಪ್ರಹಾರ ನಡೆಸಿ ಅವರನ್ನು ಪಕ್ಷ ವಿರೋಧಿ ಚಟುವಟಿಕೆಯ ಮೇಲೆ ನಾಲ್ಕು ವರ್ಷಗಳ ಕಾಲ ಪಕ್ಷದಿಂದ ಸಸ್ಪೆಂಡ್ ಮಾಡಿದೆ.

ಆದರೆ ಜಿಪಂ ಸದಸ್ಯರು ಈ ಸಸ್ಪೆಂಡ್ ಕ್ರಮವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಮಾತ್ರವಲ್ಲ ಖರ್ಗೆ, ಧರ್ಮಸಿಂಗ್ ಮುಂತಾದ ಮುಖಂಡರ ಜೋಭದ್ರಗೇಡಿತನದ ಬಗ್ಗೆ ಹೈಕಮಾಂಡಗೆ ತಿಳಿಸಲು ದೆಹಲಿಯತ್ತ ಮುಖಮಾಡಿ ಹೊರಟದ್ದಾರೆ.

ಕೆಲ ತಿಂಗಳ ಹಿಂದೆ ಕಾಂಗ್ರೆಸ್ ಪಕ್ಷದ ವಿಪ್ ಉಲ್ಲಂಘನೆ ಮಾಡಿದ್ದ 16 ಜನರು ತಮ್ಮ ಪಕ್ಷಕ್ಕೆ ...ರಾ ಇತ್ತೀಚೆಗೆ ಸೇರಿದ್ದ ಜಿಲ್ಲಾ ಪಂಚಾಯತಿಯ ಅಧ್ಯಕ್ಷೆಯ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದರು. ಈ ಹದಿನಾರು ಜನರ ವಾದ "ಮೊನ್ನೆ ಮೊನ್ನೆ ನಮ್ಮ ಪಕ್ಷ ಸೇರಿದವರಿಗೆ ಮಣೆ ಹಾಕುವುದ್ಯಾಕೆ?" ಎಂಬುದೇ ಆಗಿತ್ತು. ಭಾರತಿ ಪಾಟೀಲ ಪಕ್ಷೇತರರಾಗಿ ಜಿಪಂಗೆ ಆಯ್ಕೆಯಾಗಿದ್ದರೂ ಆನಂತರ ಬಿಜೆಪಿಯನ್ನು ಅಪ್ಪಿಕೊಂಡು ಅಧ್ಯಕ್ಷಳಾಗಿದ್ದಳು. ಆದರೆ ಅಧಿಕಾರದ ರುಚಿಯನ್ನು ಕಂಡ ಈಕೆ ತನ್ನ ಅವಧಿ ಮುಗಿದ ನಂತರ ಇನ್ನೊಬ್ಬರಿಗೆ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಡಲು ತಯಾರಿರಲಿಲ್ಲ. ಆದ್ದರಿಂದ ಈಕೆ ಒಂದು ತಂತ್ರವನ್ನು ಹೂಡಿದಳು. ಕಳೆದ ವಿಧಾನಸಭೆಯ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆ ಪಕ್ಷವನ್ನು ಅಪ್ಪಿಕೊಂಡಳು. ಇದು ...ತರ ಕಾಂಗ್ರೆ ಪಕ್ಷದ ಜಿಲ್ಲಾ ಪಂಚಾಯತಿ ಸದಸ್ಯರಿಗೆ ನುಂಗಲಾಗದ ತುತ್ತಾಗಿತ್ತು.




ಇದು ಧರ್ಮಸಿಂಗ್, ಖರ್ಗೆ ಹಾಗೂ ಜಿಲ್ಲಾ ಕಾಂಗ್ರೆ ಅಧ್ಯಕ್ಷ ಅಲ್ಲಮಪ್ರಭು ಪಾಟೀಲ ...ಗೆ ಗೊತ್ತಿಲ್ಲದ ಸಂಗತಿ ಏನಲ್ಲ. ಆದರೆ ಅಲ್ಲಮ ಪ್ರಭುವಾಗಲಿ, ಧರ್ಮಸಿಂಗ್‌ರಾಗಲಿ ಬೇಕಂತಲೇ ಈ ...ಗ್ಗೆ ಕುರುಡು ಮೌನ ತಾಳಿದರು. ಭಾರತಿ ಪಾಟೀಲ ...ರ್ಗಿ ವಿಧಾನಸಭೆಯ ಮತಕ್ಷೇತ್ರದಲ್ಲಿ ಬರುವ ...ಸೋಗಿಯಿಂದ ಜಿಪಂಗೆ ಗೆದ್ದು ಬಂದಿದ್ದಳು. ಸ್ವತಃ ...ರ್ಮ ಸಿಂಗ್ ಹಾಗೂ ಅಲ್ಲಮಪ್ರಭು ಪಾಟೀಲರ ...ರು ಸಹ ಸೇರಿ ಹೋಗಿ. ಹೀಗಾಗಿ ಅವರು ಭಾರತಿ ...ಯೇ ಜಿಪಂನ ಅಧ್ಯಕ್ಷಳಾಗಿ ಮುಂದುವರೆಯಲಿ [illegible]

[illegible] ಇದು ಗೊತ್ತಿಲ್ಲದ ...ಗತಿಯೇನಾಗಿರಲಿಲ್ಲ, ತಾನು ... ಈ ವಿಷಯದಲ್ಲಿ ...ಮಾಡಿಸಿದರೆ ಧರ್ಮಸಿಂಗ್ ಅವರಿಗೆ ಎಲ್ಲಿ [illegible] ... ಕುಳಿತುಬಿಟ್ಟರು. ... ಕಾಂಗ್ರೆ ಮುಖಂಡ [illegible]

ಇದನ್ನು ಕಂಡು ಕರಟಕ-ದಮನಕಗಳು ಕುಳಿತಲ್ಲಿಯೆ ಮೈಬೆವರು ಒರೆಸಿಕೊಳ್ಳುತ್ತಿದ್ದಾರೆ. ಕೊನೆಗೂ ತಮ್ಮ ಇಬ್ಬರ ಬಯಲಾಗಿ ನಾಯಕರು ಬೆತ್ತಲಾಗಿದ್ದಾರೆ. ಯಾವುದೋ ಒಂದು ಗಟ್ಟಿ ನಿರ್ಧಾರಕ್ಕೆ ಬಂದು ಪಕ್ಷಭೇದವನ್ನು ಮರೆತು 'ಅಭಿವೃದ್ಧಿ ರಂಗ' ರಚಿಸಿಕೊಂಡುದ್ದಾಗಿ ಹೇಳಿಕೊಂಡಿರುವ ಕಲಬುರ್ಗಿ ಜಿಲ್ಲಾ ಪಂಚಾಯತ್ ಸದಸ್ಯರು ಕಲಬುರ್ಗಿಯನ್ನು ಅಭಿವೃದ್ಧಿ ಮಾಡುತ್ತಾರೋ? ಅಥವಾ ತಾವು ಮಾತ್ರ ಅಭಿವೃದ್ಧಿ ಯಾಗುತ್ತಾರೋ? ಮುಂಬರುವ ದಿನಗಳೇ ಇದಕ್ಕೆ ಉತ್ತರ ಹೇಳಲಿವೆ.

■ ಪಿಸ್ತಾರಾಧ್ಯ ಸತ್ಯಂಪೇಟೆ



ಅಬೀಡ್ಸ್ ನ್ಯಾಯ

ಹೈದರಾಬಾದಿನಲ್ಲಿ ಅಬೀಡ್ಸ್ ರಸ್ತೆ ಅಂತ ಒಂದು ಇದೆ. ಅದ ನೋಡೋಕೆ ಒಂದು ಚಂದ. ಹಣದ ದೆಪ್ಪ ದುಟ್ಟಿಕೊಂಡಿರೋರೆಲ್ಲ ಅಲ್ಲಿನ ವ್ಯಾಪಾರಿಕೇಂದ್ರಗಳಿಗೆ ಹೋದರೆ ತಮ್ಮ ಘನತೆಗೆ ಒಪ್ಪುವಂತಹುದು ಎಂದು ಭಾವಿಸುತ್ತಾರೆ. [illegible] ತಿರುಗಾಡಿದರೆ ಅವಮಾನ ಅಲ್ವ. ಅಂಗಡಿಗಳ ಬಾಗಿಲಿಗೆ ಕಾರು ಬರಬೇಕು. ಐಷಾರಾಮಿ ಕಾರಿನಿಂದ ತಮ್ಮ ದೇಹ ಇಳಿಯುವುದು ಹತ್ತು ಜನರ ಕಣ್ಣುಕುಕ್ಕಬೇಕು. ಹಾಗೆ ಆಗದಿದ್ದರೆ ಅಂತಹ ವಾಹನಗಳಲ್ಲಿ ಬಂದ ಖುಷಿಯೇ ಸಿಕ್ಕಲ್ಲ. ಈ ಗುಟ್ಟು ಅಲ್ಲಿನ ಮುಖ್ಯಮಂತ್ರಿಗೆ ತಿಳೀತು. ಆ ರಸ್ತೆ ಅಂಗಡಿ ಮಾಲೀಕರು ಹಲ್ಲುಗಿಂಜೋ ಹಾಗೆ ಮಾಡ್ತೀನಿ ಅಂತ ಅದ 'ಏಕಮುಖ ಸಂಚಾರ ರಸ್ತೆ' ಅಂತ ಘೋಷಿಸಿದನಂತೆ. ಎಲ್ಲ ಕಾರಿನಲ್ಲಿ ಬಂದು ವ್ಯಾಪಾರ ಮಾಡೋರಲ್ಲ. ಏಕದಂ ವ್ಯಾಪಾರ ಕುಸಿಯಿತಂತೆ. ರಾಜಕಾರಣಿಗಳನ್ನು ಅದ್ದಡ್ಡ ನುಂಗುವ ವ್ಯಾಪಾರಿಗಳು ಅವರು. ಬ್ರೀಫ್‌ಕೇಸ್‌ನ ಗರ್ಭಗುಡಿಗೆ ಸೇರಿಸಿ ಕೃತಾರ್ಥರಾದರಂತೆ. ವಾಹನ, ಜನರ ದಟ್ಟಣೆಯ ಕಾರಣ ನೀಡಿ ಮಾಡಿದ್ದ ಏಕಮುಖ ಸಂಚಾರ ರಸ್ತೆಯಲ್ಲಿ ಇವು ಕಡಿಮೆಯಾದವಂತೆ. ಮತ್ತೆ ದ್ವಿಮುಖ ಸಂಚಾರ ಸುಗಮವಾಗಿ ಆಯ್ತಂತೆ. ಅದು ಯಾವುದೋ ಕಾಲದಲ್ಲಿ ಹೀಗೆಲ್ಲ ನಡೀತು ಅಂತ ತಿಳಿದಾಗ ನಮ್ಮ ಸರ್ಕಾರ ದಿನಕ್ಕೊಂದು ನೀತಿ ರೂಪಿಸುತ್ತಿರೋದು ನೆನಪಾಯಿತು. ಬಡವರು, ಮಧ್ಯಮವರ್ಗದವರು ಅಕ್ರಮವಾಗಿ ಕಟ್ಟಡ ನಿರ್ಮಿಸಿಕೊಂಡಿದ್ದಾರೆ. ಅವನ್ನ ಸಕ್ರಮಗೊಳಿಸದೇ ಇದ್ದರೆ ಆ ಬಡಪಾಯಿಗಳಿಗೆ ಭಾರೀ ಅನ್ಯಾಯ ಆಗುತ್ತೆ ಅದಕ್ಕೆ ಅವನ್ನ ದಂಡವಿಧಿಸಿ ಸಕ್ರಮಗೊಳಿಸಿತೀವಿ ಅಂತ ಸಾರಿಗೆ ಸಚಿವರು ಸಾರಿದರು. ಕಾನೂನುರೀತಿಯೇ ಕಟ್ಟಡ ನಿರ್ಮಿಸಿ ಅಕ್ರಮ ಕಟ್ಟಡಗಳಿಂದ ತೊಂದರೆಗೊಳಗಾಗಿರೋರಿಗೆ ಒಂದು ಮಾತು. ನಿಮಗೆ ಮುಂದಾಲೋಚನೆಯಿಲ್ಲ. ಇಂತಹ ರಾಮರಾಜ್ಯ ಮುಂದೆ ಅಧಿಕಾರಕ್ಕೆ ಬರುತ್ತೆ ಎಂಬುದನ್ನು ತಿಳಿದು ಕಾನೂನುಬಾಹಿರ ಕಟ್ಟಡದ ಒಡೆಯನಾಗಿದ್ದರೆ ನೀವೂ ಫಲಾನುಭವಿ ಆಗಬಹುದಿತ್ತಲ್ಲಾ! ಇದು ಒಂದು. ಯೋಜಿತ ರೀತಿಯ ನಗರ ಬೆಳವಣಿಗೆಗೆ ಭೂಮಾಫಿಯಾ ತಡೆಗೆ ರಾಮಬಾಣ ಅಂತ ರೆವಿನ್ಯೂ ನಿವೇಶನಗಳ ನೋಂದಣಿಗೆ ತಡೆ ಹಾಕಿತ್ತು ಹಿಂದಿನ ಸರ್ಕಾರ. ಎಲಾ ಎಲಾ ಇಲ್ಲೆಲ್ಲ ಕಟ್ಟಡ ಇದ್ದಿದ್ದರೆ ಸರ್ಕಾರಕ್ಕೆ ಕಂದಾಯ ಸಿಗ್ತಿತ್ತು ಬಡವರಿಗೆ ಒಂದು ನೆಲೆಯಾಗ್ತಿತ್ತು ಎಂದು ಚಿಂತಿಸಿದ ಯಡ್ಯೂರಪ್ಪನವರು ಅವುಗಳ ನೋಂದಣಿಗೆ ಅನುಮತಿ ನೀಡ್ತೀವಿ ಅಂದರು. ಇಂತಹವುಗಳನ್ನೆಲ್ಲ ನೋಡ್ತಾ ಇದ್ದರೆ 'ಅಬೀಡ್ಸ್ ನ್ಯಾಯ' ತಾಂಡವವಾಡುತ್ತಿದೆ ಅನ್ನೋ ಗುಮಾನಿ ಕಾಡುತ್ತೆ ಅಲ್ವಾ!



ತ್ಯಾಗವೀರರು!

ಚುನಾವಣೆ ಸಮೀಪಿಸುತ್ತಿದ್ದಂತೆ ಅಧಿಕಾರಸ್ಥ ಸಮಾಜಸೇವಕರಿಗೆ ವಿಪರೀತ ಸಂಕಟ ಪ್ರಾರಂಭ ಆಗುತ್ತೆ, ಜನ ಮೆಚ್ಚುಗೆಗಾಗಿ ಆಡಬಾರದ ಆಟ, ಕಟ್ಟಬಾರದ ಯಾಸಕಟ್ಟಬೇಕಾಗುತ್ತೆ. ಸಂಸದರಿಗೂ ಅದೇ ಆಗಿರೋದು. ಮೂರು ತಿಂಗಳು ಮುಂಚೇನೆ ರಾಜೀನಾಮೆ ಕೆರೆದು ಬಿಸಾಕಿ 'ತ್ಯಾಗವೀರ'ನಾಗುವ ಬಯಕೆ ಕಾಡಿ ಯಾವುದಾದರೂ ಒಳ್ಳೆಯ ಅವಕಾಶ ಕಾಯುತ್ತಿದ್ದವರಿಗೆ ಮಹಾರಾಷ್ಟ್ರದಲ್ಲಿ ಉತ್ತರದವರ ವಿರುದ್ಧದ ದಾಳಿ ರಸಗುಲ್ಲ ಆಯಿತು. ಆರ್‌ಜೆಡಿ ಪಕ್ಷದ ಸಂಸದರು ಇದರ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ಕೊಡಲು ತುದಿಗಾಲಲ್ಲಿ ನಿಂತರು. ಅರೆರೆ ಅವರಿಗೆ ಕ್ರೆಡಿಟ್ ಹೋಗಿಬಿಡುತ್ತಲ್ಲಾ ಎಂಬ ಕಾರಣಕ್ಕಾಗಿ ಸಂಯುಕ್ತ ಜನತಾದಳದ ಸಂಸದರು ಆತುರಾತುರವಾಗಿ ರಾಜೀನಾಮೆ ನೀಡಿಯೇ ಬಿಟ್ಟರು! ಇದು ರಾಷ್ಟ್ರದ ಮಾತಾಯಿತು. ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಬಂದು ಬಾಗಿಲಲ್ಲಿ ನಿಂತಿದೆ. ಶಿವನಗೌಡನಾಯಕರು ಗೊತ್ತಲ್ಲ, ಅದೇ ಗ್ರಂಥಾಲಯ ಇಲಾಖೆ ಸಚಿವರು. ಯಾವುದೋ ಪಕ್ಷದಿಂದ ಆರಿಸಿ ಬಂದು ಮತ್ತಿನ್ನಾವುದೋ ಪಕ್ಷಕ್ಕೆ ಹಾರಿ ಕ್ಷೇತ್ರದ ಅಭಿವೃದ್ಧಿ ಮಾಡುತ್ತಿರೋರು. ದೇವದುರ್ಗ ಬಡತಾಲ್ಲೂಕು ತಾನೆ. ಅಲ್ಲಿನ ಬಡವರ ಮೇಲೆ ಪ್ರೀತಿ ಉಕ್ಕಿ ಹರೀತು. ಕಾಲೇಜುಮಕ್ಕಳಿಗೆ ಪಠ್ಯಪುಸ್ತಕ ಕೊಳ್ಳಲು ಪ್ರಯಾಸ. ಅವರ ಗೋಳು ನೋಡಿ ನೊಂದರು. ಅನುಕಂಪ ಅನ್ನೋದು ಉಕ್ಕಿಹರೀತು. ಪಠ್ಯಪುಸ್ತಕಗಳನ್ನು ಸ್ವಂತ ಹಣಹಾಕಿ ಕೊಂಡರು. ಅವನ್ನ ಬಡಮಕ್ಕಳಿಗೆ ತಲುಪಿಸಬೇಕಲ್ಲ ಸರ್ಕಾರಿ ಯಂತ್ರಾನ ಬಳಸಿಕೊಂಡರು. ಪುಸ್ತಕಗಳ ಮೇಲೆ ಸರ್ಕಾರದ ಸೀಲೂ ಹಾಕಿಸಿದರು. ಎಡಗೈಲಿ ಕೊಟ್ಟ ದಾನ ಬಲಗೈಗೂ ತಿಳೀಬಾರದು ಅನ್ನೋದು ಓಬರಾಯನ ಕಾಲದ ಮಾತು. ಪುಸ್ತಕಗಳನ್ನು ಹಂಚಿದ ಧರ್ಮರಾಯ ಯಾರು ಅಂತ ಜನರಿಗೆ ತಿಳಿಯಬೇಕಲ್ಲ ಅಂತಾವ ಹಿಂದಿನ ರಟ್ಟಿನ ಮೇಲೆ ತಮ್ಮ ಭಾವಚಿತ್ರ ಬರೋಹಾಗೆ ನೋಡಿಕೊಂಡರು. ಕೇವಲ ಚಿತ್ರ ಇದ್ದರೆ ಸಾಲದು ಎಂದೋ ಏನೋ ತಾನು ಎಂತಹ ಮಹಾತ್ಮ ಅನ್ನುವುದರ ಕಿರುಪರಿಚಯನೂ ಮಾಡಿಕೊಂಡರು ಬೆನ್ನುಡಿಯಲ್ಲಿ. ಪಕ್ಷಾಂತರ ನಿಷೇಧ ಕಾಯ್ದೆಗೆ ವಂಚಿಸಿದವರಲ್ಲಿ ತಾನೂ ಒಬ್ಬ ಎಂಬುದನ್ನೂ ತಿಳಿಸಿದ್ದಾರೆಯೇ, ಗೊತ್ತಿಲ್ಲ. ಚುನಾವಣೆ ನೀತಿ ಸಂಹಿತೆ ಜಾರಿಗೆ ಬರುವ ಮುನ್ನವೇ ಇಂತಹ ವ್ಯವಹಾರಗಳನ್ನು ಮಾಡಿಬಿಡಬೇಕು ಅನ್ನೋದು ತತ್ವ; ಸಿದ್ಧಾಂತಗಳ ಪಕ್ಷದ ಸಿದ್ಧಾಂತವೇ ತಾನೇ!

ಪ್ರಧಾನಿ ಆದರೆ....



ಪ್ರಧಾನಿ ಅನ್ನಿಸಿಕೊಳ್ಳಲು ತುಡಿಯುತ್ತಿರುವ ಮನಸ್ಸುಗಳು ಹಲವು ಇವೆ. ಅಂತಹವೆಲ್ಲ ಏನೇನೋ ಕಸರತ್ತು ಮಸಲತ್ತು ಮಾಡ್ತಾ ಇವೆ. ಒಂದು ವೇಳೆ ಅವರಲ್ಲಿ ಯಾರಾದರೂ ಪ್ರಧಾನಿಯಾದರೆ ಏನು ಸಾಧಿಸಬಹುದು ಅನ್ನುವ ಚರ್ಚೆ ನಡೆಯುತ್ತಿತ್ತು. ಅಲ್ಲಿ ಮೂಡಿ ಬಂದದ್ದು.

ಲಲ್ಲೂ ಪ್ರಸಾದ್ ಯಾದವ್ : ಬಿಹಾರವೇ ರಾಷ್ಟ್ರ, ರಾಷ್ಟ್ರವೇ ಬಿಹಾರ ಇವರಿಗೆ. ಬಿಹಾರ ಬಿಟ್ಟು ಮತ್ತಾವುದೂ ಕಾಣದು. ಎಂಎನ್‌ಎಸ್‌ನವರು ಬಿಹಾರಿಗಳ ಮೇಲೆ ದಾಳಿ ಮಾಡಿದಾಗ 'ಮಹಾರಾಷ್ಟ್ರದ ಎಲ್ಲ ರೈಲುಗಳನ್ನು ರದ್ದು ಮಾಡ್ತೀನಿ' ಅನ್ನುವಷ್ಟು ಅಭಿಮಾನ. ಇವರು ಪ್ರಧಾನಿ ಆದರೆ... ದೆಹಲಿಯ ಬದಲು ಪಾಟಲೀಪುತ್ರ ರಾಜಧಾನಿ ಆಗುತ್ತೆ!

ಮಾಯಾವತಿ: ದಲಿತ್ ಕೀ ಬೇಟಿ. ಉತ್ತರಪ್ರದೇಶದ ಹಲವೆಡೆ ಎತ್ತರ ಪ್ರತಿಮೆ ಸ್ಥಾಪಿಸಿಕೊಂಡಿರುವುದಕ್ಕೆ ಪ್ರಸಿದ್ಧಿ. ಇವರು ಪ್ರಧಾನಿ ಆದರೆ... ಅಂಬೇಡ್ಕರ್ ಸಾಹಿತ್ಯ ಓದುತ್ತಿರುವ ಮಾಯಾವತಿ ಬೃಹತ್ ಪ್ರತಿಮೆ ದೇಶದ ಹಲವೆಡೆ!

ಉಮಾಭಾರತಿ: ಸನ್ಯಾಸಿನಿ. ಅಧಿಕಾರದ ವ್ಯಾಮೋಹ ಬಿಟ್ಟಿಲ್ಲ. ಹಿಂದುತ್ವದ ಬಗ್ಗೆ ಒಲವು ಸಾಧ್ವಿ ಪ್ರಜ್ಞಾಸಿಂಗ್‌ಗೆ ಬೆಂಬಲ. ಉತ್ತರಪ್ರದೇಶದ ವಿಧಾನಸಭೆಯಲ್ಲಿ ಸ್ಪರ್ಧಿಸಲು ಭಯೋತ್ಪಾದಕರಿಗೆ [illegible] ಈಕೆ ಪ್ರಧಾನಿ ಆದರೆ.... ಹಿಂದೂ ಭಯೋತ್ಪಾದಕರಿಗೆ ತರಬೇತಿ [illegible] ಸಂಸ್ಥೆಯ ಅಧಿಕೃತ ನೇಮಕ! ■



►►► 10

ಗಣನೀಯ ಪ್ರಮಾಣದಲ್ಲಿ ಕ್ರಿಶ್ಚಿಯನ್ನರು, ಸಿಖ್ಖರು, ಬೌದ್ಧರು, ಜೈನರು ಇದ್ದಾರೆ. ಅವರನ್ನೆಲ್ಲಾ ಫಿಜಿಕಲ್ ಆಗಿ ನಿರ್ಮೂಲನೆ ಮಾಡುವುದು ಹಿಂದೂತ್ವವಾದಿಗಳಿಗೆ ಸಾಧ್ಯವಿಲ್ಲ. ಗುಜರಾತ್‌ನಂತಹ ನರಮೇಧಗಳನ್ನು ಪ್ರತಿವರ್ಷ ನಡೆಸಿದರೂ ಭಾರತದಲ್ಲಿರುವ ಧಾರ್ಮಿಕ ಅಲ್ಪಸಂಖ್ಯಾತರನ್ನು ನಿರ್ಮೂಲನೆ ಮಾಡಿ ಹಿಂದೂತ್ವ ಸಾಮ್ರಾಜ್ಯವನ್ನು ಕಟ್ಟಲಾಗುವುದಿಲ್ಲ. ಪ್ರಾಯಶಃ ಅದಕ್ಕೇ ಇರಬೇಕು, ಭಾರತದ ಬಲಿಷ್ಠ ಸೈನ್ಯವನ್ನೇ ಕೇಸರೀಕರಣ ಮಾಡಿ, ಆ ಸೈನ್ಯದ ಮೂಲಕವೇ ಅಲ್ಪಸಂಖ್ಯಾತರ ಮಾರಣಹೋಮಕ್ಕೆ ತಯಾರಾಗುತ್ತಿರಬಹುದು. ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜರ್ಮನಿಯಲ್ಲಿ ಹಿಟ್ಲರ್ ಮಾಡಿದ್ದೂ ಇದನ್ನೆ. ಅವತ್ತು ಆತ ಯಹೂದಿಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ಕೊಂದರೆ, ಈ ಹೊತ್ತು ಸಂಘಪರಿವಾರಿಗಳು ಕೋಟ್ಯಾಂತರ ಸಂಖ್ಯೆಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರನ್ನು ಕೊಲ್ಲುವ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸೇನೆಯಲ್ಲಿ ಆರ್‌ಎಸ್‌ಎಸ್‌ನಲ್ಲಿ ಕೆಲಸ ಮಾಡಿದವರು, ಆರ್‌ಎಸ್‌ಎಸ್‌ನ ಹಿಂದೂತ್ವವಾದಿ ನಂಜಿನ ಸಿದ್ಧಾಂತವನ್ನು ತಲೆಗಿಳಿಸಿಕೊಂಡವರು, ಅದಕ್ಕಾಗಿ ಸೇನೆಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿರುವವರು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸೇನೆಗೆ ಸೇರ್ಪಡೆಯಾಗುವಂತೆ ಖುದ್ದು ಆರ್‌ಎಸ್‌ಎಸ್ ತನ್ನ ಸದಸ್ಯರನ್ನು ಹುರಿದುಂಬಿಸುತ್ತಿದೆ. ಸೇನೆಯಿಂದ ನಿವೃತ್ತಿಯಾದವರು ಬಿಜೆಪಿಯ ಡಿಫೆನ್ಸ್ ಸೆಲ್‌ನಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಲಾಗುತ್ತದೆ. ಇದೊಂದು ಕಪೋಲಕಲ್ಪಿತ ರಂಜಕ ವಿಚಾರವಲ್ಲ. ನಿವೃತ್ತ ಸೈನ್ಯಾಧಿಕಾರಿ ಕರ್ನಲ್ ಬಗ್ಗಿಯವರೇ ಹೊರಗೆಡವಿದ ವಾಸ್ತವ ಸತ್ಯ. ಭಾರತೀಯ ನೌಕಾಪಡೆಯ ನಿವೃತ್ತ ಮುಖ್ಯಸ್ಥ ಆಡ್ಮಿರಲ್ ವಿಷ್ಣು ಭಾಗವತ್ ಕೂಡ "ಗುಪ್ತಚರ ಇಲಾಖೆಯೊಳಗೆ, ಮಿಲಿಟರಿಯೊಳಗೆ ಹಾಗೂ ಅಧಿಕಾರಸ್ಥಾಯಿಯ ಎಲ್ಲಾ ಸ್ತರಗಳೊಳಗೆ ತನ್ನ ಕೇಡರ್‌ಗಳನ್ನು ತೂರಿಸುವುದಕ್ಕೆ ಆರ್‌ಎಸ್‌ಎಸ್ ಮೊದಲಿನಿಂದಲೂ ಪ್ರಯತ್ನಿಸುತ್ತಿದೆ" ಎಂದು ಹೇಳಿದ್ದಾರೆ. ಇದಕ್ಕೆ ಇತ್ತೀಚೆಗೆ ಮುಂಬಯಿಯ ಭಯೋತ್ಪಾದಕ ನಿಗ್ರಹದಳ ಬಂಧಿಸಿರುವ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್, ಭಾರತೀಯ ಸೇನೆಯ ನಿವೃತ್ತ ಮೇಜರ್ ರಮೇಶ್ ಶಿವಾಜಿ ಉಪಾಧ್ಯಾಯ ಒಂದು ಜೀವಂತ ನಿದರ್ಶನ. ತನಿಖೆ ನಡೆಸುತ್ತಿರುವ ಎಟಿಎಸ್ ಇನ್ನಷ್ಟು ಸೇನಾಧಿಕಾರಿಗಳನ್ನು ಬಂಧಿಸುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ.

ಇದು ಸೇನಾಧಿಕಾರಿಗಳ ಕಥೆಯಾಯಿತು. ಅಂತೆಯೇ, ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿರುವ ಸ್ವಾಮಿಗಳಿಗೇನೂ ಕೊರತೆಯಿಲ್ಲ. ಮಾಲೇಗಾಂವ್ ಸ್ಫೋಟ ಪ್ರಕರಣದ ಬಗ್ಗೆ ತನಿಖೆ ನಡೆಸಿರುವ ಮುಂಬಯಿಯ ಭಯೋತ್ಪಾದಕ ನಿಗ್ರಹ ದಳ ಬಂಧಿಸಿರುವ ವ್ಯಕ್ತಿಗಳಲ್ಲಿ ಪ್ರಮುಖರೆಂದರೆ ಸಾಧ್ವಿ ಪ್ರಗ್ಯಾ ಸಿಂಗ್ ಮತ್ತು ಸ್ವಾಮಿ ದಯಾನಂದ ಪಾಂಡೆ. ಇಬ್ಬರೂ ಕೇಸರಿ ಧರಿಸಿರುವ 'ಸ್ವಾಮಿ'ಗಳೆ! ಸಮಾಜ ಸುಧಾರಣೆ ಮಾಡಬೇಕಾದವರು ಬಾಂಬ್ ಹಾಕುವ ಕೆಲಸದಲ್ಲಿ ನಿರತರಾಗಿದ್ದಾರೆ. ಮೂಲತಃ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನಲ್ಲಿ (ಎಬಿವಿಪಿ) ಟ್ರೇನಿಂಗ್ ಪಡೆದ ಪ್ರಗ್ಯಾ ಸಿಂಗ್ ಆನಂತರ ಅಭಿನವ ಭಾರತ್ ಸಂಘಟನೆ ಸೇರಿ ಈ ಹೊತ್ತು ಮಧ್ಯಪ್ರದೇಶದಾದ್ಯಂತ ಅದನ್ನು ವಿಸ್ತರಿಸಿದ್ದಾಳೆ. ಈಕೆ ಮಾಲೇಗಾಂವ್ ಸ್ಫೋಟ ಮಾತ್ರವಲ್ಲ, ಗುಜರಾತ್‌ನ ಮೊಡಸಾದಲ್ಲಿ ನಡೆದ ಸ್ಫೋಟದಲ್ಲೂ ಭಾಗಿಯಾಗಿದ್ದಾಳೆ ಎಂಬುದನ್ನು ಎಟಿಎಸ್ ತನಿಖೆ ಸ್ಪಷ್ಟಪಡಿಸುತ್ತದೆ. ಈಕೆಯ ಸಂಘಟನೆ ಅಭಿನವ ಭಾರತ್ ದೇಶದಾದ್ಯಂತ ಬಾಂಬ್ ಸ್ಫೋಟಗಳನ್ನು ನಡೆಸುವುದಕ್ಕಾಗಿ ಎಷ್ಟೆಷ್ಟು ದುಡ್ಡನ್ನು ಯಾರ್ಯಾರಿಗೆ ರವಾನಿಸಿದೆ ಎಂಬುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಅಭಿನವ ಭಾರತ್‌ನ ಖಜಾಂಚಿ ಹಾಗೂ ಪ್ರಸ್ತುತವಾಗಿ ಪೊಲೀಸರ ಬಂಧನದಲ್ಲಿರುವ ಅಜಯ್ ರಾಹಿರ್ಕರ್‌ನ ಬ್ಯಾಂಕ್ ಖಾತೆಯನ್ನು ಹಣ ರವಾನೆಗಾಗಿ ಬಳಸಿಕೊಳ್ಳಲಾಗಿದ್ದು ಈತ ಸ್ಫೋಟಕ ಮತ್ತು ಶಸ್ತ್ರಾಸ್ತ್ರ ಖರೀದಿಸುವುದಕ್ಕಾಗಿ, ತರಬೇತಿ ನಿಡುವುದಕ್ಕಾಗಿ ಬೇರೆ ಬೇರೆ ಜನರಿಗೆ ಹಣ ರವಾನಿಸಿದ್ದಾನೆ. ಈತನಿಂದ ಹಣ ಪಡೆದವರಲ್ಲಿ ಸಮೀರ್ ಕುಲಕರ್ಣಿ, ರಮೇಶ್ ಉಪಾಧ್ಯ, ರಾಕೇಶ್ ದಾವ್ಡೆ ಎಂಬ ಹಿಂದೂತ್ವವಾದಿಗಳೂ ಇದ್ದಾರೆ. ಇವರೆಲ್ಲರನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.


ಸಾಧ್ವಿ ಪ್ರಗ್ಯಾ ಸಿಂಗ್ ಅಭಿನವ ಭಾರತ್ ಸಂಘಟನೆಯ ಸಿದ್ಧಾಂತಿಯಾದರೆ ರಾಕೇಶ್ ದವ್ಡೆ ಶಸ್ತ್ರಾಸ್ತ್ರಗಳನ್ನು ಬಳಸುವುದರಲ್ಲಿ ಪರಿಣಿತನಾಗಿದ್ದಾನೆ. ಈತ ಪುಣೆಯಲ್ಲಿ ಭಜರಂಗದಳ, ಅಭಿನವ ಭಾರತ, ಎಬಿವಿಪಿ ಮುಂತಾದ ಸಂಘಪರಿವಾರದ ಸಂಘಟನೆಗಳ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಾನೆ.

ಪೊಲೀಸರು ಬಂಧಿಸಿರುವ ಇನ್ನೊಬ್ಬ ಪ್ರಮುಖ ಆರೋಪಿ ದಯಾನಂದ ಪಾಂಡೆ. ಮೂಲತಃ ಉತ್ತರ ಪ್ರದೇಶದವನಾದ ಈತ ಜಮ್ಮುವಿನ ಮಠವೊಂದರಲ್ಲಿ ಸ್ವಾಮಿಯಾಗಿದ್ದ. ವಿಚಾರಣೆ ನಡೆಸುತ್ತಿರುವ ಎಟಿಎಸ್ ಈತನನ್ನು ಮಂಪರು ಪರೀಕ್ಷೆಗೂ ಒಳಪಡಿಸಿದೆ. ಮಾಲೇಗಾಂವ್ ಮಾತ್ರವಲ್ಲ, ನಾಂದೇಡ್ ಮತ್ತು ಅಜ್ಮೀರ್‌ಗಳಲ್ಲಿ ನಡೆದ ಸ್ಫೋಟಗಳಲ್ಲಿಯೂ ಈತ ಭಾಗಿಯಾಗಿರುವುದು ದೃಢಪಟ್ಟಿದೆಯೆಂದು ಎಟಿಎಸ್ ಹೇಳಿದೆ. 2007ರಲ್ಲಿ ನಡೆದ ಅಜ್ಮೀರ್ ಸ್ಫೋಟದಲ್ಲಿ ಬಿಜೆಪಿಯ ಸಂಸದನೂ ಭಾಗಿಯಾಗಿರುವುದನ್ನು ಎಟಿಎಸ್ ಪತ್ತೆ ಮಾಡಿದೆ.

ಒಂದೆಡೆ ಹೊರಗಿನ ಶತ್ರುಗಳಿಂದ ದೇಶವನ್ನು ರಕ್ಷಿಸಬೇಕಿದ್ದ ಸೈನ್ಯ, ಇನ್ನೊಂದೆಡೆ ಕಾವಿಧಾರಿಗಳಾಗಿ ಮಠಗಳಲ್ಲಿ, ದೇವಸ್ಥಾನಗಳಲ್ಲಿ ಕುಳಿತಿರುವ ಸ್ವಾಮಿಗಳು, ಮತ್ತೊಂದೆಡೆ ಬಿಜೆಪಿಯ ರಾಜಕಾರಣಿಗಳು ಮತ್ತು ಸಂಘಪರಿವಾರದ ಶಿಖಾಮಣಿಗಳು – ಇವರೆಲ್ಲಾ ಸೇರಿಕೊಂಡು ಬಾಂಬ್ ಸ್ಫೋಟಿಸಿ ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗಿದ್ದಾರೆಂದರೆ ಈ ದೇಶಕ್ಕೆ ಕಾದಿರುವ ಅಪಾಯದ ಅರಿವಾಗುತ್ತದೆ. ಈಗಲೂ ಕಾಲಮಿಂಚಿಲ್ಲ, ಪ್ರಜ್ಞಾವಂತ ಜನತೆ ಈಗಲೇ ಎಚ್ಚೆತ್ತುಕೊಂಡರೆ ಮಾತ್ರ ಭರತಖಂಡ ಮಸಣಭೂಮಿಯಾಗುವುದನ್ನು ತಡೆಯಲು ಸಾಧ್ಯವಿದೆ. ■

ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟಿಸಿದ್ದೂ ಇವರೆ?

ಬಲಿಯಾದವರೂ ಹಿಂದೂಗಳೇ!



ಇತ್ತೀಚಿನ ವರದಿಗಳು ಇನ್ನಷ್ಟು ಆಘಾತಕಾರಿ ಸುದ್ದಿಗಳನ್ನು ಹೊರಗೆಡಹುತ್ತಿವೆ. ಮಾಲೇಗಾಂವ್, ನಾಂದೇಡ್, ಅಜ್ಮೀರ್, ಮೊಡಸಾ ಮುಂತಾದ ಕಡೆ ನಡೆದ ಬಾಂಬ್‌ದಾಳಿಗಳಲ್ಲಿ ಮಾತ್ರವಲ್ಲ ಭಾರತ-ಪಾಕ್‌ಗಳ ನಡುವೆ ಸ್ನೇಹ ಸೇತುವೆಯಾಗಿ ಪ್ರಾರಂಭವಾಗಿದ್ದ ಸಂಜೋತಾ ಎಕ್ಸ್‌ಪ್ರೆಸ್ ರೈಲು ಸ್ಫೋಟದಲ್ಲೂ ಸಂಘಪರಿವಾರದ ಹಿಂದೂತ್ವ ಸಂಘಟನೆಗಳ ಕೈವಾಡವಿರುವ ಆತಂಕಕಾರಿ ಸುದ್ದಿಗಳು ಹೊರಬರುತ್ತಿವೆ. ಸಂಜೋತಾ ಎಕ್ಸ್‌ಪ್ರೆಸ್ ರೈಲನ್ನು ಕಳೆದ ವರ್ಷ ಫೆಬ್ರುವರಿಯಲ್ಲಿ ಹರಿಯಾಣದಲ್ಲಿ ಸಂಘಪರಿವಾರದ ಹಿಂದೂತ್ವ ಸಂಘಟನೆಗಳೇ ಸ್ಫೋಟಗೊಳಿಸಿದ್ದವು ಎಂದೂ, ಸ್ಫೋಟಕ್ಕೆ ಬಳಸಲಾದ ಬಲಿಷ್ಠ ಆರ್‌ಡಿಎಕ್ಸ್ ಸ್ಫೋಟಕಗಳನ್ನು ಈಗ ಬಂಧನದಲ್ಲಿರುವ ಸೈನ್ಯಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್ ಒದಗಿಸಿದ್ದನೆಂದೂ, ಅವುಗಳನ್ನು ಆತ ಜಮ್ಮು-ಕಾಶ್ಮೀರದ ಭಾರತೀಯ ಸೈನ್ಯದ ಶಸ್ತ್ರಾಗಾರದಿಂದ ತಂದಿದ್ದನೆಂದೂ ಹೇಳಲಾಗುತ್ತಿದೆ. ಅಲ್ಲದೇ, ಸ್ಫೋಟ ನಡೆಸುವವರಿಗೆ ತರಬೇತಿಯನ್ನೂ ನೀಡಿದ್ದ ಎಂದೂ ಹೇಳಲಾಗುತ್ತಿದೆ. ಒಂದು ವೇಳೆ ಇದು ನಿಜವೇ ಆದರಲ್ಲಿ ಇದಕ್ಕಿಂತ ಆತಂಕಕಾರಿ ವಿಚಾರ ಮತ್ತೊಂದಿಲ್ಲ; ಇನ್ನು ಭಾರತ ಹಿಟ್ಲರ್ ನೇತೃತ್ವದ ಫ್ಯಾಸಿಸ್ಟ್ ಜರ್ಮನಿಯಾಗುವ ಕಾಲ ದೂರವಿಲ್ಲ.

ಕಳೆದ ವರ್ಷ ಫೆಬ್ರುವರಿ 17ರಂದು ಹರಿಯಾಣದಲ್ಲಿ ನಡೆದ ಸಂಜೋತಾ ಎಕ್ಸ್‌ಪ್ರೆಸ್ ರೈಲು ಸ್ಫೋಟದಲ್ಲಿ 68 ಜನರ ಸುಟ್ಟು ಕರಕಲಾಗಿದ್ದರು. ಲೆಕ್ಕವಿಲ್ಲದಷ್ಟು ಜನ ಕೈಕಾಲುಗಳನ್ನು ಕಳೆದುಕೊಂಡು ಅಂಗವಿಕಲರಾದರು. ಸ್ಫೋಟ ಸಂಭವಿಸುತ್ತಿದ್ದಂತೆಯೇ ಇದೇ ಸಂಘಪರಿವಾರ ಅದನ್ನು ಇಸ್ಲಾಮಿಕ್ ಟೆರರಿಸ್ಟುಗಳ ತಲೆಗೆ ಕಟ್ಟಿ ಭಾರೀ ಗದ್ದಲವೆಬ್ಬಿಸಿತು. ಈಗ ನೋಡಿದರೆ ಅದೇ ಸ್ಫೋಟದ ರೂವಾರಿ ಎಂಬುದು ಗೊತ್ತಾಗುತ್ತಿದೆ. ಮುಸ್ಲಿಮರ ವಿರುದ್ಧ ಬಹುಸಂಖ್ಯಾತ ಹಿಂದೂಗಳನ್ನು ಎತ್ತಿಕಟ್ಟಿ ಕೋಮುದಳ್ಳುರಿ ಹಚ್ಚುವುದಕ್ಕಾಗಿಯೇ ಸಂಘಪರಿವಾರ ಈ ಸ್ಫೋಟವನ್ನು ನಡೆಸಿರುವಂತೆ ಕಾಣುತ್ತದೆ.

ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲವೆಂಬಂತೆ ಸಂಘಪರಿವಾರ ಚೀರಾಟಕ್ಕಿಳಿದಿದೆ. ತನ್ನ ದೇಶಪ್ರೇಮಿ ಮುಖವಾಡ ಕಳಚಿ ದೇಶದ್ರೋಹದ ಅಸಲಿ ಮುಖ ದರ್ಶನವಾಗುತ್ತಿದ್ದಂತೆ ಹತಾಶೆಯಿಂದ ಹಾರಾಡುತ್ತಿದೆ. ಒಂದೆಡೆ ಸ್ಫೋಟಕ್ಕೂ ತಮಗೂ ಯಾವುದೇ ಸಂಬಂಧವಿಲ್ಲವೆಂದು ಅರಚಾಡುತ್ತಿದ್ದರೆ, ಇನ್ನೊಂದೆಡೆ ಪೊಲೀಸರಿನ್ನೂ ತನಿಖೆ ನಡೆಸುತ್ತಿರುವಾಗಲೇ, ನ್ಯಾಯಾಲಯವಿನ್ನೂ ವಿಚಾರಣೆ ಪ್ರಾರಂಭವಾಗುವ ಮೊದಲೇ ಬಹಿರಂಗವಾಗಿ ಬಂಧನದಲ್ಲಿರುವ ಆರೋಪಿಗಳು ನಿರಪರಾಧಿಗಳೆಂದು ತೀರ್ಪಿತ್ತು ಅವರ ಪರವಾಗಿ ಬೀದಿಗಿಳಿಯುತ್ತಿದೆ. ಇದು ಸಂಘಪರಿವಾರದ ಹಿಂದೂತ್ವ ಭಯೋತ್ಪಾದನೆಯನ್ನು ಮತ್ತಷ್ಟು ನಗ್ನಗೊಳಿಸುತ್ತದಷ್ಟೆ.

ಕರ್ನಾಟಕ ಪೊಲೀಸರೂ ಈ ನಿಟ್ಟಿನಲ್ಲಿ ತನಿಖೆ ನಡೆಸಲಿ




ಕರ್ನಾಟಕದಲ್ಲಿ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರ ವಿರುದ್ಧ ಬಹುಸಂಖ್ಯಾತ ಹಿಂದೂಗಳನ್ನು ಎತ್ತಿಕಟ್ಟುವುದಕ್ಕೆ, ಆ ಅಲ್ಪಸಂಖ್ಯಾತ ಸಮುದಾಯಗಳನ್ನು ಭಯೋತ್ಪಾದಕರಂತೆ ಚಿತ್ರಿಸಿ ಅವರ ಮೇಲೆ ದಾಳಿ ನಡೆಸುವುದಕ್ಕೆ ಕರ್ನಾಟಕದ ಸಂಘಪರಿವಾರಿಗಳು ಪ್ರಯತ್ನಿಸುವುದು ಮೇಲ್ನೋಟಕ್ಕೇ ಕಾಣುತ್ತದೆ. ಇದು ಕರ್ನಾಟಕದ ಪೊಲೀಸರಿಗೆ ತಿಳಿಯದಿರುವ ಸತ್ಯವೇನಲ್ಲ.

ಕೆಲವು ದಿನಗಳ ಹಿಂದೆ ಬೆಂಗಳೂರಿನ ಮಸೀದಿಗಳಲ್ಲಿ ಮುಸ್ಲಿಮರ ಶುಕ್ರವಾರದ ಪವಿತ್ರ ನಮಾಜ್ ದಿನದಂದೇ ಕೆಲವು ಹಂದಿ ತಲೆಗಳನ್ನು ಎಸೆಯಲಾಗಿತ್ತು. ಪೊಲೀಸರ ಮತ್ತು ಮುಸ್ಲಿಮರ ತಾಳ್ಮೆಯ ವರ್ತನೆಯಿಂದಾಗಿ ಬೆಂಗಳೂರು ಹೊತ್ತಿ ಉರಿಯುವುದು ತಪ್ಪಿತು. ಈ ಘಟನೆಯ ತನಿಖೆ ನಡೆಸಿದ ಬೆಂಗಳೂರು ಪೊಲೀಸರು ಮಸೀದಿಗಳಲ್ಲಿ ಹಂದಿ ತಲೆಗಳನ್ನು ಎಸೆದವರನ್ನು ಕೆಲವೇ ದಿನಗಳಲ್ಲಿ ಬಂಧಿಸಿದರು. ವಿಶೇಷವೇನೆಂದರೆ ಬಂಧಿತರೆಲ್ಲರೂ ಪ್ರಮೋದ್ ಮುತಾಲಿಕ್ ಎಂಬ ಹಿಂದೂತ್ವವಾದಿಯ ಸಹಚರರಾಗಿದ್ದರು.

ಈಗ ದೇಶದಾದ್ಯಂತ ನಡೆದಿರುವ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಹಿಂದೂತ್ವವಾದಿ ಸಂಘಪರಿವಾರಿಗಳು ಭಾಗಿಯಾಗಿರುವ ಸುದ್ದಿಗಳು ಬರುತ್ತಿವೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಹಾಗೂ ಕೆಲವು ತಿಂಗಳುಗಳ ಹಿಂದೆ ಹುಬ್ಬಳ್ಳಿಯ ಕೋರ್ಟ್ ಆವರಣದಲ್ಲಿ ನಡೆದ ಬಾಂಬ್ ಸ್ಫೋಟಗಳಲ್ಲಿ ಭಜರಂಗಿಗಳ ಪಾತ್ರವೆಷ್ಟಿದೆ ಎಂಬ ನಿಟ್ಟಿನಿಂದಲೂ ಕರ್ನಾಟಕದ ಪೊಲೀಸರು ತನಿಖೆ ನಡೆಸಬೇಕು. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ ಎಂಬ ಒಂದೇ ಕಾರಣಕ್ಕೆ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸದಿದ್ದರೆ ಮುಂಬರುವ ಹಿಂದೂತ್ವ ಭಯೋತ್ಪಾದನೆಯ ಕರಾಳ ದಿನಗಳಿಗೆ ಅವರು ಹೊಣೆಗಾರರಾದಂತಾಗುತ್ತದೆ.

ಭಯೋತ್ಪಾದಕರ ನೆರವಿಗೆ ಖುದ್ದು ಸಂಘಪರಿವಾರ!



ದೇಶದಲ್ಲಿ ಎಲ್ಲೇ ಬಾಂಬ್ ಸ್ಫೋಟವಾಗಲಿ ಮೊದಲು ಬೀದಿಗಿಳಿದು ಪ್ರತಿಭಟಿಸುತ್ತಿದ್ದವರು ಸಂಘಪರಿವಾರಿಗಳು. ಪೊಲೀಸರು ತನಿಖೆ ನಡೆಸುವ ಮೊದಲು, ನ್ಯಾಯಾಲಯ ವಿಚಾರಣೆ ನಡೆಸುವ ಮೊದಲು ಸಂಘಪರಿವಾರಿಗಳು ಅದನ್ನು ಮುಸ್ಲಿಮರೇ ಮಾಡಿದ್ದಾರೆಂದು ತೀರ್ಪು ನೀಡುತ್ತಿದ್ದರು; ಅವರ ವಿರುದ್ಧ ಪ್ರತಿಭಟನೆ ನಡೆಸಿ ದೇಶಭಕ್ತರೆಂದು ಪೋಜು ಕೊಡುತ್ತಿದ್ದರು.

ಈಗ ದೇಶದಾದ್ಯಂತ ನಡೆದ ಬಾಂಬ್ ಸ್ಫೋಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾಧ್ವಿ ಪ್ರಗ್ಯಾ ಸಿಂಗ್ ಮತ್ತು ದಯಾನಂದ ಪಾಂಡೆಯವರನ್ನು ಮಹಾರಾಷ್ಟ್ರದ ಭಯೋತ್ಪಾದಕ ನಿಗ್ರಹ ದಳ ಬಂಧಿಸಿ ತನಿಖೆ ನಡೆಸುತ್ತಿದೆ. ಈಗಲೂ ಈ ಸಂಘಪರಿವಾರಿಗಳು ಬೀದಿಗಿಳಿದಿದ್ದಾರೆ. ಈ ಬಾರಿ ಅವರು ಬೀದಿಗಿಳಿದಿರುವುದು ಭಯೋತ್ಪಾದಕರ ವಿರುದ್ಧವಲ್ಲ, ಪರವಾಗಿ! ಇದೊಂದು ಪಿತೂರಿ ಎಂದು ಆಪಾದಿಸುತ್ತಾ ಬಾಂಬ್ ಸ್ಫೋಟದ ಆರೋಪಿಗಳ ಪರವಾಗಿ ದೇಶದಾದ್ಯಂತ ಚಳವಳಿ ಆರಂಭಿಸುವುದಕ್ಕೆ ವಿಶ್ವ ಹಿಂದೂ ಪರಿಷತ್ತು ನಿರ್ಧರಿಸಿದೆ. ಬಿಜೆಪಿಯಂತೂ ಇದಕ್ಕೂ ಮೊದಲೇ ಈಗಾಗಲೇ ಬೀದಿಗಿಳಿದುಬಿಟ್ಟಿದೆ. ಚುನಾವಣೆಗಳು ಸನ್ನಿಹಿತವಾಗುತ್ತಿರುವ ಈ ಸಮಯದಲ್ಲಿ ಅದು ಹೇಗಾದರೂ ಮಾಡಿ ಸ್ಫೋಟದ ಕಳಂಕದಿಂದ ಹೊರಬರುವುದಕ್ಕೆ ಪ್ರಯತ್ನಿಸುತ್ತಿದೆ.

ಯಾವ ಅಪರಾಧವನ್ನು ಯಾರು ಮಾಡಿದ್ದಾರೆ ಎಂಬುದು ತನಿಖೆ ನಡೆಸದೇ, ವಿಚಾರಣೆ ನಡೆಸದೇ ಸಂಘಪರಿವಾರಕ್ಕೆ ಗೊತ್ತಾಗುತ್ತದೆ ಎನ್ನುವುದಾದರೆ, ಆದರ ಶಿಖಾಮಣಿಗಳಿಗೆ ಅಂತಹ ದಿವ್ಯಶಕ್ತಿಯಿದೆ ಎನ್ನುವುದಾದರೆ ಪೊಲೀಸು, ಕೋರ್ಟುಗಳು ಯಾಕೆ ಬೇಕು? ■


ಕಾಂಗ್ರೆಸ್‌ಗೆ ಗಡಸುತನವಿದೆಯೆ?

ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಒಂದಿಷ್ಟು ಗಡುಸುತನವನ್ನು ಪ್ರದರ್ಶಿಸಿದ್ದರೆ ಹಿಂದೂತ್ವ ಭಯೋತ್ಪಾದಕರನ್ನು ಸಿಗಿಹಾಕುವುದು ಕಷ್ಟವೇನಾಗುತ್ತಿರಲಿಲ್ಲ. ಈ ಹಿಂದೆ ನಾಂದೇಡ್ [illegible] ಬಾಂಬ್ ಸ್ಫೋಟವಾದಾಗ ಮಹಾರಾಷ್ಟ್ರದ ಭಯೋತ್ಪಾದಕ ನಿಗ್ರಹ ದಳ ಆರೋಪಿಗಳನ್ನು ಬಂಧಿಸಿತ್ತಲ್ಲದೆ, ಅವರ ಆರೋಪ [illegible] ಸಾಬೀತುಪಡಿಸಲು ಅಗತ್ಯವಿರುವ ಎಲ್ಲಾ ದಾಖಲೆಗಳನ್ನು [illegible] ಬಲವಾದ ಚಾರ್ಜ್‌ಶೀಟ್ ಹಾಕಿತ್ತು. ಬಂಧಿತರೆಲ್ಲರೂ ಸಂಘಪರಿವಾರದ ಸದಸ್ಯರುಗಳೇ ಆಗಿದ್ದರು. ಭೋನ್ಸಾಲಾ ಮಿಲಿಟರಿ ಶಾಲೆಯಲ್ಲಿ ತರಬೇತಿ ಪಡೆದದ್ದು, ಅದರಲ್ಲಿ ಹಾಲಿ ಹಾಗೂ ಮಾಜಿ ಸೈನ್ಯಾಧಿಕಾರಿಗಳು ಭಾಗವಹಿಸಿದ್ದು - ಹೀಗೆ ಎಲ್ಲವನ್ನೂ [illegible] 2006ರಲ್ಲಿ [illegible]

[illegible]

[illegible] ■

...ನ್ಯದೊಳಗೆ ...ಸಂಘಪರಿವಾರದ ...ಭಾವ



...ಬಲಿಷ್ಠ ಭಾರತದ ಸೈನ್ಯದೊಳಗೆ ನುಸುಳ ...ಕೆಂಬುದು ಸಂಘಪರಿವಾರ ಮೊದಲಿನಿಂದಲೂ ...ಮಾಡುತ್ತಿರುವ ಪ್ರಯತ್ನ. ಈ ನಿಟ್ಟಿನಲ್ಲಿ ಅದು ...ಹಳಷ್ಟು ಯಶಸ್ವಿಯೂ ಆಗಿದೆ. ಒಂದು ...ದಾಹರಣೆಯನ್ನೇ ನೋಡಿ. 1999ರಲ್ಲಿ ವಿಶ್ವಹಿಂದೂ ...ಪರಿಷತ್ತಿನ ನಾಯಕ ಆಚಾರ್ಯ ಗಿರಿರಾಜ ಕಿಶೋರ್ ...ದೆಹಲಿಯ ಭಾರತೀಯ ಸೇನಾ ಆಸ್ಪತ್ರೆಗೆ ಭೇಟಿ ...ಕೊಟ್ಟಿದ್ದರು. ಸೈನ್ಯದ ಪ್ರತಿಷ್ಠಿತ ಪರಮವೀರ ಚಕ್ರ ...ಪ್ರಶಸ್ತಿ ವಿಜೇತ ಯೋಗೇಂದ್ರ ಯಾದವ್ ...ಎಂಬುವವರಿಗೆ ಗಿರಿರಾಜ್ ಕಿಶೋರ್ ಅವರ ಪಾದ ...ಗೆ ನಮಸ್ಕರಿಸಿ ಆಶೀರ್ವಾದ ಪಡೆಯುವಂತೆ ...ಪ್ರಾಯಿಸಲಾಯಿತು.

ಇನ್ನೊಂದು ಉದಾಹರಣೆ ನೋಡಿ. ಕೇಂದ್ರದಲ್ಲಿ ...ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿ ...ದ್ದಾಗಲೇ ಕಾರ್ಗಿಲ್ ಯುದ್ಧ ನಡೆಯಿತು. ಯುದ್ಧದಲ್ಲಿ ...ಭಾರತೀಯ ರಕ್ಷಣಾ ಪಡೆಗಳು ನಡೆಸುತ್ತಿದ್ದ ಮಿಲಿಟರಿ ...ಕಾರ್ಯಾಚರಣೆಗಳ ಬಗ್ಗೆ, ಯುದ್ಧದಲ್ಲಿ ಭಾರತೀಯ ...ಸೇನೆ ಸಾಧಿಸಿದ ಪ್ರಗತಿಯ ಬಗ್ಗೆ ಸಂಸದರಿಗೆ ...ವಿವರಿಸುವಂತೆ ಆಗಿನ ಮಿಲಿಟರಿ ವ್ಯವಹಾರಗಳ ಡೈರೆಕ್ಟರ್ ...ಜನರಲ್ ಆಗಿದ್ದ ಲೆಫ್ಟಿನೆಂಟ್ ಜನರಲ್ ಎನ್.ಸಿ.ವಿಜ್ ...ಅವರಿಗೆ ಕೇಂದ್ರ ರಕ್ಷಣಾ ಸಚಿವಾಲಯ ಆದೇಶ ಕೊಟ್ಟಿತು. ...ಲೆಫ್ಟಿನೆಂಟ್ ಜನರಲ್ ವಿಜ್ ಅವರು ನೌಕಾಪಡೆ ಮತ್ತು ...ವಾಯುಪಡೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿ ...ವಿವರವಾದ ವರದಿಯನ್ನು ತಯಾರಿಸಿದರು. ಅದನ್ನು ...ಮಂಡಿಸುವುದಕ್ಕಾಗಿ ಕೇಂದ್ರ ದೆಹಲಿಯ ಅಶೋಕ ರಸ್ತೆಯಲ್ಲಿರುವ ಕಚೇರಿ ಯೊಂದಕ್ಕೆ ಹೋದಾಗ ಅವರಿಗೆ ಅಚ್ಚರಿ ಕಾದಿತ್ತು. ಏಕೆಂದರೆ ಅದು ಸರ್ಕಾರಿ ಕಚೇರಿಯಾಗಿರಲಿಲ್ಲ, ಬಿಜೆಪಿ ಪಕ್ಷದ ಕಚೇರಿಯಾಗಿತ್ತು. ಮಿಲಿಟರಿ ಕಾರ್ಯಾಚರಣೆಯ ವಿವರಗಳನ್ನು ಕೇಳಿಸಿಕೊಳ್ಳಲು ಬಂದಿದ್ದವರು ಎಲ್ಲಾ ಪಕ್ಷದ ಸಂಸದರಾಗಿರಲಿಲ್ಲ, ಕೇವಲ ಬಿಜೆಪಿ ಸಂಸದರಾಗಿದ್ದರು! ಸೈನ್ಯಾಧಿಕಾರಿಗಳು ಬೇರೆ ವಿಧಿಯಿಲ್ಲದೇ ಯುದ್ಧದಲ್ಲಿ ಭಾರತೀಯ ರಕ್ಷಣಾ ಪಡೆಗಳು ಸಾಧಿಸಿರುವ ಪ್ರಗತಿಯ ವರದಿಯನ್ನು ಮಂಡಿಸಿ ಬಂದರು. ಸ್ವತಂತ್ರ ಭಾರತದ ಚರಿತ್ರೆಯಲ್ಲಿಯೇ ರಾಜಕೀಯ ಪಕ್ಷವೊಂದು ಮುನ್ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಯ ವಿವರಗಳನ್ನು ಖಾಸಗಿಯಾಗಿ ಪಡೆದದ್ದು ಪ್ರಾಯಶಃ ಇದೇ ಮೊದಲಿರಬೇಕು.

ಅದೇ ವರ್ಷದಲ್ಲಿ ಭಾರತೀಯ ಸೇನೆಯ 3ನೇ ಡಿವಿಷನ್ ಅನ್ನು ವಿಶ್ವಹಿಂದೂ ಪರಿಷತ್‌ನ ನೇತೃತ್ವದಲ್ಲಿ ನಡೆಯುತ್ತಿದ್ದ ಸಿಂಧು ಯಾತ್ರೆಗೆ ರಕ್ಷಣೆ ಕೊಡುವುದಕ್ಕಾಗಿ ಬಳಸಿಕೊಳ್ಳಲಾಯಿತು.

ಹೀಗೆ ಸಂಘಪರಿವಾರ ಮತ್ತು ಬಿಜೆಪಿ ತನ್ನ ಸ್ವಂತಕ್ಕಾಗಿ ಭಾರತೀಯ ಸಶಸ್ತ್ರ ಪಡೆಗಳನ್ನು ಬಳಸಿಕೊಂಡ ಅದೆಷ್ಟೋ ಉದಾಹರಣೆಗಳನ್ನು ಕೊಡಬಹುದು.

...ಮಂಪರು ಪರೀಕ್ಷೆ ಸರಿಯೆ?

ಮಂಪರು ಪರೀಕ್ಷೆಗಾಗಲೀ, ಬ್ರೇನ್ ಮ್ಯಾಪಿಂಗ್‌ಗೆ ಆಗಲೀ ಅಥವಾ ಸುಳ್ಳು ಪತ್ತೆ ವಿಧಾನಕ್ಕಾಗಲೀ ...ಯಾವುದೇ ವೈಜ್ಞಾನಿಕ ತಳಹದಿ ಇಲ್ಲ. ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಮೊದಮೊದಲು ಈ ಮಂಪರು ...ಪರೀಕ್ಷೆಯನ್ನು ಬಳಸಲಾಯಿತಾದರೂ ನಂತರದ ದಿನಗಳಲ್ಲಿ ಅದು ಟಾರ್ಚರ್‌ನ (ಚಿತ್ರಹಿಂಸೆಯ) ಆಧುನಿಕ ಮತ್ತು ...ಕ್ರೂರ ರೂಪ ಎಂಬುದನ್ನು, ಅದಕ್ಕೆ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ ಎಂಬುದನ್ನು, ಈ ಪರೀಕ್ಷೆಯಿಂದ ...ಹೊರಬರುಕೊಳ್ಳುವ ಅಂಶಗಳು ನಂಬಲರ್ಹವಲ್ಲ ಎಂಬುದನ್ನು ಒಪ್ಪಿಕೊಂಡು ತಮ್ಮ ತಮ್ಮ ದೇಶಗಳಲ್ಲಿ ಇವುಗಳನ್ನು ...ನಿಷೇಧಿಸಿವೆ. ಆದರೂ ಭಾರತದಲ್ಲಿ ಮಾತ್ರ ಅದನ್ನು ಯಥೇಚ್ಛವಾಗಿ ಬಳಸಲಾಗುತ್ತಿದೆ.

ದೇಶದ ವಿವಿಧ ಭಾಗಗಳಲ್ಲಿ ನಡೆದಿರುವ ಬಾಂಬ್ ಸ್ಫೋಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಂಧಿಸಲಾದ ...ಪ್ರಮುಖ ಆರೋಪಿಗಳಾದ ಸಾಧ್ವಿ ಪ್ರಗ್ಯಾ ಸಿಂಗ್, ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್, ಸ್ವಾಮಿ ...ದಯಾನಂದ ಪಾಂಡೆ ಮುಂತಾದವರನ್ನು ಮಂಪರು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದು ಸಮರ್ಥನೀಯವಲ್ಲ. ...ಪೊಲೀಸರು ಅಪರಾಧವೊಂದರ ಮರ್ಮವನ್ನು ಭೇದಿಸುವುದಕ್ಕೆ ಹಲವಾರು ದಿಕ್ಕಿನಿಂದ ತನಿಖೆ ನಡೆಸುವ ...ಕಷ್ಟವನ್ನು ತೆಗೆದುಕೊಳ್ಳಬೇಕೆ ವಿನಃ ಮಂಪರು ಪರೀಕ್ಷೆ ಎಂಬ ಒಳದಾರಿಯನ್ನು ಕಂಡುಕೊಳ್ಳುವುದು ಸರಿಯಲ್ಲ.

...ಮಗಿದು ಗೊತ್ತೆ?



...ದೇಶದಲ್ಲಿ ಎಷ್ಟು ರಾಜಕೀಯ ...ಗಳಿವೆ ಎಂಬುದು ನಿಮಗೆ ಚೆನ್ನಾಗಿ ಗೊತ್ತಿರ ...ಬಹುದು. ಅವುಗಳಲ್ಲಿ ಎಷ್ಟು ರಾಷ್ಟ್ರ ಮಟ್ಟದ ...ರಾಜಕೀಯ ಪಕ್ಷಗಳು, ಎಷ್ಟು ಸ್ಥಳೀಯ ...ಪಕ್ಷಗಳು ಎಂಬುದೂ ಗೊತ್ತಿರಬಹುದು. ...ಪ್ರತಿಯೊಂದು ರಾಜಕೀಯ ಪಕ್ಷವೂ ವಿದ್ಯಾರ್ಥಿ ...ಗಳ ನಡುವೆ, ಕಾರ್ಮಿಕರ ನಡುವೆ, ರೈತರ ...ನಡುವೆ ಇನ್ನಿತ್ಯಾದಿ ಜನಸ್ತರಗಳ ನಡುವೆ ...ಕಾರ್ಯನಿರ್ವಹಿಸುವುದಕ್ಕಾಗಿ ತನ್ನದೇ ಆದ ...ontal Organisationಗಳನ್ನು ಹೊಂದಿವೆ ...ಎಂಬುದೂ ಗೊತ್ತಿರಬಹುದು. ಅಷ್ಟೇ ಏಕೆ, ಯಾವ ...ದ ಪಕ್ಷಗಳು ತಮ್ಮದೇ ಆದ ಮುಖಪತ್ರಿಕೆಗಳನ್ನು ...ಹೊರತರುತ್ತಿವೆ ಎಂಬ ವಿಚಾರವೂ ತಿಳಿದಿರಬಹುದು.

ಆದರೆ, ಬಹಳ ಜನಕ್ಕೆ ಗೊತ್ತಿಲ್ಲದ ವಿಚಾರವೇನೆಂದರೆ ...ಮಿಲಿಟರಿ ವ್ಯವಹಾರಗಳ ಬಗ್ಗೆ ತನ್ನದೇ ಆದ Defence ...ll ಎಂಬ ಪ್ರತ್ಯೇಕ ವಿಭಾಗವನ್ನು ಹೊಂದಿರುವ ...ಕ ಪಕ್ಷ ಎಂದರೆ ಬಿಜೆಪಿ!

ಸಂಘಪರಿವಾರದ ಸಹಭಾಗಿ ಸಂಘಟನೆಗಳಲ್ಲಿ ...ಕಾರ್ಯನಿರ್ವಹಿಸಿ ಹಿಂದೂತ್ವದ ಸಿದ್ಧಾಂತವನ್ನು ತಲೆಗಿಳಿಸಿ ...ಕೊಂಡ ಹಾರ್ಡ್‌ಕೋರ್‌ಗಳನ್ನು ಮಿಲಿಟರಿಯಲ್ಲಿ ...ತುಂಬಿಸುವ ಮೂಲಕ ಇಡೀ ಸಶಸ್ತ್ರ ಪಡೆಗಳ ಮೇಲೆ ...ಹಿಡಿತ ಸಾಧಿಸುವುದು ಸಂಘಪರಿವಾರದ ಒಂದು ...strategy. ಈ ಹಾರ್ಡ್‌ಕೋರ್‌ಗಳು ನಿವೃತ್ತಿಯಾದ ...ಮೇಲೆ ಅವರನ್ನು ಬಿಜೆಪಿಯು ಈ ಡಿಫೆನ್ಸ್ ಸೆಲ್‌ಗೆ ...ಸೇರಿಸಿಕೊಳ್ಳುವುದು ಅದರ ಇನ್ನೊಂದು strategy. ...ಈ ಹಾರ್ಡ್‌ಕೋರ್‌ಗಳೇ ಸಂಘಪರಿವಾರದ ಕಾರ್ಯ ...ಕರ್ತರಿಗೆ ಬಾಂಬ್ ತಯಾರಿಸುವುದನ್ನು, ಶಸ್ತ್ರಾಸ್ತ್ರ ಉಪಯೋಗಿಸುವುದನ್ನು ಟ್ರೇನಿಂಗ್ ಕೊಡುತ್ತಾರೆ. ಅಷ್ಟೇ ಅಲ್ಲದೇ, ಭಾರತೀಯ ಸಶಸ್ತ್ರ ಪಡೆಗಳ (ಅದು ಭೂಸೇನೆಯಿರಲಿ, ವಾಯುಪಡೆಯಿರಲಿ ಅಥವ ನೌಕಾ ಪಡೆಯಿರಲಿ) ರಹಸ್ಯವನ್ನು ಬಿಜೆಪಿ ಮತ್ತು ಸಂಘಪರಿವಾರದ ಸಂಘಟನೆಗಳಿಗೆ ರವಾನಿಸುತ್ತಾರೆ. ಇದಕ್ಕಿಂತ ಅಪಾಯ ಮತ್ತೊಂದಿದೆಯೆ? ಜಾತ್ಯತೀತತೆಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ ಭಾರತದ ರಾಷ್ಟ್ರೀಯ ಸೈನ್ಯ ಮುಂದೊಂದು ದಿನ ಬಿಜೆಪಿಯ ಪಕ್ಷದ, ಸಂಘಪರಿವಾರದ ಕೋಮುವಾದಿ ಸೈನ್ಯವಾಗಿ ಮಾರ್ಪಟ್ಟರೆ ಈ ದೇಶ ಮಸಣಭೂಮಿಯಾಗುವುದನ್ನು ಯಾರಿಂದ ತಡೆಯಲಾದೀತು?

ಲೆಫ್ಟಿನೆಂಟ್ ಜನರಲ್ ಕೆ.ಪಿ.ಕ್ಯಾಂಡೆತ್, ಲೆಫ್ಟಿನೆಂಟ್ ಜನರಲ್ ಜೆ.ಎಫ್.ಆರ್.ಜಾಕೋಬ್, ಲೆಫ್ಟಿನೆಂಟ್ ಜನರಲ್ ಎಸ್.ಎಸ್.ಮಲಿಕ್, ಬ್ರಿಗೇಡಿಯರ್ ಆರ್.ಬಿ. ಶರ್ಮ, ಗ್ರೂಪ್ ಕ್ಯಾಪ್ಟನ್ ವಿಜಯ್ ವೀರ್ ಮುಂತಾದ ಉನ್ನತ ಮಟ್ಟದ ನಿವೃತ್ತ ಸೈನ್ಯಾಧಿಕಾರಿಗಳು ಬಿಜೆಪಿ ಡಿಫೆನ್ಸ್ ಸೆಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ■

ಉತ್ತಮ ಮನುಷ್ಯನ ಸೃಷ್ಟಿಯೇ ಇಂದಿನ ತುರ್ತು

[illegible]

ಕನ್ನಡ ಸಾಹಿತ್ಯದಲ್ಲಿ ಇಂದು ಹುಲುಸಾಗಿ ಬರುತ್ತಿರುವ ಸಾಹಿತ್ಯ ಬೆಳೆಯ ನೆಲೆಗಳು ಮತ್ತು ದಿಕ್ಕೇನು? ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದೊಂದಿಗೆ ಹೊಸ ತಲೆಮಾರು ಹೇಗೆ ಮುಖಾಮುಖಿಯಾಗುತ್ತಿದೆ? ಇಂದು ಹೊಸ ತಲೆಮಾರು ವಿವಿಧ ಪ್ರಕಾರಗಳಲ್ಲಿ ಮಾಡುತ್ತಿರುವ ಕೃಷಿಯಲ್ಲಿ ಎದುರಿಸುತ್ತಿರುವ ಸವಾಲೇನು? ಮತ್ತು ಅದರ ಜೊತೆಗೆ ಮಾಡಿಕೊಂಡಿರುವ ಅನುಸಂಧಾನಗಳೇನು? ಎಲ್ಲಕ್ಕಿಂತ ಹೆಚ್ಚಾಗಿ ಹೊಸ ತಲೆಮಾರು ಆತುಕೊಳ್ಳುತ್ತಿರುವ ಸಮಾಜ ದರ್ಶನ ಮತ್ತು ಜೀವನ ದರ್ಶನಗಳೇನು?



ಕನ್ನಡ ಸಾಹಿತ್ಯದ ಈ ಮಹತ್ವದ ಪ್ರಶ್ನೆಗಳ ಬಗ್ಗೆ ನವೆಂಬರ್ 7 ಮತ್ತು 8ರಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಕ್ರೈಸ್ಟ್ ಯೂನಿವರ್ಸಿಟಿ ಮತ್ತು ಕ್ರೈಸ್ತ ಪದವಿ ಪೂರ್ವ ಕಾಲೇಜುಗಳು ಎರಡು ದಿನಗಳ ವಿಚಾರ ಸಂಕಿರಣ/ಕಮ್ಮಟವನ್ನು ಏರ್ಪಡಿಸಿದ್ದವು. ಇಂಥ ಒಂದು ಕಮ್ಮಟವು ಅದೇ ಕಾಲೇಜಿನ ಪ್ರೊಫೆಸರ್ ಆಗಿದ್ದ ಮತ್ತು ತಾನು ಎಲೆಮರೆಯ ಕಾಯಿಯಾಗಿಯೇ ಉಳಿದುಕೊಂಡು ಈ ತಲೆಮಾರಿನ ಹಲವಾರು ಪ್ರತಿಭೆಗಳನ್ನು ಬೆಳಕಿಗೆ ತಂದ ಪ್ರೊ. ಶ್ರೀನಿವಾಸರಾಜು ಹೆಸರಲ್ಲಿ ನಡೆದದ್ದು ಅರ್ಥ ಪೂರ್ಣವಾಗಿತ್ತು.

ತಮ್ಮ ಉದ್ಘಾಟನಾ ಭಾಷಣದ ಮೂಲಕ ಸಂಕಿರಣಕ್ಕೆ ಚಾಲನೆ ಕೊಟ್ಟ ಕನ್ನಡದ ಹಿರಿಯ ಸಾಹಿತಿ ಮತ್ತು ಮಾಗಿದ ಮನವಾದ ಪ್ರೊ.ಕಿ.ರಂ.ನಾಗರಾಜ ಅವರು ಇಂದಿನ ತಲೆಮಾರು ಹಲವು ಬಗೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಸಹನೆಗಳ ಮಧ್ಯೆ ತನ್ನ ಕೃಷಿಯನ್ನು ನಡೆಸಬೇಕಿದೆ. ಬರೆಯಬೇಕಾದ ತುರ್ತುಗಳು ಬದಲಾಗುತ್ತಿವೆ ಎಂದರು. "ಸಾಹಿತ್ಯದ ರೂಪಕಗಳು ಜನಸಮುದಾಯದಿಂದ ನಿರ್ಮಿತಗೊಂಡವೇ ವಿನಃ ವ್ಯಕ್ತಿ ನಿರ್ಮಿತವಲ್ಲ, ಹಾಗಿಲ್ಲದಿದ್ದಾಗ ಅದು ಭೈರಪ್ಪನವರ ಕೃತಿಯಾಗಿಬಿಡುತ್ತದೆ" ಎಂದು ಅಭಿಪ್ರಾಯಪಟ್ಟರು. ಇಂದು ಯಾರು ಶ್ರೇಷ್ಠ ಸಾಹಿತಿ ಎಂಬ ಕಾಲ ಹೋಯಿತು. ಈಗ ಸಮುದಾಯವನ್ನು ಒಳಗೊಳ್ಳಬೇಕಾದ ಲೇಖಕ ವರ್ಗ ಬರಬೇಕಿದೆ ಎಂದು ಕರೆ ನೀಡಿದರು. ಅಲ್ಲದೆ ಇಂದಿನ ತಲೆಮಾರು ಭಾಷಾ ಸೂಕ್ಷ್ಮತೆ ಇಲ್ಲದ ಒಂದು ರೂಪಕ ಮತ್ತು ಸಾಂಕೇತಿಕ ಶಕ್ತಿಯನ್ನು ಕಳೆದುಕೊಂಡ ಮೆಕನೈಸ್ಡ್ ಕನ್ನಡ ಬಳಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು.



ರಹಮತ್ ತರೀಕೆರೆ

ಕನ್ನಡ ಸಾಹಿತ್ಯದ ಹಳೆಯ ಚರ್ಚೆಗಳೇ ಆದ ಸಾಹಿತ್ಯದಲ್ಲಿ ಬದ್ಧತೆ ಮತ್ತು ಮುಕ್ತತೆ, ಸಾಮಾಜಿಕ ಕ್ರಿಯಾಶೀಲತೆ ಮತ್ತು ಸಾಹಿತ್ಯಿಕ ಸೃಜನಶೀಲತೆ, ಸಾಹಿತಿಯ ಜೀವನ ಮೌಲ್ಯ ಮತ್ತು ಸಾಹಿತಿಯ ಕೃತಿಯ ಜೀವನ ಮೌಲ್ಯ ಈ ಎಲ್ಲಾ ಪ್ರಶ್ನೆಗಳನ್ನು ಹೊಸ ತಲೆಮಾರಿನ ಈ ಸಾಹಿತಿಗಳು ಎದುರುಗೊಂಡ ರೀತಿ ಅನನ್ಯವಾಗಿತ್ತು. ಉದಾಹರಣೆಗೆ ಕವಿ ರಂಗನಾಥ್ ಸಮಕಾಲೀನ ಸಾಂಸ್ಕೃತಿಕ ಸವಾಲುಗಳು ಎಂಬ ಪ್ರಶ್ನೆಯನ್ನು ನಿಭಾಯಿಸುತ್ತಾ ಈ ಸಮಕಾಲೀನ ಎನ್ನುವುದು ಕೇವಲ ವಯಸ್ಸಿನ ಅಂತರಕ್ಕೆ ಮಾತ್ರ ಸೀಮಿತಗೊಳಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಕೇಳಿದರೆ, ಹೊಸ ತಲೆಮಾರಿನ ಸಂಶೋಧನೆಯ ಬಗ್ಗೆ ಕೆಲವು ಭಿನ್ನಮತಗಳನ್ನು ದಾಖಲಿಸಿದ ಡಾ.ಬಿ.ಎಂ.ಪುಟ್ಟಯ್ಯನವರು ಸಾಹಿತ್ಯವನ್ನು ಮೌಲ್ಯಗಳ ನೆಲೆಯಲ್ಲಿ ಪ್ರಶ್ನೆಯನ್ನು ಕೇಳಿಕೊಳ್ಳದೆ ಹೊಸ ಮತ್ತು ಹಳೆ ಎಂಬ ಕಾಲಮಾನವನ್ನು ಪ್ರಶ್ನೆಯಾಗಿಸಿಕೊಳ್ಳುವ ಔಚಿತ್ಯವನ್ನು ಪ್ರಶ್ನಿಸಿದರು. ಸಂಶೋಧನೆಗೆ ಮೂಲ ಆಕರವಾದ ಮಾಹಿತಿ ಪೂರೈಕೆಯೇ ಸೈದ್ಧಾಂತಿಕ ನಿಯಂತ್ರಣಕ್ಕೆ ಒಳಪಟ್ಟಿರುವಾಗ ಅದನ್ನು ಆಧಾರಿಸಿದ ಸಂಶೋಧನೆ ಹೇಗೆ ಸತ್ಯವಾಗುತ್ತದೆ ಎಂಬ ಮಹತ್ವದ ಪ್ರಶ್ನೆಯನ್ನು ಎತ್ತಿದರು.

ಹೊಸಕಾವ್ಯದಲ್ಲಿ ಹೊರಗಣ ಎಂಬ ಸಮಾಜ ಒಳಗಾಗುತ್ತಿರುವ ಬಗೆಯನ್ನು ವಿಶ್ಲೇಷಿಸಿದ ಯುವಕವಿ ಪೀರ್ ಭಾಷಾ ಇಂದಿನ ಸಾಮಾಜಿಕ ಸಂದರ್ಭವು ನವೋದಯ ಪೂರ್ವದ ಸಾಮಾಜಿಕ ಸಂದರ್ಭದೊಡನೆ ಸಾಮ್ಯತೆಯನ್ನು ಹೊಂದಿದೆ ಎಂದರು. ಕವಿಗಳ ಸರಾಸರಿ ಗ್ರಹಿಕೆ "ಉದಾರವಾದಿ ಮಾನವತಾವಾದ"ಕ್ಕೆ ಬದ್ಧವಾಗಿದೆ. ಇಂದಿನ ತುರ್ತು ಅದಕ್ಕಿಂತ ಹೆಚ್ಚಿನದನ್ನು ಬೇಡುತ್ತಿದ್ದರೂ ಅದರ ಸೀಮಿತತೆಯಲ್ಲಿ ಕನ್ನಡದ ಯುವಕವಿಗಳು ಗಟ್ಟಿ ಕಾವ್ಯವನ್ನು ಸೃಷ್ಟಿಸುತ್ತಿದ್ದಾರೆ ಎಂದು ಉದಾಹರಣೆಗಳ ಸಮೇತ ಸಾಬೀತುಪಡಿಸಿದರೆ ಕವಿ ಎಸ್.ಕೆ.ಹನುಮಂತಯ್ಯ ಈ ತಲೆಮಾರಿನ ಕವಿ ಕಾಯ ಮತ್ತು ಕಾವ್ಯ ವಿಭಜನೆಗೊಂಡಿರುವ ಸಂಕಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾನೆ ಎನ್ನುತ್ತಲೇ "ಕವಿ ಕುಲವಿರೋಧಿ ಪ್ರಜ್ಞೆಯಿಂದ ಕುಲದೊಳಗಿನ ಶತ್ರುವನ್ನು ಭಗ್ನ ಮಾಡಬೇಕು. ಆದರೆ ನಿರ್ನಾಮ ನಡೆಯುತ್ತಿದೆ ಆದರೆ ನಿರ್ಮಾಣ ನಡೆಯುತ್ತಿಲ್ಲ' ಎಂದು ವಿಷಾದಿಸಿದರು. ಹೊಸ ತಲೆಮಾರಿನ ಕಥೆಗಳ ಜಾಡನ್ನು ಅನ್ವೇಷಿಸಿದ ಕಥೆಗಾರರಾದ ಕಲಿಗಣನಾಥ ಗುಡದೂರು ಮತ್ತು ಮಂಜುನಾಥ ಲತಾರವರು ಕಥೆಗಳಲ್ಲಿನ ಶಿಲ್ಪದ ಜೊತೆಗೆ ಕಥೆಯಲ್ಲಿ ಕಾಣಸಿಗುವ ಜೀವನ ದೃಷ್ಟಿಯ [illegible] ಮಾಡಿದರು. ಪತ್ರಿಕೆಗಳ ಪುರವಣಿಗಳು ಸೃಷ್ಟಿಸುತ್ತಿರುವ ಬಂಧನ ಕಥಾಬಂಧದ ಮೇಲೆ ಮಾಡುತ್ತಿರುವ ಪರಿಣಾಮವನ್ನು ಚರ್ಚಿಸಿದರು.

ಈ ಸಂದರ್ಭದಲ್ಲಿ ಸಾಹಿತಿಯ ನೈತಿಕತೆ ಮತ್ತು ಅವರು ಸೃಷ್ಟಿಸುವ ಸಾಹಿತ್ಯದ ಮೌಲಿಕತೆಯ ಪ್ರಶ್ನೆ ಮತ್ತೆ ಎದುರಾಯಿತು. ಈ ಪ್ರಶ್ನೆಯ ಬಗ್ಗೆ ಇರುವ ಎರಡು ವಿಭಿನ್ನ ನೆಲೆಗಳ ಉತ್ತರ ಇಲ್ಲಿಯೂ ಎದುರಾಯಿತಾದರೂ ಒಟ್ಟಾರೆ ಚರ್ಚೆಯ ದೃಷ್ಟಿ ಬದುಕಿನಲ್ಲಿ ಮೌಲ್ಯಗಳ ಪತನವಾಗಿರುವ ಸಾಹಿತಿಯ ಸೃಷ್ಟಿಯ ಮೌಲಿಕತೆಯೂ ಪ್ರಶ್ನಾರ್ಹವೇ ಎಂಬ ಪ್ರಬಲ ಧ್ವನಿ ಇತ್ತು. ಇದು ಎಲ್ಲಾ ಕಲಾವಿದರಿಗೂ ಅನ್ವಯಿಸುತ್ತದಾದರೂ ಸಾಹಿತ್ಯದ ಸಂವಹನಾ ಸಾಧ್ಯತೆಯೇ ನಿರೀಕ್ಷೆಯನ್ನು ಹೆಚ್ಚಿಸುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ಇದರ ಬಗ್ಗೆ ಚರ್ಚೆ ಅಪೂರ್ಣಗೊಂಡರೂ ನಡೆದಷ್ಟು ಆರೋಗ್ಯಕರವಾಗಿತ್ತು. ಹೊಸ ತಲೆಮಾರು ನಾಟಕರಂಗದಲ್ಲಿ ನಡೆಸುತ್ತಿರುವ ಹುಡುಕಾಟದಲ್ಲಿ ಹೊಸ ರೂಪಕಗಳನ್ನು ಕಂಡುಕೊಳ್ಳುವುದರಲ್ಲಿ ವಿಫಲವಾಗುತ್ತಿರುವ ಬಗ್ಗೆ ಡಾ.ಕೆ.ವೈ.ನಾರಾಯಣಸ್ವಾಮಿ ಮತ್ತು ಸಮಕಾಲಿನ ಕಾದಂಬರಿಯ ಹೊಸ ನಿರ್ವಚನದ ವಗ್ಗೆ ಡಾ. ಕವಿತಾ ರೈ ಮಾತನಾಡಿದರು.

ಈ ಕಮ್ಮಟದಲ್ಲಿ ನಡೆದ ಮತ್ತೊಂದು ಪ್ರಮುಖ ಚರ್ಚೆ ಪ್ರಾಕಾರ ನಿಷ್ಠೆ ಇರಬೇಕೆ ಬೇಡವೇ ಎಂಬುದು. ಇದನ್ನು ಪತ್ರಕರ್ತ ದೇವು ಪತ್ತಾರ ತಮ್ಮ ಮಂಡನೆಯಲ್ಲಿ ಪ್ರಾರಂಭಿಸಿ ಈ ಕಾಲಘಟ್ಟದಲ್ಲಿ ಹೊಸ ತಲೆಮಾರು ತನ್ನ ಅಭಿವ್ಯಕ್ತಿಗೆ ಸೂಕ್ತವಾದ ಹೊಸ ಪ್ರಾಕಾರಗಳನ್ನು ಕಟ್ಟಿಕೊಳ್ಳುತ್ತಿದೆಯಾದ್ದರಿಂದ ಏಕೆ ಕೆಲವು ನಿರ್ದಿಷ್ಟ ಬಗೆಯ ಸಾಹಿತ್ಯ ಬರುತ್ತಿಲ್ಲ ಎನ್ನುವುದೇ ಅರ್ಥಹೀನ ಪ್ರಶ್ನೆ ಎಂದರು. ಇದನ್ನೇ ಹೊಸ ತಲೆಮಾರಿನ ಹೊಸ ಪ್ರಬಂಧಗಳು ಎಂಬ ತಮ್ಮ ಚರ್ಚೆಯಲ್ಲಿ ಮುಂದುವರೆಸಿದ ಕೃಷ್ಣಮೂರ್ತಿ ಬೆಳಗೆರೆಯವರು ಇಂದು ಹಳೆಯ ಕಾಲದ ಲಲಿತ ಪ್ರಬಂಧದ ಚೌಕಟ್ಟು ಮುರಿದಿದೆ. ಏಕೆಂದರೆ ಅದು ಸಮಾಜದ ಮೇಲ್ಜಾತಿ ಮತ್ತು ಮೇಲ್ವರ್ಗದ ವಿರಾಮದ ಅಭಿವ್ಯಕ್ತಿ ಆಗಿತ್ತು. ಆದರೆ ಇಂದು ಪ್ರಬಂಧ ರಚನೆಯಲ್ಲಿ ಸಮಾಜದ ಅಲಕ್ಷಿತ ಸಮುದಾಯಗಳು ದೊಡ್ಡ ಸಂಖ್ಯೆಯಲ್ಲಿ ತೊಡಗಿಸಿಕೊಂಡಿವೆ. ಅವರ ಬದುಕು ಮತ್ತು ಸಂಕಟಗಳು ಅನಾವರಣಗೊಳ್ಳುತ್ತಿವೆ. ಪ್ರಾಕಾರಗಳು ಕೆಡವಿ ಕಟ್ಟಲ್ಪಡುತ್ತಿವೆ ಎಂದರು.

ಎಲ್ಲಕ್ಕಿಂತ ಮುಖ್ಯವಾಗಿ ಸಮಕಾಲಿನ ಸಾಹಿತ್ಯ ಸೃಷ್ಟಿಯ ಆಂತರಿಕ ನೆಲೆಗಳನ್ನು ಕುರಿತು ಪ್ರೊ. ಎಚ್.ಎಸ್.ರಾಘವೇಂದ್ರರಾವ್ ಮಂಡಿಸಿದ ಅಭಿಪ್ರಾಯಗಳು ಮಾರ್ಗದರ್ಶಿಯೂ ಹೃದಯಸ್ಪರ್ಶಿಯೂ ಆಗಿದ್ದವು. ಲಂಡನ್ನಿನ 'ಹೈಡ್ ಪಾರ್ಕ್' ಸಂಸ್ಕೃತಿಯಂತೆ ಯಾರು ಬೇಕಾದರೂ ತಮಗನ್ನಿಸಿದ್ದನ್ನು ಮಾತನಾಡಿಕೊಂಡು ಹೋಗುವ ಆದರೆ ಯಾವುದೇ ಸಾಮಾಜಿಕ ಪ್ರತಿಸ್ಪಂದನೆ ಇಲ್ಲದ ಅರಣ್ಯರೋದನವಾಗುವಂತಹ ಸಂದರ್ಭದಲ್ಲಿ ನಾವಿದ್ದೇವೆ ಎಂದು ವಿಷಾದಿಸುತ್ತಲೇ ಬರಹ ನಡೆಯುವ ಸಾಮಾಜಿಕ ಸಂದರ್ಭವನ್ನು ಹೃದಯವಂತಗೊಳಿಸುವ ಚಳವಳಿಯ ಜೊತೆ ಸಂಬಂಧ ಹೊಂದಿರದೆ ಸಾಂಸ್ಕೃತಿಕ ಕ್ರಿಯಾಶೀಲತೆ ಸಾಧ್ಯವಿಲ್ಲ ಎಂದು ಘೋಷಿಸಿದರು. ಇಂದಿನ ತುರ್ತು ಉತ್ತಮ ಕೃತಿಯ ಸೃಷ್ಟಿಗಿಂತ ಉತ್ತಮ ಮನುಷ್ಯನ ಸೃಷ್ಟಿಯಾಗಿದೆ ಎಂದು ಕರೆ ನೀಡಿದರು. ಸಾಹಿತಿಯ ಸಮಾಜ ದರ್ಶನ ಮತ್ತು ಜೀವನ ದರ್ಶನವೇ ಅವನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುವುದರಿಂದ ಅವರ ಬಗ್ಗೆ ಚರ್ಚಿಸುವುದು ತುಂಬಾ ಅಗತ್ಯವೆಂದದ್ದನ್ನು ಇಡೀ ಸಭೆ ಒಕ್ಕೊರಲಿನಿಂದ ಸ್ವಾಗತಿಸಿತು. ಅಷ್ಟು ಮಾತ್ರವಲ್ಲದೆ ಮುಕ್ತತೆ ಮತ್ತು ಬದ್ಧತೆಗೆ ಇರುವ ವ್ಯಾಪ್ತಿ ಹಾಗೂ ವಿವಿಧ ಸಾಹಿತ್ಯ ಪ್ರಾಕಾರಗಳಲ್ಲಿ ಬರುತ್ತಿರುವ ಗೊಂದಲಗಳನ್ನು ಸಹ ಅವರು ವಿವರವಾಗಿ ವಿಶ್ಲೇಷಿಸಿದರು.

ಸಭೆಯ ಸಮಾರೋಪದಲ್ಲೂ ಸಹ ಹಿರಿಯ ಚಿಂತಕ ಡಾ.ರಹಮತ್ ತರೀಕೆರೆಯವರು ಎರಡು ದಿನಗಳ ಈ ಕಮ್ಮಟ ಸಾಹಿತ್ಯಕ್ಕಿಂತ ಹೆಚ್ಚಾಗಿ ಒಂದು ಹೃದಯವಂತ ಸಮಾಜದ ಸೃಷ್ಟಿಯ ಬಗ್ಗೆಯೇ ಚರ್ಚಿಸಿದೆ ಎಂದರೂ ತಪ್ಪಾಗಲಿಕ್ಕಿಲ್ಲ ಎಂದು ಹೆಮ್ಮೆಪಟ್ಟರು. ಇದು ಕವಿರಾಜಮಾರ್ಗದಿಂದಲೂ ಕನ್ನಡ ಸಾಹಿತ್ಯ ಮಾನವೀಯ ಸಮಾಜ ಸೃಷ್ಟಿಗೆ ಒತ್ತು ಕೊಟ್ಟಿರುವುದರ ಮುಂದುವರಿಕೆಯಾಗಿದೆ ಎನ್ನುತ್ತಲೇ ಇಂದಿನ ತುರ್ತು ಉತ್ತಮ ಮನುಷ್ಯನ ಸೃಷ್ಟಿಯೇ ಆಗಿದೆ ಎಂದು ಚರ್ಚೆಗೆ ಅರ್ಥಪೂರ್ಣ ಮುಕ್ತಾಯ ಹಾಡಿದರು. ಕನ್ನಡ ಸಾಹಿತ್ಯವನ್ನು ಮುನ್ನಡೆಸುತ್ತಿರುವ 40ಕ್ಕೂ ಹೆಚ್ಚು ಯುವ ತಲೆಮಾರಿನ ಬರಹಗಾರರು ಸಾಹಿತ್ಯದ ಈ ಮಾನವೀಯ ಹೊಣೆಗಾರಿಕೆಯನ್ನು [illegible] ಮಾತ್ರವಲ್ಲ ಮಾನವೀಯ ಸಂವೇದನೆಯ ಬಿ. ಶ್ರೀನಿವಾಸರಾಜುರವರಿಗೆ ನೀಡಿದ ಗೌರವವೂ ಆಗಿತ್ತು. ■

ಅಂಬುರೀಸು ವಳ್ಳೆ ಡಿಸಿಸನ್ ತಗಂಡವ್ರನೆ ಕಣಕ್ಕ

ಅಂಬರೀಶ್ ಚುನಾವಣೆಗೆ ನಿಲ್ಲುವುದಿಲ್ಲವಂತೆ ಎಂಬ ಸುದ್ದಿ ಕೇಳಿದ ಜುಮ್ಮಿ ಆತಂಕದಿಂದ,

"ಅದ್ಯಾಕ್ಲ ಉಗ್ರಿ, ಅಂಬುರೀಸ ಅಂಗಂದವ್ರನಂತೆ?" ಎಂದಳು.

"ಅವುನು ರಾಜಕಾರಣಿ ಅಲ್ಲ ಕಣೆ."

"ಸರಿಯಾಗೇಳ್ಳ."

"ಅಲ್ಲಾ ಕಣೆ, ಪುಗಸಟ್ಟೆ ಟಿಕೀಟ್ ಕೊಟ್ರು ಅಂತವ ಬಂದು ಶ್ರೀರಂಗಪಟ್ನಕ್ಕೆ ನಿಂತಗಬುಟ್ರೆ ಯಂಗೇ?"

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಇನ್ನೇನು ಮಾಡಬೇಕಾಗಿತ್ತೂ?"

"ಶ್ರೀರಂಗಪಟ್ನದಲ್ಲಿ ನಾನು ನಿಂತಗಬವುದೆ? ಅಲ್ಲಿ ಇನ್ಯಾವನಾರ ಜನಗಳ ಕ್ಯಲಸಮಾಡಿಕೊಟ್ಟು ಯಲಕ್ಸನ್ನಿಗೆ ತಯಾರಾಗಿದ್ದನೆ? ಅಂತ ಯೇಚನೆ ಮಾಡಬೇಕಾಗಿತ್ತು."

"ನೀನೇಳದು ಸರಿ ಕಂದ್ಯ" ಎಂದ ಕಾಳಮಾವ.

"ರಾಜಕಾರಣ ಬದ್ಲಾಗ್ಯದೆ ಕಣಮಾವ. ನಿಮ್ಮ ಕಾಲ್ದಲ್ಲಿ ಜನಗಳು ತಮ್ಮ ಕಷ್ಟವ ತಾವೇ ಬಗೆಹರಿಸಿಗಳರು. ಆದ್ರೀಗ ಯಲ್ಲಾನು ಯಮ್ಮೆಲೆತಕ್ಕೆ ಹೊತಗಂಡೋಯ್ತರೆ."

"ಉಗ್ರಿ ಯೇಳದು ನಿಜಕಣ ಮಾವ. ಆ ಶಿವನಂಜನ ಮನೆ ಸೂರು ನೀರು ಯಂಗಟಾಚಾರಿ ಮನೆ ಬಾಗಲಿಗೆ ಬೀಳ್ತದೆ ಅನ್ನೊದೂರ ತಗಂಡು, ಈ ಮಂಡ್ಯತ್ತವ್ಕಲ್ಲ ಯಮ್ಮಲ್ಲೆತಕ್ಕೋಗಿದ್ದವಂತಲ್ಲಾ, ಇನ್ನೇನೇಳನ?" ಎಂದಳು ಜುಮ್ಮಿ.

"ನೋಡ್ರಪ್ಪ ಈಟೊರಸದ ಮ್ಯಾಲೆ ನಮ್ಮ ಜುಮ್ಮಿಗೆ ಯಾವ ಕ್ಯಲಸ ಯಾರು ಮಾಡಬೇಕು ಅನ್ನದು ಕದಿಗೂ ಗೊತ್ತಾಯ್ತು" ಎಂದು ಉಗ್ರಿ ನಕ್ಕ.

"ಇಸಿಸಿ ಕಂಡುದ್ದೇಳಿದೆ ಕಂದ್ಯ. ನೀನೆ ಯೇಳು ಮಾವ, ಶಿವನಂಜ ಮನೆಯಿಂದೆ ಗ್ವಾಡೆ ಹಾಕಿ ಅಡುಗೆ ಮನೆ ಕಟ್ಟುತಾಯಿದ್ದ. ಅದು ಯಂಗಟಾಚಾರಿ ಜಾಗವಂತೆ. ಅದುಕವ್ರುನು ಇಟಗೆ ಕಿತ್ತಾಕಿ ತದದ. ಈ ಸೀರಮಾವನಂತೂ ವಡಿಯಕ್ಕೆ ಹೋಗಿದ್ದ."

"ಯಾರಿಗೇ?"

"ಯಂಗಟಚಾರಿಗೆ."

"ಈ ಸೀರಮಾವನಿಗೆ ವಯಿಸಾದ್ರು ತೋಳು ತಿಮುರು ಮಾತ್ರ ಅಂಗೆ ಅದೆ ಕಣಮಾವ. ಯಂಗಟಚಾರಿಗೇನಾರ. ಏಟುಬಿದ್ದಿದ್ರೆ ಸೀರಮಾವನಿಗೆ ದಂಡ ಹಾಕೋರು" ಎಂದ ಉಗ್ರಿ.

"ದಂಡಯಾಕಾಕ್ತರ್ಲ, ಜಾಗೇನು ಅವುನೆಸರಲ್ಲಿತ್ತೆ?" ಎಂದ ಸೀರ.

"ಅವುನೆಸರಲ್ಲೂ ಇಲ್ಲ, ಇವುನೆಸರಲ್ಲೂ ಇಲ್ಲ ಅಂದಮ್ಯಾಲೆ ನೀನು ಇಬ್ಬರಿಗೂ ವಡಿಯಕ್ಕೋಗಬೇಕಿತ್ತು. ಬರಿ ಆಚಾರಿಗೆ ಮಾತ್ರ ವಡಿಯಕ್ಕೊಯ್ತೆ ಅಂದ್ರೆ ಅವುನು ಆಚಾರೊನು, ಅವುನ ಪರ ಯಾರು ಬರಲ್ಲ ಅಂತ ತಿಳಕೊಂಡಿದ್ದೆ ಅಲವೆ?"

"ತೆಪ್ಪು ಮಾಡಿದ್ರೆ ಯರುಡು ಬುಡದೆಯ."

"ಕಿರುಜಾತಿ ಜನಗಳ ಮ್ಯಾಲೆ ಬೀಳಕ್ಕೆ ನಿಮಗೆ ಇಲ್ಲದ ಪೌರುಸನೆ ಬತ್ತದೆ ಕಣೊ. ಅದೇ ಆಚಾರು ನಿಮ್ಮ ಜಾತಿ ಜನಕಿಂತ ಜಾಸ್ತಿಯಿದ್ರೆ ಅಂಗೋಯಿತ್ತಿದ್ದ ನೀನು?" ಎಂದು ಉಗ್ರಿ ಜನಾಂಗೀಯ ವಾದ ಮಾಡತೊಡಗಿದ.

"ಅದೋಗ್ಲಿ ಅಂಬುರೀಸ್ ಕತೆ ಹೇಳ್ರ" ಎಂದ ಕಾಳಮಾವ.

"ಈಗ ನಾವು ಮಾತಾಡ್ತಯಿದ್ದುದ್ದು ಅಂಬುರೀಸ್ ಕತೆನೆ ಕಣಮಾವ. ಜನ ತಮ್ಮ ಕ್ಯಲಸ ಏನೊ, ಅಂಬುರೀಸ್‌ನಂಥೊನ ಕ್ಯಲಸ ಏನೂ ಅಂತ ಜನ



ಇನ್ನೂ ತಿಳಕಂಡಿಲ್ಲ. ದಿನ ಬೆಳಗಾಯ್ತು ಅಂದ್ರೆ ಅಂಬುರೀಸನ ಮನೆತಕ್ಕೋಗಿ ಭಿಕ್ಸುಕರಂಗೆ ನಿಂತಗಂಡ್ರೆ ಅವುನೆಲ್ಲಿಂದ ತಂದನು ದುಡ್ಡಾ?"

"ಆಗ ಬೆಳಗಾಯ್ತು ಅಂದ್ರೆ ಮಸಿಜನ ಬರೋರೇನ್ಲ? ವತ್ತರೆಲೆ ಬುಡುಬುಡುಕ್ಯಾನು ಬರೋನು, ಅವುನಾದ ಮ್ಯಾಲೆ ಯಳವ್ರರು ಬರೋರು, ಅಮ್ಯಾಲೆ ಹಕ್ಕಿಪಿಕ್ರು, ಮಂಟೆದಯ್ಯಾ ಇಂಗೆ ಮುನ್ನರರವತ್ತು ದಿನವೂ ಬರೋರು. ಅವುರಿಗ್ಯಲ್ಲ ರಾಗಿ ಕೊಡಬೇಕಾಗಿತ್ತು ನಾವು. ಅವುರ್‍ಯಲ್ಲ ಯತ್ತಗೋದ್ರಪ್ಪ ಈಗ?" ಎಂದ ಕಾಳ[...] ಸುಭಿಕ್ಷ ಕಾಲದ ಭಿಕ್ಷುಕರ ಯುಗಕ್ಕೆ ಮಗಿಬಿಕೊ[...] ಒಳಗಣ್ಣಾದ.

"ಅವುರ್‍ಯಲ್ಲ ಕರಿಗೋದ್ರು ಕಣಮಾವ. ಅ[...] ವಳ್ಳೆ ಮಾತೇಳಿದೆ ನೀನು, ಇವತ್ತಿಗೂ ಅಂಬುರಿ[...] ಮನೆತಕ್ಕೆ ಗಂಡ ಬುಟ್ಟೋರು, ಹೆಡತಿ ಸತ್ತೊ[...] ಅಪ್ಪನ ಆಸುಪತ್ರಿಗೆ ಸೇರಿಸಿದೋರು, ಕಂಟ್ರಾಟ್ರು[...] ಒಂದು ಹಿಂಡು ಜನ ಹೋಗೋರು. [...] ಅವುನೆ ದುಡ್ಡಿಲ್ದೆ ರಾಜಕಾ[...] ಮಾಡಕ್ಯಾಗದಿಲ್ಲ, ಬುಡ್ತಾಯಿ[...] ಅಂದವುನೆ."

"ಪಾಪ, ದಾನಧರ್ಮ ಮಾಡೋನ[...] ಬರಿಗೈಯಾದ್ನೇನೊ?"

"ಅಂಗೂ ಹೇಳಬವುದು. ಹಿಡಿ[...] ಹಿಡದಂಗೆ ಕೊಡತಿದ್ದ. ಇವತ್ತು [...] ಸಗತಿಯಿರದು ಇತ್ತಗೆ ದ್ಯಾವೇಗೌ[...] ಮಕ್ಕಳಿಗೆ, ಅತ್ತಗೆ ಗಣಿ ಕಳ್ರಿಗೇ ವ[...] ಇನ್ಯಾರತ್ರನೂ ದುಡ್ಡಿಲ್ಲ."


"ಎಡೂರೇನು ಕಡಿಮೆ ಮಡಗಿದ್ದ[...]"

"ಅದೂ ನಿಜ ಚಿಗಪ್ಪ, ದ್ಯಾವೇಗೌ[...] ನಾಲುಕು ಮಕ್ಕಳು ಮಾಡಿದ್ದ ಒಟ್ಟಿಗೆ ಸೆ[...] ಎಡೂರಪ್ಪನ ಯರಡೇ ಮಕ್ಕಳು ಗೆಬುರತಾಯಿದ್ದವ[...] ಇದನ್ಯಲ್ಲ ನೋಡಿದ್ರೆ ಇನ್ಮುಂದೆ ನ[...] ಮಕ್ಕಳಿಲ್ಲದೋರನ್ನ ಮುಖ್ಯಮಂತ್ರಿ ಮಾಡಬೇಕೇನ[...] ಎಂದ ವಾಟಿಸ್ಸೆ.

"ಹೋದ್ರೆ ಗಂಡುಳ್ಳೊ ಗರತಿತಕ್ಕೋಯ್ತಿನಿ, ಅಂದ್ರೆ ಗ್ಯಡ್ಡಿಗೆ ಹ್ವಡಿಸಿಗತ್ತಿನಿ ಅನ್ನೊ ಮಾತು ನಿಂ[...] ಎಂದ ಉಗ್ರಿ.

ಆನೆಕಾಟ

ಕೋಡಿಮಠದ ನಾಡಿ ಗ್ರಂಥದಲ್ಲಿ ಈ ಸರ್ಕಾರದ ಜೀವಿತಾವಧಿ ಆರುತಿಂಗಳು ಮಾತ್ರ ಎಂದು ಬರೆದಿರುವುದರಿಂದ ಯಡ್ಯೂರಪ್ಪಗೆ ಬಲೇ ಚಿಂತೆಯಾಗಿದೆಯಂತೆ. ಅಧಿಕಾರದ ಕುರ್ಚಿಗೆ ಇನ್ನೊಂದಿಷ್ಟು ವರ್ಷ ಅಂಟಿಕೊಂಡಿರಲೇಬೇಕು ಎಂದು ಹರಸಾಹಸ ಮಾಡುತ್ತಿರುವುದು ಕಂಡುಬರುತ್ತಿದೆ. ಕರೆದು ಕರೆದ ಜಾತಿ ಸಂಘಟನೆಗಳ ಸಭೆಗಳಿಗೆಲ್ಲ ಹೋಗಿ ಇಷ್ಟು ಕೋಟಿ ಕೊಡ್ತೀನಿ ಇದ ಮಾಡಿ, ಅಷ್ಟು ಕೋಟಿ ಅಂತ ಆಶ್ವಾಸನೆಗಳ ಸುರಿಮಳೇನೆ ಸುರುಸ್ತಾ ಬದ್ದವರೆ. ಕರೆಯದೇ ಇದ್ದರೂ ಮಠಗಳಿಗೆ ಹಾಜರಾಗಿ, ಮಠಾಧೀಶರ ಆಶೀರ್ವಾದ ಪಡೆದು ಅದೆಷ್ಟೋ ಕೋಟಿ ನೀಡ್ತೀನಿ ಅಂತ ಭರವಸೆಯ ಬಿರುಗಾಳಿಯನ್ನೇ ಎಬ್ಬಿಸುತ್ತಿದ್ದಾರೆ. ಸಾರ್ವಜನಿಕರ ಹಣಾನ ಹೀಗೆ ಹುಚ್ಚುಚ್ಚಾಗಿ ಪೋಲು ಮಾಡುತ್ತಿರುವುದರ ವಿರುದ್ಧ ದನಿ ಎತ್ತಿದವರ ಮೇಲೆ ಉರಿದು ಬೀಳುತ್ತಾರೆ. ಯಾರು ಏನೇ ಹೇಳಲಿ ಧಾರ್ಮಿಕ ಕಾರ್ಯಗಳಿಗೆ ಹಣ ನೀಡುವುದು ಶತಸಿದ್ಧ ಎಂದು ಎದಿರೇಟು ಹಾಕುತ್ತಾರೆ. ಕಂಡಕಂಡ ದೇವರಿಗೆಲ್ಲ ಅಡ್ಡ ಬೀಳ್ತಿದ್ದಾರೆ. ಸತತವಾಗಿ ಹೋಮ ಹವನ ಮಾಡ್ತಿದ್ದಾರೆ. ಆದರೂ ಏನೋ ಅಳುಕು ಕಾಡುತ್ತಿದೆ.



ದೇವೇಗೌಡರ ಮನೆಯವರು ಕೇರಳ, ತಮಿಳುನಾಡು, ಆಂಧ್ರ ಅಲ್ಲೆಲ್ಲ ದಕ್ಷ ದೇವರುಗಳನ್ನು ಹಿಡಿದುಕೊಂಡಿರುವುದು ಇವರನ್ನೂ ಅಲ್ಲಿಗೆ ತೆರಳುವಂತೆ ಮಾಡುತ್ತಿದೆ. ಮಾಟ, ಮರುಮಾಟ ಇಂತಹವನ್ನೆಲ್ಲ ಮಾಡಿಸುತ್ತಿದ್ದಾರೆ. ಆ ಮನೆಯವರು ನೀಡದ ದಾನವನ್ನು ತಾನು ನೀಡಿ ದೇವರನ್ನು ಒಲಿಸಿಕೊಳ್ಳಬೇಕು ಅನ್ನೋ ಚಿಂತೆಯಲ್ಲಿರುವಾಗ ರಾಮಚಂದ್ರಗೌಡರು ಅದ್ಭುತ ಸಲಹೆಯನ್ನು ಅವರ ಮುಂದಿಟ್ಟರು. ಆ ಗೌಡನ ಗುಟ್ಟು ಈ ಗೌಡನಿಗೆ ಗೊತ್ತಿರುತ್ತೆ ಎಂದು ಕಿವಿಗೊಟ್ಟರು. ಆ ಮನೆಯ ಯಾರೂ ದೇವರಿಗೆ ಆನೆ ದಾನ ಮಾಡಿಲ್ಲ, ನೀವು ಆ ಕೆಲಸ ಮಾಡಿದರೆ ದೇವರು ತೃಪ್ತಿಯಾಗುವುದು ಖಂಡಿತ ಎಂದು ಹೇಳಿದರಂತೆ ಗೌಡರು. ಈ ಗೌಡನ ತಲೆಯ ಹಂಗೆ ನೆಕ್ಕಿ ಬಿಡಲೇ ಅನ್ನುವಂತಹ ಸಂತೋಷ ಆಯಿತಂತೆ. ಪಕ್ಕದಲ್ಲೇ ಶೋಭಾ ಕರಂದ್ಲಾಜೆ ಇದ್ದುದರಿಂದ ಅಪಾರ್ಥಕ್ಕೆಡೆಯಾಗಬಹುದು ಎಂದು ಉಕ್ಕಿ ಬರುತ್ತಿದ್ದ ಉತ್ಸಾಹ ತಡೆದುಕೊಂಡರಂತೆ.

ಮೇಧಾವಿಗಳಾದ ರಾಮಚಂದ್ರಗೌಡರು ಪ್ರಭಾವಿ ದೇವರ ತಲಾಷಿಗೆ ನಿಂತರು. ಕೇರಳದ ದೇವರೇ ಅತ್ಯಂತ ಪ್ರಭಾವಿ ಅಂತ ತಿಳೀತು. ಅಲ್ಲಿನ ತಳಿಪರಂಬದ ರಾಜರಾಜೇಶ್ವರಿ ದೇವಾಲಯಕ್ಕೆ ಗೌಡರ ಪ್ಲಾದ ಶೋಭಕರಂದ್ಲಾಜೆ ಹಾಗೂ ಮುಖ್ಯಮಂತ್ರಿಗಳೊಡನೆ ಬೆಳೆಯಿತು. ದೇವರ ಮೇಲಿನ ಭಕ್ತಿ ಉಲ್ಬಣಿಸಿದುದರಿಂದ ಗೌಡರು ಅರೆನಗ್ನ ಸ್ಥಿತಿಗೆ ಬಂದರು. ತಮ್ಮ ದೇಹದಾರ್ಢ್ಯವನ್ನು ದೇವರಿಗೆ ಮಾತ್ರವಲ್ಲ; ಸುತ್ತ ನೆರೆದಿದ್ದ ಭಕ್ತರಿಗೂ ಪರಿಚಯಿಸಿದರು. ತೀರಾ ಇಂತಹ ಸ್ಥಿತಿಗೆ ಬೀಳದಿದ್ದ ಯಡ್ಯೂರಪ್ಪ ಶರಟನ್ನು ತೆಗೆದಿದ್ದರೂ ಮೇಲೆ ವಸ್ತ್ರ ಹಾಕಿಕೊಂಡಿದ್ದರು. ಕರಂದ್ಲಾಜೆಯವರು ಯಾಕೋ ಏನೋ ಯಾವ ಭಾಗದ ಉಡುಗೆಯನ್ನು ತೆಗೆದಂತಿರಲಿಲ್ಲ, ಪ್ರಾಯಶಃ ಭಕ್ತಿಭಾವ ಅಂತಹ ಔನ್ನತ್ಯವನ್ನು ತಲುಪಿರಲಾರದು.

ಶಾಸ್ತ್ರೋಕ್ತವಾಗಿ ಆನೆ ದಾನ ಮಾಡಿ ಭಕ್ತರು ಕೃತಾರ್ಥರಾದರು. ಆದರೆ ಒಂದು ಯಡವಟ್ಟು ನಡೆದುಹೋಗಿತ್ತು. ಆನೆಯನ್ನು ದಾನ ಮಾಡಿದರು ಸರಿ. ಆ ಆನೆಯನ್ನು ಕರ್ನಾಟಕದಿಂದಲೇ ತಗೊಂಡು ಹೋಗಬಾರದಿತ್ತಾ. ಕೇರಳದಲ್ಲೇ ಕೊಂಡುಕೊಂಡರು. ದಾನಕ್ಕೆ ಅವರಿವರ ಹಣ ಬಳಸಬಾರದು ಅಂತ ಯಡ್ಯೂರಪ್ಪನವರೇ ಕೊಟ್ಟಿದ್ದರು. ಹಾಳಾದ ಕೇರಳದಲ್ಲಿ ಒಂದು ಕಾನೂನು ಇದೆಯಂತೆ. ಹಣಕಾಸಿನ ತೊಂದರೆ ಇದ್ದು ಆನೆ ಸಾಕಲು ಸಾಧ್ಯವಿಲ್ಲ ಎಂದಾದಾಗ ಮಾತ್ರ ದಾನ ಅಥವಾ ಮಾರಾಟ ಮಾಡಬಹುದಂತೆ. ಇದನ್ನು ಅರಣ್ಯ ಇಲಾಖೆಯೇ ದೃಢಪಡಿಸಬೇಕಂತೆ!

ಇಂತಹ ಕಾನೂನುಗಳು ನೆಪ ಮಾತ್ರಕ್ಕೆ ಇರುತ್ತವೆ. ಅದರತ್ತ ಯಾರೂ ಗಮನ ಹರಿಸುವುದಿಲ್ಲ. ಯಡ್ಯೂರಿ ಗ್ರಹಚಾರಕ್ಕೆ ಆನೆಪ್ರಿಯರ ಸಂಘ ಒಂದು ಅಲ್ಲಿ ಅಸ್ತಿತ್ವದಲ್ಲಿ ಇದ್ದಿತಂತೆ. ಅದರ ಕಾರ್ಯದರ್ಶಿ ಆನೆದಾನ ಪ್ರಸಂಗವು ವನ್ಯಜೀವಿ ಇಲಾಖೆಯು ನಿಗದಿಪಡಿಸಿರುವ ಹದಿನೆಂಟು ಷರತ್ತುಗಳನ್ನು ಉಲ್ಲಂಘಿಸಿದೆ ಎಂಬುದಾಗಿ ತಕರಾರು ಎತ್ತಿದ್ದಾರೆ. ಸಾಲದ್ದಕ್ಕೆ ಪ್ರಧಾನಿಯವರೇ ಮಠಮಂದಿರಗಳಿಗೆ ಉಡುಗೊರೆ ನೀಡುವುದಕ್ಕಾಗಿ ರಾಜ್ಯಗಳ ಮುಖ್ಯಸ್ಥರು ಪ್ರಾಣಿಗಳನ್ನು ಖರೀದಿಸಬಾರದು ಎಂದಿದ್ದಾರಂತೆ. ಇವುಗಳ ಆಧಾರದ ಮೇಲೆ ಯಡ್ಯೂರಪ್ಪ ಮೇಲೆ ದೂರು ದಾಖಲಾಗಿದೆ!

ಯಡ್ಯೂರಪ್ಪ ಅಂತಹವರಿಗೆ ಇದೊಂದು ಜುಜುಬಿ ಕೇಸು. ತಮ್ಮ ಪಕ್ಷದವರ ಮೇಲೆ ಲೈಂಗಿಕ ಆರೋಪ ಬಂದಾಗ ಮಹಿಳಾ ಆಯೋಗದಲ್ಲಿನ ಆ ಫೈಲನ್ನೇ ಹಾರಿಸಲಿಲ್ಲವಾ. ಮತಾಂತರ ಕುರಿತು ಚರ್ಚಿಸಲು ಶಾಸಕರ ಭವನದಲ್ಲಿ ಸಭಾಂಗಣವನ್ನು ಕಾಯ್ದಿರಿಸಿದಾಗ, ಪುಸ್ತಕದ ಹಾಳೆಯನ್ನೇ ಕಿತ್ತೆಸೆದು ಪೆದ್ದು ಹಾದರಗಿತ್ತಿ ತರಹ ಆಡಿರಲಿಲ್ಲವಾ. ಹಂಗೇ ಇಲ್ಲೂ ಯಡ್ಯೂರಪ್ಪನವರ ಹೆಸರಿನ ಬದಲು ಬೇರೆ ಹೆಸರು ತಿದ್ದಿಸಿ ಬರೆಯಬಹುದಿತ್ತು ಅಥವಾ ಆ ಹಾಳೆಯನ್ನೇ ಕಿತ್ತೆಸೆಯಬಹುದಿತ್ತು. ಆದರೆ ಅದು ಕರ್ನಾಟಕ[...] ಕೇರಳ. ಅಲ್ಲೂ ಏನಾದರೂ ಒಳ ವ್ಯವಹಾರ ನಡೆಸೋ[...] ಅಂದರೆ ಅದು ದೇವರಿಗೆ ಮಾಡಿದ ದಾನ. ತ[...] ಮಾಡಿಲ್ಲ ಅಂದರೆ ಪುಣ್ಯ ಯಾವನ ಹೆಸರಿಗ[...] ದಾಖಲಾಗುತ್ತೆ. ಅವರ ತಲೆ ಕೆಟ್ಟು ಗೊಬ್ಬರ ಆಯಿ[...]

ಆನೆಯ ಶಾಪ ಸುತ್ತುಕೊಂಡಿತೇನೋ. ಕರ್ನಾಟಕ[...] ಆನೆ ಸಾಯ್ತಾ ಬದ್ದವೆ. ವಿದ್ಯುತ್ ತಂತಿ ತಗ[...] ಸಾಯಬೇಕೂಂತ ಅವುಗಳ ಹಣೆಯಲ್ಲಿ ಬರೆದಿತ್ತು ಸ[...] ಅಂದರೆ ಹೈಕೋರ್ಟ್ ಕೇಳಲು ಸಿದ್ಧ [...] ವನ್ಯಪ್ರಾಣಿಗಳಿಗೆ ಸೂಕ್ತ ರಕ್ಷಣೆ ನೀಡುವುದು ಸರ್ಕಾ[...]

ಅಣಕ

ಎಚ್.ಎಲ್. ಕೇಶವಮೂ[...]

ಕರ್ತವ್ಯ ಅಂತ ಜಾಡಿಸುತ್ತಾ ಬದ್ದದೆ. ಅ[...] ಇಲಾಖೆಯವರನ್ನ ಕೇಳಿದರೆ ಆನೆಗಳ ಸಂಖ್ಯೆ ಯದ್ವಾತ[...] ಹೆಚ್ಚಾಗಿದ್ದು ಆಹಾರ ಹುಡುಕಿಕೊಂಡು ಕಾಡಿನ[...] ನಾಡಿಗೆ ಹೋಗೋದು ಮಾಮೂಲು ಅಂತಾರೆ. ರೈತ[...] ಕೇಳಿದರೆ ಪೌಷ್ಟಿಕ ಆಹಾರ ಅಂತ ಜಮೀನಿನಲ್ಲಿ ಇ[...] ಬೆಳೆ ನಾಶ ಮಾಡಿದರೆ ಅದನ್ನ ತಡೆಯೋಕೆ ತಂತಿಗ[...] ಕರೆಂಟ್ ಹಾಯಿಸುವುದೊಂದೇ ಇರೋದು [...] ಅಂತಾರೆ. ವಿದ್ಯುತ್ ಇಲಾಖೆಯವರೋ ಇಂತಹ ಕರೆ[...] ಕಳ್ಳರನ್ನು ತಡೆಯಲು ಸಾಧ್ಯವೇ ಇಲ್ಲ ಅಂತಾರೆ. ಯಾ[...] ಹೊಣೆಗಾರರನ್ನಾಗಿ ಮಾಡೋದು ಅನ್ನುವ[...] ಗೋಜಲಾಗಿದೆ.

ಸದ್ಯ ಪ್ರಾಣಿ ದಯಾ ಸಂಘದವರು ಇನ್ನೂ ತ[...] ಮಾಡ್ತಿಲ್ಲ. ಅವರ ದಯೆ ಏನಿದ್ದರೂ ಬಡ ಸಕ[...] ಕಂಪೆನಿ ಪ್ರಾಣಿಗಳ ಮೇಲೆ. ಅವಕ್ಕೆ ಕೊ[...] ನೋವಾದರೂ ಅವರ ದಯೆ ಅನ್ನೋದು [...] ಹರಿಯುತ್ತೆ ಮೈಸೂರಿನ ಸರ್ಕಸ್ ಕಂಪೆನಿ ಆನೆಗ[...] ಈ ದಯೆ ಅನ್ನೋದು ಬನ್ನೇರುಘಟ್ಟಕ್ಕೆ ಕಳಿ[...] ಅಲ್ಲೂ ಅವಕ್ಕೆ ಶಾಶ್ವತ ಸ್ಥಳ ಸಿಗುವಂತೆ ಕಾಣು[...] ಒಂದು ದಿನಕ್ಕೆ ಒಂದು ಆನೆಗೆ ಐದುಸಾವಿರ ರೂಪಾ[...] ಖರ್ಚು ತಗಲುತ್ತೆ, ಈ ಹಣದ ಹೊಡೆತ ನ[...] ತಾಳಲಾರೆವು ಅನ್ನುತ್ತೆ ಅಲ್ಲಿನ ಪ್ರಾಧಿಕಾರ. ವನ್ಯ ಪ[...] ವಿಭಾಗದವರೇ ವಹಿಸಿಕೊಳ್ಳಲಿ ಅನ್ನುವುದು ಅ[...] ತಕರಾರು. ಮಲತಾಯಿ ಮಗು ಇದ್ದಂಗಾಗಿದೆ ಅವ[...]

"ನನ್ನ ಎಗ್‌ಜಾಂಪಲ್ಲೇ ಸರಿಲ್ಲ."

"ಅಲ್ಲಾ ಕಣೊ. ದ್ಯಾವೇಗೌಡ ಮುತ್ತು ಎಡೂರನ ಮಕ್ಕಳು ...ತ್ರಾಯಿರದು ನೋಡಿ ಮುಂದೆ. ಮಕ್ಕಳಿಲ್ಲದೋರ ಮುಖ್ಯಮಂತ್ರಿ ...ಬೇಕು ಅಂತಿಯಲ್ಲಾ, ಆ ನಿಜಲಿಂಗಪ್ಪನೋರಿಗೆ ವಿಸ್ಯುಮಕ್ಕಳಿದ್ವೊ? ...ಳು ಮಂಜಪ್ಪಾರಿಗೆ ಮಕ್ಕಳಿರಲಿಲ್ವೆ? ಪಟೇಲ್ರಿಗೇನು ವಸಿಮಕ್ಕಳಿದ್ದವೆ? ...ರಗಂಟ ಅವೇನು ಬಾಲ ಬಿಚ್ಚದವೆ? ಅದ್ಕೆ ಅಂಗೇಳಕ್ಕೆ ಬರದಿಲ್ಲ. ...ರಿಗೂ ದ್ಯಾವೇಗೌಡ ಎಡೂರನಂಥ ಮಕ್ಕಲೇಯಿರದಿಲ್ಲ. ...ಮರಿಯಾದಿಗೆ ಅಂಜಬಾಳೋರು, ಅಪ್ಪನಿಗೆ ಕೃಟ್ಟೆಸುರು ಬತ್ತದೆ ...ಅವುತಗಂಡು ಬಾಳೊ ಮಕ್ಕಳೂ ಇರತವೆ ಕಣೊ" ಎಂದ ಉಗ್ರಿ.

"ಅದಿರ್ಲಿ, ಅಂಬುರೀಸನ ಕತೆ ಹೇಳ್ಳ" ಎಂದಳು ಜುಮ್ಮಿ.

"ಅಂಬುರೀಸು ವಳ್ಳೆ ಡಿಸಿಸನ್ ತಗಂಡವ್ನುನೆ ಕಣಕ್ಕ. ಅವುನು ಚುನಾವಣೆ ...ಕಾರಣಕ್ಕೆ ಅಲ್ಲ."

"ಅಂಗಂತಿಯಾ?"

"...ಎಸ್. ಅವುನು ಸೋತ್ರು ಕೂಡ ಚುನಾವಣೆಗೆ ಖರ್ಚು ಮಾಡಿರೋ ...ಕೇಳಕ್ಕೆ ಜನ ಮನೆತಕ್ಕೊದ್ರೆ ಅವುನೆಲ್ಲಿಂದ ತಂದುಕೊಡಬೇಕಾಗಿತ್ತೂ?"

"ಅವುನಿಗೋಸ್ಕರ ದುಡ್ಡು ಖರ್ಚು ಮಾಡಿದೋರು ...ಹೋಗಬೇಕಾಗಿತ್ತೂ, ನೀನೆ ಹೇಳೊ" ಎಂದ ಉಗ್ರಿ.

"...ಖರ್ಗೆ ಮನೆತಕ್ಕೊ, ಪೃತ್ವಿರಾಜ್ ಚವ್ಹಾಣನ ಮನೆತಕ್ಕೊ ...ಗಬೇಕಾಗಿತ್ತು. ಅವುರು ಟಿಕೆಟ್ ಕೊಟ್ಟೋರತ್ರ ಕಾಸೀಸಗಂಡು ...ಪ್ಯಾಂತರುಪಾಯಿ ಮಡಿಕಂಡು ಕುಂತಿದ್ರು."

"...ರಬವುದು, ಆದ್ರೆ ಕಾಂಗ್ರಸ್ಸಿನೋರು ಟಿಕೆಟ್ ಮಾರಿಕಂಡಿದ್ರು ... ನಿಜ ಹೇಳಿದ ಮಾರ್ಗರೆಟ್ಟಮ್ಮನ್ನೆ ಕಾಂಗ್ರಸ್ಸಿನವು ತಗುದರಲ್ಲ ...ಾ."

"ಕಾಂಗ್ರಸ್ಸಿನಲ್ಲಿ ನಿಜ ಹೇಳೋರಿಗೆ ಉಳಿಗಾಲವೇಯಿಲ್ಲ ಕಣೊ."

"...ಅಂಗರೆ ಸಿದರಾಮಯ್ಯನ ಕತೆಯೇನೊ?"

"...ಅವುನು ಒಂದುಚೂರ್ರಲ್ಲಿ ಬಚಾವಾಗ್ಯವುನೆ. ಸರಿಯಾಗಿ ಸುಳ್ಳ ...ಳದೆವೊದ್ರೆ ಸಿದ್ದರಾಮಯ್ಯನ ಹುಂಡಿಗೋಗಿ ತ್ಯಾಟದ್ಮನೆ ...ಕಂಡಿರಬೇಕಾಯ್ತದೆ."

?!"

■

...ಆನೇ ಆಗಲಿ ಪ್ರಾಣಿ ದಯಾ ಸಂಘದವರಿಗೆ ಒಂದು ಸಂತೋಷ. ... ಸಂಘದ ಹೆಸರು ಸುದ್ದಿ ಆಯಿತು ಅಂತ. ಇದಕ್ಕಿಂತ ಭಾರೀ ಸುದ್ದಿ ... ರೈತರು ಜಮೀನಿಗ್ಹಾಕಿರುವ ತಂತಿ ಬೇಲಿ ಕಿತ್ತಾಕಿ ಅಂದರೆ ಯಾಕೋ ...ಬಿಡೊಲ್ಲರು. ಆನೆಗಳ ಮೇಲಿನ ದಯೆಗಿಂತ ತಮ್ಮ ಪ್ರಾಣದ ...ನ ಆಸೆಯೇ ಜೋರಿರಬಹುದು! ಅಂತೂ ಇವರು ತೆಪ್ಪಗಿರುವುದು ...ದಕ್ಕಂತೂ ನಿರಾಳ- ಇವರೂ ಗಲಾಟೆ ಎಬ್ಬಿಸಿದ್ದರೆ ಈಗಿರೋ ಗೋಜಲಿಗೆ ...ಂದು ಗಂಟುಬೀಳುತ್ತಿತ್ತು.

...ನೆ ನಡೆದಿದ್ದೇ ದಾರಿ ನಿಜ. ಮಾಯಾವತಿ ಆನೆ ಸವಾರಿ ಮಾಡೋಕೆ ...ರು ರೆಡಿ ಆಗಿರುವಂತಿದೆ. ಚುನಾವಣೆ ಸಮಯ ನೋಡಿ. ...ಸಿಂಹಗಳೂ ಯುವರಕ್ತ ತುಂಬಿಸಿಕೊಂಡಿರುವಂತೆ ಘರ್ಜಿಸುತ್ತಿವೆ. ... ಪಕ್ಷದ ವರಿಷ್ಠರ ಹುಳುಕುಗಳು ಈಗ ನೆನಪಾಗುತ್ತಿವೆ. ಈಗ ...ೀದಾತ್ತ ನಾಯಕ-ನಾಯಕಿಯರಾಗಿ ಆನೆ ಏರಲು ಪ್ರಯತ್ನಪಡುತ್ತಿವೆ. ...ಹ ಆನೇ ಏರಲು ಪ್ರಯತ್ನಿಸಿ, ಅದರ ಕಾಲಿನ ತುಳಿತಕ್ಕೆ ನಜ್ಜುಹೋದ ... ಯಾರಿಗೂ ನೆನಪಿಗೆ ಬರುತ್ತಿಲ್ಲ! ಯಡ್ಯೂರಪ್ಪನವರಿಗೆ ಇದೊಂದೇ ...ರ ಕಾಣಿಸುತ್ತಿರೋದು. ಬಂಡಾಯ ಎದ್ದ ಕಾಂಗ್ರಸ್ಸಿನವರು ಆನೆಬಾಲ ...ಹಿಡಿದರೆ ತಮ್ಮ ಪಕ್ಷಕ್ಕೆ ಒಳಿತಾಗಬಹುದೇನೋ ಎಂಬ ದೂರ ಆಸೆ!

... ಆನೆ ಅನ್ನೋದು ಇಷ್ಟೊಂದು ರಾದ್ಧಾಂತ ಮಾಡುತ್ತಿದ್ದರೂ ...ತ್ ಮಂತ್ರಿ ನಿರಾಳವಾಗಿದ್ದರು. ಒಂದು ರೀತೀಲಿ ಅವರ ಮುಖದಲ್ಲಿ ...ಹಾಸವೇ ಮೂಡಿತ್ತು ಅನ್ನಬಹುದು. ಅವರನ್ನ ಕಂಡು "ನಮಸ್ಕಾರ ..." ಅಂದೆ. ಕೈ ನೀಡಿದರು. ನಾನೂ ಕೊಟ್ಟೆ. ಗಾಣಕ್ಕೆ ಕೈ ಸಿಕ್ಕಿದ ...ಭವ ಆಯಿತು.

"ಏನ್ಸಾರ್ ಇಷ್ಟೊಂದು ಖುಷೀಲಿದ್ದೀರಿ" ಕೇಳಿದೆ.

"ಆನೆ ಸತ್ತವಲ್ಲ" ಅಂದರು.

...ಂತಾಪ ಸೂಚಿಸಬೇಕಾದ ಸಮಯದಲ್ಲಿ ಈ ಮಾತು!

"ಅಲ್ಲ ಸಾರ್...."

"ಗೊತ್ತು ಕಣ್ರಿ ನಿಮ್ಮ ಸಮಸ್ಯೆ ಏನು ಅಂತಾ. ಆನೆ ಸತ್ತೋದ್ರೋ ...ಅಳ್ತಾ ಕುಂತ್ಕಬೇಕು. ಇದೇ ತಾನೇ ನೀವು ಹೇಳ್‌ಬೇಕೂಂತಿರೋದು?"

...ಮೌನ ತಾಳಿದೆ.

"ಆನೆ ಯಾಕೆ ಸತ್ವು ಹೇಳಿ?"

"ವಿದ್ಯುತ್ ತಂತಿ ತಾಗಿ."

"ಕತ್ತಲಲ್ಲಿ ಕರ್ನಾಟಕ ಅಂತಾರಲ್ಲ, ನೋಡಿದ್ರಾ ಅದು ಸುಳ್ಳು ಅನ್ನೋಕೆ ... ಪ್ರೂಫು ಕಣ್ರಿ."

"ಯಾವುದು ಸಾರ್?"

"ಆನೆ ಸಾವು. ಅವು ಸಾಯಬೇಕಾದರೆ ಕರೆಂಟು ಹರೀತಿತ್ತು ...ಾಣೆ?!"


...ನದ ಜೀಥಾವಿತನಕ್ಕೆ ತಲೆಬಾಗಿದೆ. ■

ಮರೆಯುವ ಮುನ್ನ



■ ಪಿ. ಲಂಕೇಶ್ ಮಾರ್ಚ್ 3, 1991

ಸತ್ತವರನ್ನು ಕುರಿತು



ಮೊನ್ನೆ ಶೂದ್ರ ಶ್ರೀನಿವಾಸ್ ಅವಸರದಲ್ಲಿ ಅನುಪಮಾ ನಿರಂಜನ ಮತ್ತು ನಿರಂಜನರ ಬಗ್ಗೆ ಸ್ವಲ್ಪ ಕಟುವಾಗಿ ಬರೆದಿದ್ದನ್ನು ಅವನ ಪರಿಚಿತರು ಟೀಕಿಸಿದರು. ಸ್ವಲ್ಪ ಅಭಿರುಚಿ ಇಲ್ಲದ ಲೇಖನ ಅಂದರು.

ಆದರೆ ನಾನು ಶೂದ್ರನ ಲೇಖನವನ್ನು ಅಷ್ಟಾಗಿ ಟೀಕಿಸಲು ಇಷ್ಟಪಡುವುದಿಲ್ಲ, ಅದು ಆತನಿಗೆ ಅನುಪಮಾ ಬಗ್ಗೆ ಇರುವ ಪ್ರೀತಿಯನ್ನು ಮುಚ್ಚಿಡುವುದಿಲ್ಲ, ಆಕೆಯ ನಿಜವಾದ ಚಿತ್ರ ಕೊಡಲು ಪ್ರಯತ್ನಿಸುತ್ತದೆ. ಒಬ್ಬ ವ್ಯಕ್ತಿ ತೀರಿಕೊಂಡೊಡನೆ ಬರೀ ಚೋಳಿಯ, ಸಂತಾಪದ ಮಾತುಗಳನ್ನೇ ಆಡಬೇಕಾದ ಅಗತ್ಯವಿಲ್ಲ, ತೂಕ ಕಳೆದುಕೊಳ್ಳದೆ, ಅನಗತ್ಯವಾಗಿ ಕ್ರೂರವಾಗದೆ ಸತ್ತ ವ್ಯಕ್ತಿಯ ವಿವಿಧ ಮುಖಗಳನ್ನು ವಿವರಿಸಿದರೆ ಮಾತ್ರ ಆ ವ್ಯಕ್ತಿಯ ಬಗ್ಗೆ ನಿಜವಾದ ಚಿತ್ರ ಬರುತ್ತದೆ. ನಮ್ಮಲ್ಲಿ ಬಹುಪಾಲು ಲೇಖಕರಿಗೆ ಒಬ್ಬ ವ್ಯಕ್ತಿಯ ಒಳ್ಳೆಯ, ಕುತೂಹಲಕರ, ಯಾರೂ ಗಮನಿಸದ ವಿಷಯ ನೀಡಿಯೂ ವಿಶ್ವಾಸ ಕಳೆದುಕೊಳ್ಳದೆ ಇರುವ ಕಲೆ ಗೊತ್ತಿಲ್ಲ. ಆದ್ದರಿಂದಲೇ ಇಲ್ಲಿ ನೀಚತನದ ವ್ಯಕ್ತಿಚಿತ್ರ ಅಥವಾ ಆರಾಧನೆಯ ವ್ಯಕ್ತಿಚಿತ್ರ ಮಾತ್ರ ಸಾಧ್ಯವಾಗುತ್ತದೆ.

ಸುವರ್ಣ ವೃಷ್ಟಿ



ಖುಷ್‌ವತ್ ಸಿಂಗ್ ಅವರಿಗೀಗ ಎಪ್ಪತ್ತಾರು ವರ್ಷ! ಹಾಗೆಂದು ನಂಬಲೂ ಸಾಧ್ಯವಾಗುತ್ತಿಲ್ಲ, ಮೊನ್ನೆ ಅವರದೊಂದು ಸಂದರ್ಶನ ಪ್ರಕಟವಾಯಿತು. ಅದರಲ್ಲಿ ಖುಷ್‌ವಂತರ ವಯಸ್ಸು, ಪಕ್ವತೆ, ವ್ಯಥೆಗಳೆಲ್ಲ ಬಂದಿವೆ. ಖುಷ್‌ವಂತ್ ಬಗ್ಗೆ ಅನೇಕರಿಗೆ ಸರಿಯಾಗಿ ಗೊತ್ತಿಲ್ಲ. ಈತನ ನಂಬಿಕೆಗಳಲ್ಲಿ ಒಂದು, 'ಒಬ್ಬ ವ್ಯಕ್ತಿ ತೀರಿಕೊಂಡೊಡನೆ ಆತನನ್ನು ಹೊಗಳಿ ಅಟ್ಟಕ್ಕೇರಿಸುವ ಅಗತ್ಯವಿಲ್ಲ; ಗುಣ, ಅವಗುಣ ಎರಡನ್ನೂ ಹೇಳಬಹುದು. ಖುಷ್‌ವಂತ್ ಕಾಲೇಜಿನಲ್ಲಿ ಅಷ್ಟು ಸರಿಯಾಗಿ ಓದದ, ಗಾಂಧಿಯಂತೆಯೇ ವಕೀಲರಾಗಿ ಯಶಸ್ವಿಯಾಗದ ಮನುಷ್ಯ, ಈತನ ತಂದೆ ದಿಲ್ಲಿಯಲ್ಲಿ ದೊಡ್ಡ ಕಾಂಟ್ರಾಕ್ಟರಾಗಿದ್ದು ಕೋಟಿಗಟ್ಟಲೆ ಗಳಿಸಿದವನು; ಈ ತಂದೆಯ ತರಹದ್ದೇ ಚಿತ್ರ ಖುಷ್‌ವಂತರ 'ದಿಲ್ಲಿ' ಕಾದಂಬರಿಯಲ್ಲಿ ಬರುತ್ತದೆ. ಚೆನ್ನಾಗಿ ತಿಂದು, ಉಂಡು ಕುಡಿದು, ಪ್ರೀತಿಸಿದ ವ್ಯಕ್ತಿ ಈತ; ಹಾಗೆಯೇ ಹಿಂದೂ-ಸಿಖ್-ಮುಸ್ಲಿಮರ ಸ್ನೇಹಕ್ಕೆ ಭಾರತದ ಇತರೇ ಎಲ್ಲ ಬುದ್ಧಿಜೀವಿಗಳಿಗಿಂತ ಹೆಚ್ಚು ಶ್ರಮಿಸಿದವರು.

ಈಗ ಬರೆಯುತ್ತಿರುವುದು ಏಕೆಂದರೆ, ಭಾರತದ ಎಲ್ಲ ಸಾಹಿತಿಗಳೂ ಹೆಮ್ಮೆ ಪಡಬೇಕಾದ ಪ್ರಸಂಗವೊಂದಗಿದೆ. ಖುಷ್‌ವಂತ್ ಈಚೆಗೆ ಬರೆದ 'ದಿಲ್ಲಿ' ಕಾದಂಬರಿಯ ಒಂದೂವರೆ ಲಕ್ಷ ಪ್ರತಿಗಳು ಖರ್ಚಾಗಿವೆ. ಅಂದರೆ ಅರ್ಥ, ಈ ಖುಷ್‌ವಂತ್‌ಗೆ ಕೇವಲ ಶೇಕಡ ಐದುಭಾಗ ಹಣ ಬಂದಿದ್ದರೂ ಈತನಿಗೆ ಹತ್ತು ಲಕ್ಷ ಸಂಭಾವನೆ ಬಂದಿದೆ. ಅದೊಂದು ಸುವರ್ಣವೃಷ್ಟಿ ಕುತೂಹಲಕರವೆಂದರೆ, ಇಂಗ್ಲಿಷ್ ಕಾದಂಬರಿಯಿಂದ ಈ ಸುವರ್ಣವೃಷ್ಟಿ... ಭಾರತದಲ್ಲಿ ಕರ್ನಾಟಕದಲ್ಲಿ ಪೂರ್ಣ ಸಾಕ್ಷರತೆ ಇದ್ದಿದ್ದರೆ ಇದು ಎಲ್ಲೆಲ್ಲೂ ಆಗುತ್ತಿತ್ತು. ಸಾಹಿತಿಯಾದವನು ಇವತ್ತಿಗೂ ತೀರಾ ಬಡವ. ಆದ್ದರಿಂದಲೇ ಖುಷ್‌ವಂತ್ ಪುಸ್ತಕದ ಬಗೆಗಿನ ಸುದ್ದಿ ರೋಮಾಂಚಕ.

ಪಕ್ಕಾ ಖಾಸಗಿ ಮಾತುಕತೆ



ಅಲ್ಲಾಹನೆಂಬ
ನಂಬಿಕೆಯೊಂದಿಗಿನ
ಅಪ್ರಜ್ಞೆಯಲ್ಲೂ ನೈತಿಕವಾಗಿ ಉಳಿವ
ಎಲ್ಲರಿಗೂ ಒಳ್ಳೆಯದನು ಬಯಸುವ ಅರ್ಥಪೂರ್ಣ ಹುಡುಗಿ
ನಿನ್ನ ಗಾಢ ಭಕ್ತಿ
ನನಗೊಂದು ತತ್ತಿಯ ಜೀವ ತರಿಸಿ
ಬೆಚ್ಚಗಿನ ಕಾವು ಕೊಡುತ್ತಿದೆ

ಆದರೆ ನಾನು
ಮನಸಿನ ಮರಳ ಹಾಸಿಗೆಯಲಿ
ತರಹೇವಾರಿ ವೇಷದ ಡಾಂಭಿಕ ಭಕ್ತಿಯ ಪದವಳಿಸಿ
ಸಹಜ ಮನುಷ್ಯ ಪ್ರೇಮದ ಚಿತ್ರಬಿಡಿಸಿ ಬಣ್ಣ ತುಂಬಿದ್ದೇನೆ
ಬುರುಖಾದೊಳಗಿನ ನಿನ್ನ ಅಂತಃಕರಣದ ಜೀವಪ್ರೀತಿಗೆ
ನಾನೀಗ
ನಿಜವಾದ ಫಕೀರನೆಂದು ಬೀಗುತ್ತಿದ್ದೇನೆ

ಎದುರುಬದುರಾಗಿ ಕುಳಿತು
'ಈ ಜಗತ್ತಿನಲ್ಲಿರುವುದು ನಾವಿಬ್ಬರೇ'
ಎಂಬುದನ್ನು ಮತ್ತೆ ಮತ್ತೆ ಖಾತರಿಪಡಿಸಿಕೊಳ್ಳಲೆತ್ನಿಸುವ
ಸಹಜೀವಿ ಟಿಂಟುಮೋಲ್
ಬೈಬಲ್ ಪಠಿಸುತ ಜೀಸಸ ರಕ್ಷೆಯ ಬೇಡುತ
ಮನಸು ಬಿಚ್ಚಿ ಕಣ್ಣು ಮುಚ್ಚಿ ಬ್ರಾಸ್ಲೆಟ್‌ಗೆ ಮುತ್ತಿಟ್ಟು
ಕೈಗಿತ್ತಳು ಅಂಗೈಯೆಲ್ಲಾ ಹಸಿಹಸಿ
ಶಿಲುಬೆಯ ನೆತ್ತರೊ? ಮುತ್ತಿನ ಘಮಲೋ?

ನನಗೆ ಮಾತು
ಬರುತ್ತದೆಂಬುದರ ಕುರಿತು ಅನುಮಾನ ಮೂಡುತ್ತಿದೆ
ಜಗಕೆ ಶಾಂತಿಯ ಜೀವಜಲವನುಣಿಸಿದ
ಏಸುವಿನ ಹೆಸರಿನಲಿ
ಸಹಸ್ರ ವರುಷಗಳಿಂದ
ಹರಿದ ಹರಿಯುತ್ತಿರುವ ಹರಿಯಲಿರುವ
ನೆತ್ತರಿನ ಲೆಕ್ಕವಿಡಲು ತಡಕಾಡುತ್ತೇನೆ
ಗಣಿತದಲ್ಲಿ ದಡ್ಡನೆಂಬುದು ಮತ್ತೆ ಮತ್ತೆ ಖಾತರಿಯಾಗಿದೆ

ನೆನಪಿನ ಕೂಪದಲಿ ಉರಿದುರಿದು ದಹಿಸಲೆಂದು
ಪಂಚಲೋಹದ ವಿಗ್ರಹವ ಬಿಟ್ಟುಹೋದ
ಜೋಯಿಸರ ಮಗಳು

ಪ್ರಪಾತದಲಿ ಗತಿಗೆಟ್ಟು ಅಲೆಯುತ್ತಿದ್ದವನಿಗೆ
ಭೂಮಿಯ ಮೇಲೆ ಕಾಲೂರಿ ನಿಲ್ಲುವುದ ಕಲಿಸಿದವಳು
ವಿಶಾಲ ಬಯಲಲಿ ಅನಂತತೆಯ ಅನುಭವಿಸಿ
ಅನುಭಾವದಲಿ ಒಬ್ಬರಿಗೊಬ್ಬರು
ಧ್ಯಾನಿಸಿಕೊಂಡದ್ದಿದೆ

ಆದರೆ ನಾನು
ಪರಪಂಚದ ಕದನಕೆ ವಿಗ್ರಹವೇ ಕಾರಣವೆಂದು
ಅನಾಮಿಕರಿಗೆ ಅಲಿಖಿತ ದೂರು ದಾಖಲಿಸಿದ್ದೇನೆ
ನಿತ್ರಾಣಗೊಂಡ ಹಸಿದ ದೇಹ ಸುಡುಗಾಡು ಹುಡುಕುತ್ತಿದ್ದಾಗ
ವಿಗ್ರಹ ಮಾರಿ ಹುರಿದ ಮಾಂಸ ತಿಂದೆ
ಬೀದಿಬದಿಯ ಬದುಕು ನನ್ನದೆಂದುಕೊಂಡು
ದಿನ ದೂಡುತ್ತಿದ್ದೇನೆ
ಕಲ್ಲುಮುಳ್ಳು ಹಾದಿಯಲಿ ಕಣ್ಣುಮುಚ್ಚಿಕೊಂಡು
ಅವುಡುಗಚ್ಚಿ ಸಹಿಸುತ ಆತುರದಿ ನಡೆದಿದ್ದೇನೆ

ಕಣ್ಣಿನಲಿ ವಿಗ್ರಹದ ಅಕರಾಳ ವಿಕರಾಳ ಕುಣಿತ
ತಲೆಯಲಿ ಅಲ್ಲಾಹನ ಅಕಾಲ ಚೀತ್ಕಾರ
ಎದೆಯಲಿ ಏಸುವಿನ ಬೇಗುದಿ
ಹೊತ್ತ ಅಲೆಮಾರಿಗೆ
ನಿತ್ಯವೂ ರೋಜಾ ಕ್ರಿಸ್‌ಮಸ್ ಟ್ರೀ ಕೃತಕ ಭಗವದ್ಗೀತೆ ಭಾರ.

■ ವೀರಣ್ಣ ಮಡಿವಾಳರ

ಅರವತ್ತು ರೂಪಾಯಿ ಕೂಲಿ ಕೆಲಸಕ್ಕೆ ಬಂದ ಸಿಟಿ ಪತ್ರಕರ್ತರು

Only in our dreams are we free,

The rest of the time we need wages ಎನ್ನುವ ತಮಾಷೆಯ ಮಾತೊಂದಿದೆ.

'ಬಿಡುವು' ಎಂಬ ಮೂರಕ್ಷರದ ಪದ ಕುರಿತು ಹೇಳಿರುವ ಮಾತಿದು. ನಮ್ಮ ಲಂಕೇಶ್ ಟೀಂನ ಬಹುತೇಕರಿಗೆ ಸಿಗದ ಈ ಅಮೂಲ್ಯವಾದ, ನಮ್ಮ ಪಾಲಿಗೆ ಅತೀ ಅಪರೂಪವಾದ ಬಿಡುವಿಗಾಗಿ ನಾವದೆಷ್ಟು ಹಂಬಲಿಸಿದ್ದೇವೊ ಏನೋ. ನಮ್ಮ ದಿನಚರಿಯಲ್ಲಿ ವಿಪರೀತ ಕೆಲಸ, ಸಾಕಷ್ಟು ಕೆಲಸಗಳಿರುವ ದಿನಗಳೇ ಜಾಸ್ತಿ, ಇದರಲ್ಲಿ ಸಾಕಷ್ಟು ಕೆಲಸಗಳಿರುವ ದಿನಗಳಲ್ಲೇ ಒಂದಷ್ಟು ಹೆಚ್ಚುಕಡಿಮೆ ಮಾಡಿಕೊಂಡು ಕೊಂಚ ಬಿಡುವು ಪಡೆಯುತ್ತಿರುತ್ತೇವೆ.

ಅಂತಲ್ಲೆಲ್ಲಾ ಬೆಂಗಳೂರು ಬಿಟ್ಟು ನನ್ನ ಊರು ಬಿಳಿದಾಳೆಗೆ ಓಡುವುದು ನನಗಿಷ್ಟ. ಅಲ್ಲಿ ನನಗೆ ಮೂರೆಕರೆ ಹೊಲವಿದೆ. ರಾಗಿ, ಕಡಲೇಕಾಯಿ ಬೆಳೆಯುತ್ತೇನೆ. ಕೊಂಚ ಜವುಗಿರುವ ಕಡೆ ಮುಂಡುಗ ಎನ್ನುವ ಕಪ್ಪುಸಹಿಂಪ್ಪು ಭತ್ತ ಚೆಲ್ಲಿ ಮನೆಗೊಂದಿಷ್ಟು ಅಕ್ಕಿ ಸಂಪಾದಿಸುವ ಗೀಳೂ ಇದೆ. ನಾನೊಂದು ಸಾರಿ ಹೊಲದಲ್ಲೇ ಒಂದು ಗುಡಿಸಲು ಕಟ್ಟಿಕೊಂಡರೆ ಹೇಗೆ ಎಂದು ಯೋಚಿಸಿದೆ. ಸರಿ, ಕೆಲಸ ಶುರುವಾಗೇ ಬಿಟ್ಟಿತು. ಕನಕಪುರದ ನನ್ನ ಕಲಾವಿದ ಮಿತ್ರ ಎಂ.ಸಿ. ನಾಗರಾಜ ಅದೇನೋ ಬಹುದೊಡ್ಡ **construction** ಎನ್ನುವಂತೆ ಬಂದು ಸ್ಥಳ ಪರಿಶೀಲನೆ ಮಾಡಿದ. ಗುಡ್ಲಿಗೆ ಸರಿ ಜಾಗ ಆರಿಸಿ, ಅಂದರೆ ಸುತ್ತಲಿನ ಬೆಟ್ಟ ಕಾಡು, ನಿತ್ಯ ಸೂರ್ಯನ ನಿರ್ಗಮನಗಳೆಲ್ಲಾ ಚೆನ್ನಾಗಿ ಕಾಣುವಂತೆ ಸ್ಥಳ ಆರಿಸಿದ. ಅವತ್ತಿನ ನಮ್ಮ ಪಾಲಿನ **architect** ಅವನೆ. ಕೆಲಸ ಮುಂದುವರೆದಂತೆ ಅರ್ಧ ದಿನ ಬಿಡುವು ಸಿಕ್ಕರೂ ನಾನು ಬಿಳಿದಾಳೆಗೆ ಓಡಿ ಹೋಗುತ್ತಿದ್ದದನ್ನು ನೋಡಿದ ನಮ್ಮ ಕ್ಯಾಪ್ಟನ್ ಗೌರಿ ಒಂದು ಸಾರಿ

"ಏನ್ ನಡೆಸಿದ್ದೀಯ ಊರಲ್ಲಿ!" ಅಂದರು.

ನಾನು ನನ್ನ ಗುಡಿಸಲರಮನೆ ವಿಚಾರ ಹೇಳಬೇಕಾಯಿತು. ಇಂತವೇ ತಿಕ್ಕಲುತನಗಳು ಗೌರಿಗೂ ಇಲ್ಲ ಅಂತಿಲ್ಲ, ನೆಲಮಂಗಲದ ಅವರ ಚಿಕ್ಕ ತೋಟದಲ್ಲಿ ಹಸು, ಕುರಿ ಸಾಕಾಣಿಕೆಯೇನು, ನಾಟಕೋಳಿ ತಂದು ಇರಿಸುವುದೇನು, ಬಾಳೆಯಿಂದ ಆರಂಭಿಸಿ ಹುರುಳಿ ಚೆಲ್ಲುವವರೆಗೂ ಸಹಜ ಕೃಷಿ ನಡೆಸುವುದೇನು, ಸೀಜನ್ನೇ ಅಲ್ಲದ ಕಾಲದಲ್ಲಿ ಕೈತುಂಬಾ ಕುಂಬಳ ಬೀಜ ತರಿಸಿ ನೆಟ್ಟು ಯಾಕೆ ಮೊಳಕೆನೇ ಬರಲಿಲ್ಲ ಅಂತ ಕೊರಗುವುದೇನು... ಇವೆಲ್ಲಾ ಒಂದಾ ಎರಡಾ ಕೃಷಿ ಚೇಷ್ಟೆಗಳು!


ಕ್ಷಮಿಸಿ, ಇದನ್ನು ತಮಾಷೆಗೊ ಇಲ್ಲಾ ಗೇಲಿಗೊ ಹೇಳಲಿಲ್ಲ, ವ್ಯವಸಾಯದ ಪ್ರೀತಿ ಅನ್ನೋದು ಎಷ್ಟು ಕಷ್ಟದ ನಷ್ಟದ ಬೇತಾಳ ಅಂತನಲು ಹೇಳಿದೆ ಅಷ್ಟೆ. ಇದರ ನಡುವೆ ನಮ್ಮ ಕ್ಯಾಪ್ಟನ್ ಕಳೆದ ಮೂರು ವರ್ಷದಲ್ಲಿ ಇದೇ ಮೊದಲ ಬಾರಿಗೆ ಅಡಿಕೆ ಮಾರಿ ಮೂರೂವರೆ ಸಾವಿರ ರೂಪಾಯಿ ಗಳಿಸಿದ್ದಾರೆ. ನುಸಿಪೀಡೆಯಿಂದ ಪೂರ್ತಿ ನಿತ್ರಾಣವಾಗಿದ್ದ ಅವರ ತೆಂಗಿನ ಗಿಡಗಳು ತಲಾ ನಾಲ್ಕಾರು ಗೊನೆ ಹೊತ್ತು ನಿಲ್ಲತೊಡಗಿದ್ದು ಅದರಿಂದಲೂ ಅಮೋಘ ಎಂಟು ಸಾವಿರ ರೂಪಾಯಿ ದುಡಿದಿದ್ದಾರೆ. ಆದರೆ ಏನೇನೂ ನೀರಿನ ಲಭ್ಯತೆಯಿರದ ನನಗೆ ಇಂಥ ಪ್ರಯೋಗ ನಡೆಸುವ ಭಾಗ್ಯವಿಲ್ಲ, ಇರಲಿ, ಅವತ್ತೊಂದಿನ ಆಫೀಸಲ್ಲಿ ನಾನು ನಾಳೆ ಬೆಳಗ್ಗೆ ಊರಿಗೆ ಹೋಗಿ ಬರ್ತೀನಿ ಅಂತ ಮಾಮೂಲಿ ಪ್ಲೇಟ್ ಹಾಕಿದೆ. ಅಂದಿಗೆ ಆ ಗುಡಿಸಿಲಿನ ಸಣ್ಣಪುಟ್ಟ ಇಟ್ಟಿಗೆ ಕೆಲಸ, ಸುಣ್ಣ-ಬಣ್ಣದ ಕೆಲಸ ಮಾತ್ರ ಬಾಕಿ ಉಳಿದಿತ್ತು, ಆದರೆ ಕೆಲಸಕ್ಕೆ ಬೇಕಾದ ಆಳುಗಳು ಸಿಕ್ಕಿರಲಿಲ್ಲ, ಇದನ್ನೆಲ್ಲಾ ಹರಟುತ್ತಾ ಕೂತಿದ್ದಾಗ ಗೌರಿ ಇದ್ದಕ್ಕಿದ್ದಂತೆ 'ನಾನೂ ನಿಮ್ಮ ಹಳ್ಳಿಗೆ ಬರಲಾ?' ಅಂದರು. ಅದೊಂತರಾ ಹೇಗಿತ್ತೆಂದರೆ 'ನಾನೂ ಜಾತ್ರೆಗೆ ಬರಲಾ, ನನ್ನೂ ಆಟಕ್ಕೆ ಸೇರಿಸ್ಕೊಂತೀರಾ' ಅನ್ನುವ ಸಣ್ಣಮಕ್ಕಳ ಭಾವ. ಕೂಲಿಯಾಳುಗಳನ್ನು ಎಲ್ಲಿಂದ ಕರೆತರುವುದೆಂದು ತಲೆ ಕೆಡಿಸಿಕೊಂಡಿದ್ದ ನಾನು "ಆಗಲಿ, ಬನ್ನಿ, ಆದ್ರೆ ಬಂದು ಕೂಲಿ ಕೆಲಸ ಮಾಡಬೇಕು' ಅಂತ ಪರತ್ತಾಕಿದೆ. ಈ ಮಾತು ಕೇಳಿಸಿಕೊಂಡ ಗೆಳೆಯರ ಬೆಕ್ಕಸಬೆರಗಿನ ನಡುವೆ ಗೌರಿ 'ಓ.ಕೆ. ನಾನು ರೆಡಿ. ಕೂಲಿ ಎಷ್ಟು' ಅಂತನ್ನಬೇಕೆ?


ನಮ್ಮೂರಿನಲ್ಲಿ ಆಗ ಗಂಡಾಳಿಗೆ ಅರವತ್ತು ಹೆಣ್ಣಾಳಿಗೆ ನಲವತ್ತು ರೂಪಾಯಿ ಕೂಲಿಯಿತ್ತು, ಆದರೇನು, ಗೌರಿ ಸ್ತ್ರೀ ಸಮಾನತಾವಾದಿ ಯಾದ್ದರಿಂದ ಅವರ ದಿನಗೂಲಿಯಾಗಿ ಅರವತ್ತು ರೂಪಾಯಿ ಕೊಡಲು ನಾನೂ ಒಪ್ಪಿಕೊಂಡೆ..

One enjoys true leisure who has time to improve their soul's estate ಎಂದಿದ್ದ ಹೆನ್ರಿ ಥೋರೋನಿನ ಮಾತು ನೆನೆದುಕೊಳ್ಳುತ್ತಾ,

ಅವತ್ತಿನ ಕೂಲಿ ಕೆಲಸಕ್ಕೆ, ಕಲಾವಿದ ಎಂ.ಸಿ. ನಾಗರಾಜನೂ ಬರಲೊಪ್ಪಿಕೊಂಡ. ಆದರೆ ನನಗೆ ಈ ಸಿಟಿ ಕೂಲಿಗಳನ್ನು ಕಾರಿನಲ್ಲಿ ಕರೆದುಕೊಂಡು ಬಿಳಿದಾಳೆಗೆ ಹೋಗಬೇಕಾಗಿ ಬಂತಷ್ಟೇ.

ನಿತ್ಯ ಜೀವನದ ಹಲವು ಸವಲತ್ತುಗಳಿಗೆ ಒಗ್ಗಿಹೋಗಿರುವ ವ್ಯಕ್ತಿಯೊಬ್ಬ ಭಿನ್ನ ಪರಿಸರಕ್ಕೆ **expose** ಆದೇಟಿಗೆ ಕಿರಿಕಿರಿ ಮಾಡಿಕೊಳ್ಳುವುದನ್ನು ನಾನು ಬೇಕಾದಷ್ಟು ಸಾರಿ ನೋಡಿದ್ದೇನೆ. ಈಗ ಒಂದು ವಿಭಿನ್ನ ಅನುಭವಕ್ಕಾಗಿ, ದೇಹ ದಂಡಿಸಿ, ಬಿಸಿಲಲ್ಲಿ ಕೆಲಸ ಮಾಡಿ ಕೇವಲ ಅರವತ್ತು ರೂಪಾಯಿ ದುಡಿಯಲು ಬರುತ್ತಿರುವ, ತಿಂಗಳಿಗೆ ತಾನೇ ಒಂದೂವರೆ ಲಕ್ಷದಷ್ಟು ಸಂಬಳ ವಿತರಿಸುವ ಗೌರಿ ಎಂಬ ಕೂಲಿಯಾಳನ್ನು ಹೇಗಪ್ಪಾ ನಿಭಾಯಿಸುವುದು ಅಂದುಕೊಳ್ಳುತ್ತಾ ಇದ್ದೆ ನಾನು.


ಆರ್ಟಿಸ್ಟ್ ಎಂ.ಸಿ., ಗೌರಿ ಮತ್ತು ಈಶ


ಕುಟೀರಕ್ಕೆ ಪೈಂಟಿಂಗ್ ಪ್ರಯೋಗದಲ್ಲಿ ಗೌರಿ ಮತ್ತು ಮಧು

ಹಾಗೆ ನೋಡಿದರೆ ನನಗೀ ವಿಚಾರ ಹೊಸದೇನಾಗಿರಲಿಲ್ಲ, ಈಗೊಂದು ಹತ್ತು ವರ್ಷಗಳ ಹಿಂದೆ ನಮ್ಮ ಮಾರ್ಕ್ಸಿಸ್ಟ್ ಬಳಗದೊಳಗೆ ಒಬ್ಬ ಶ್ರೀಮಂತ ಯುವಕ ಬಂದಿದ್ದ. ಅಂಥವರ ಕಾಳಜಿಗಳ ಬಗ್ಗೆ ಗೆಳೆಯರಿಗೆ ಅನುಮಾನಗಳಿರುತ್ತಿರಲಿಲ್ಲವಾದರೂ ಅವರ ಕಷ್ಟ ಸಹಿಷ್ಣುತೆಯ ಮಟ್ಟ ಎಷ್ಟು ಎಂಬ ಪ್ರಶ್ನೆ ಬರುತ್ತಿತ್ತು. ಕಟ್ಟಾ ಮಾರ್ಕ್ಸ್‌ವಾದಿಗಳಾದವರು ಅಂತವರಿಗೆ 'ನೀವು ಮೊದಲು **declassify** ಆಗಬೇಕು' ಎಂಬ ಉಪದೇಶ ನೀಡುವುದೂ ಇರುತ್ತಿತ್ತು. ಅದೀಗಲೂ ಇದೆ ಬಿಡಿ. ಆದರೆ ಆ ಗೆಳೆಯ ಎಂಥ ಹಠವಾದಿ ಎಂದರೆ ತಾನು ಪ್ರಾಮಾಣಿಕ ಮಾರ್ಕ್ಸ್‌ವಾದಿ ಆಗಬೇಕೆಂದರೆ ಬಡಕೂಲಿ ಜನರ ಬದುಕನ್ನೂ ಅನುಭವಿಸಿ ಬರಬೇಕೆಂದು ಸೀದಾ ಮಂಗಳೂರಿನ ಡಾಕ್‌ಯಾರ್ಡಿಗೆ ಹೋಗಿ ಕೆಲಕಾಲ ಅಲ್ಲಿ ಕೂಲಿಯಾಗಿ ದುಡಿದು ಬಂದಿದ್ದ.

ಇಂತದ್ದನ್ನು ಅತಿರೇಕ ಅಂತ ಭಾವಿಸುವ ಅಗತ್ಯವಿಲ್ಲ ಅಷ್ಟೆ. ಅವತ್ತು ನಮ್ಮೂರಿನಲ್ಲಿ ಈ ಸಿಟಿ ಕೂಲಿಗಳಾದ ಗೌರಿ ಹಾಗೂ ಎಂಸಿ ನನಗೇನೂ ಮೋಸ ಮಾಡದೇ ನಿಯತ್ತಾಗಿ ಬೆಳಗಿನಿಂದ ಸಂಜೆ ಆರರವರೆಗೂ ಬಿಟ್ಟೂಬಿಡದೆ ಕೆಲಸ ಮಾಡಿಕೊಟ್ಟರು. ಅವರ ತಂಡದಲ್ಲಿ ಸ್ಥಳೀಯ ಬುಡಕಟ್ಟಿನ, ಕಾಡು ಪೂಜಾರಿಗರಾದ ತನ್ನಳ್ಳಿ, ಶಿಕಾರಿ ಶಿವ, ಮಧು ಇದ್ದರು. ಎತ್ತ ಎನ್ನುವ ಮೈಗಳ್ಳ ಹುಡುಗನೂ, ಮೈಗಳ್ಳತನ ಗೊತ್ತಿರದ ನಾನೂ ಇದ್ದೆ. ಬರೆದರೆ ಈ ಎತ್ತನದೇ ಒಂದು ತಮಾಷೆಯ ಕಥನ.

ಬಿಡಿ ಚಿತ್ರಗಳು

• ಈಶ

ಇಲ್ಲಿ ನಿಮಗೆ ಇನ್ನೊಂದು ವಿಚಾರ ಹೇಳಬೇಕು. ಅವತ್ತು ಮಧ್ಯಾಹ್ನದ ನಂತರ ಈ ಸಿಟಿ ಕೂಲಿಗಳು ಗೋಡೆಗೆ ಸುಣ್ಣ-ಬಣ್ಣ ಹಚ್ಚುವ ಕೆಲಸ ಮಾಡಿದರು. ಬಣ್ಣ ಅಂತಾ ನಾವು ರೆಡಿ ಮಾಡಿಟ್ಟುಕೊಂಡಿದ್ದು, ಕುರಿ ಹಿಕ್ಕೆ ಕಲಸಿ ಮಾಡಿಕೊಂಡಿದ್ದ ಒಂದು ವಿಧದ ದ್ರಾವಕ. 17-18ನೇ ಶತಮಾನದಲ್ಲಿ ನೇಕಾರಿಕೆಯಲ್ಲಿ ತೊಡಗಿದ್ದ ಹಳೇ ಮೈಸೂರಿನ ಹೊಲೆಯರು ಬಟ್ಟೆಗಳಿಗೆ ಬಣ್ಣ ಕೊಡಲು ಕುರಿ ಹಿಕ್ಕೆ ಬಳಸುತ್ತಿದ್ದುದನ್ನು ಎಲ್ಲೋ ಓದಿದ್ದ ನಾವು ಅದೇ ಫಾರ್ಮುಲಾ ಬಳಸಿ ಗೋಡೆ ಬಣ್ಣ ಮಾಡಿದ್ದೆವು. ಆ ಬಣ್ಣ ಗೋಡೆಗಳಿಗೆ ಎಷ್ಟು ಚೆನ್ನಾಗಿ ಹೊಂದಿಕೊಂಡಿತ್ತೆಂದರೆ "ಇಟ್ಟರೆ ಹಿಕ್ಕೆಯಾದೆ, ಬಳಿದರೆ ಪೈಂಟ್ ಆದೆ, ತಿಂದರೆ ಮಟನ್ನೂ ಆದೆ, ನೀನಾರಿಗಾದೆಯೋ ..." ಅಂದುಕೊಂಡು ನಗಾಡಿದೆವು.

ಕೆಲಸ ಮುಗಿದು ಕತ್ತಲಾವರಿಸುತ್ತಿದ್ದಂತೆ ನನ್ನ ಕಿರಿಯ ಗೆಳೆಯರಾದ ವಿಜಿ, ನಿರಂಜನ, ಕುಮಾರಸ್ವಾಮಿ ಜೊತೆ ಅದೇ ಗುಡಿಸಲಿನೆದಿರು **bon fire** ಹಾಕಿಕೊಂಡು ನಾವೆಲ್ಲಾ ಕೂತು ನಡುರಾತ್ರಿಯವರೆಗೂ ಹರಟುತ್ತಿದ್ದಾಗ 'ಆಹಾ.... ಈ ಬಿಡುವು ಎಷ್ಟು ಚೆನ್ನ' ಅನ್ನಿಸಿದ್ದು ಸುಳ್ಳಲ್ಲ, ಇಪ್ಪತ್ತೈದರ ಆಸುಪಾಸಿನ ಈ ಯುವ ಮಿತ್ರರ ಪೈಕಿ ವಿಜಿ ತಾನು ಓದಿದ ಹರ್ಮನ್ ಮೆಲ್‌ವಿಲ್ಲೆಯ ಲೋಕವಿಖ್ಯಾತ ಕಾದಂಬರಿ 'ಮೋಬಿಡಿಕ್' ಬಗ್ಗೆ ಏನೇನೊ ಮಾತಾಡಿದ. ನಿರಂಜನ ಮೂಲತಃ ನಶ್ವರವಾದಿ, ಕುಮಾರಸ್ವಾಮಿ ವ್ಯವಹಾರಿಕ ಬುದ್ಧಿಯಿರುವ ಕಷ್ಟಪಡುವ ತರುಣ. ಪರಿಚಿತ ಶಿಕಾರಿ ಶಿವ ಒಂಥರಾ ಕಾಡಿನ ಮಗನಿದ್ದಂತೆ. ಆ ರಾತ್ರಿ ನಮ್ಮ ಗುಡಿಸಲಿನೆದುರಿನ ಕುರುಚಲು ಕಾಡಿನಲ್ಲಿ ಕಾಡು ಮೊಲ ಹುಡುಕಿಕೊಂಡು ಓಡಾಡುತ್ತಿದ್ದ ಅವನ ಚಲನವಲನ ತಲೆಗೆ ಕಟ್ಟಿಕೊಂಡಿದ್ದ ಬ್ಯಾಟರಿ ಬೆಳಕಿನಿಂದ ಗೋಚರಿಸುತ್ತಿತ್ತು.

ನೆತ್ತಿಯ ಮೇಲೆ ಆ ರಾತ್ರಿಯ ನೀರವತೆಯಲ್ಲಿ ಚೆನ್ನೈ, ಕೇರಳದತ್ತ ಹೊರಟ ವಿಮಾನಗಳ ಮ್ಮ್ಂoooo... ಸದ್ದು. ನಮ್ಮ ಮಾತು ಮಂಗಳನ ಮೇಲೆ ಇಳಿದಿದ್ದ ಫಿನಿಕ್ಸ್‌ನಿಂದ ಹಿಡಿದು ಬೆಂಗಳೂರಿನ ಕ್ಷುದ್ರ ವಿಚಾರಗಳವರೆಗೂ ಎಡೆತಾಕುತ್ತಿತ್ತು.

ಈ ಬಿಡುವಿನ ಬೆಲೆ ಬರೀ ಅರವತ್ತು ರೂಪಾಯಿ ಅನ್ನಲಾದೀತೆ? ■

ಜನಪರ ಚಳವಳಿಗಳ ದಮನವನ್ನು ವಿರೋಧಿಸಿ

ಹೊಗಳಿಕೆ / ತೆಗಳಿಕೆ

ಶಿವಮೊಗ್ಗದಲ್ಲಿ ನಡೆಯುತ್ತಿದ್ದಂತಹ ಅನೇಕ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದ ಜಗನ್ನಾಥ್‌ರವರನ್ನು ಸುಳ್ಳು ಆರೋಪಗಳಡಿ ಪೊಲೀಸರು ಬಂಧಿಸಿದ್ದಾರೆ. ಬಂಧಿಸಿ 24 ಗಂಟೆಗಳೊಳಗಾಗಿ ಕೋರ್ಟ್‌ಗೆ ಹಾಜರು ಪಡಿಸಬೇಕೆಂಬ ಕಾಯ್ದೆಗಳಿದ್ದಾಗ್ಯೂ ಅವೆಲ್ಲವನ್ನೂ ಗಾಳಿಗೆ ತೂರಿ ಅವರನ್ನು 5-6 ದಿನ ತಮ್ಮ ವಶದಲ್ಲಿಟ್ಟುಕೊಂಡು ಅವರಿಗೆ ನಾನಾ ರೀತಿಯ ಚಿತ್ರಹಿಂಸೆಗಳನ್ನು ನೀಡಿದ್ದಾರೆ. ಅಷ್ಟೇ ಅಲ್ಲ, ತಾವೇ ಸೃಷ್ಟಿಸಿದ ಸುಳ್ಳು ಕತೆಗಳನ್ನು ಒಪ್ಪಿಕೊಳ್ಳುವಂತೆ ಮಾಡಿರುತ್ತಾರೆ. ಇದೇ ಸುಳ್ಳು ಆರೋಪದಡಿ ಮಹಿಳಾ ಜಾಗೃತಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಅನಿತರವರನ್ನು 2ನೇ ಆರೋಪಿಯನ್ನಾಗಿಸಿ ಎಫ್‌ಐಆರ್ ದಾಖಲಿಸಿರುತ್ತಾರೆ. ಇದು ಜನರ ಚಳವಳಿಯನ್ನು ಹತ್ತಿಕ್ಕುವ ಫ್ಯಾಸಿಸ್ಟ್ ನೀತಿಯ ಕ್ರಮವಾಗಿದೆ. ಸರ್ಕಾರ ಮತ್ತು ಪೊಲೀಸರ ಈ ದುಷ್ಕೃತ್ಯವನ್ನು ಮಹಿಳಾ ಜಾಗೃತಿ ಸಂಘಟನೆಯು ತೀವ್ರವಾಗಿ ಖಂಡಿಸುತ್ತದೆ.

ಅನಿತರವರು ಎಂ.ಎ. ಪದವೀಧರರಾಗಿದ್ದು, ಈಗ ಪ್ರಥಮ ವರ್ಷದ ಕಾನೂನು ಅಭ್ಯಾಸದ ವಿದ್ಯಾರ್ಥಿನಿಯಾಗಿರುತ್ತಾರೆ. ವಿವಿಧ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಾ ಕುಟುಂಬದವರೊಂದಿಗಿದ್ದುಕೊಂಡೇ ಕಳೆದ 8-10 ವರ್ಷಗಳಿಂದ ಮಹಿಳಾ ಜಾಗೃತಿಯೂ ಸೇರಿದಂತೆ ರೈತ, ದಲಿತ ಸಂಘಟನೆಗಳ ಹೋರಾಟಗಳಲ್ಲಿ, ಕೋಮು ಸೌಹಾರ್ದದ ಚಳವಳಿಗಳಲ್ಲಿ, ಪರಿಸರ ರಕ್ಷಣೆಯ ಹೋರಾಟಗಳಲ್ಲಿ ಆದಿವಾಸಿ ಗಿರಿಜನರ ಹೋರಾಟಗಳಲ್ಲಿ ಇತ್ತೀಚಿನ ಮಲೆನಾಡು-ಕರಾವಳಿ ಉಳಿಸಿ ಭೂ ಹೋರಾಟ ವೇದಿಕೆಯ ಹೋರಾಟಗಳಲ್ಲಿ ಸಕ್ರಿಯವಾಗಿ, ಮುಂಚೂಣಿಸ್ಥಾನವನ್ನು ವಹಿಸಿಕೊಂಡು ಜಿಲ್ಲೆ ಹಾಗೂ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ. ಈ ಎಲ್ಲಾ ಹೋರಾಟಗಳು ಸರ್ಕಾರ/ಪೊಲೀಸ್ ಹೇಳುವಂತಹ ಸಂವಿಧಾನಾತ್ಮಕ ಕಾನೂನು ಚೌಕಟ್ಟನದಿಯಲ್ಲಿಯೇ ನಡೆದುಕೊಂಡು ಬಂದಿರುವಂಥದ್ದಾಗಿವೆ.

ವಾಸ್ತವದಲ್ಲಿ ಬಿಜೆಪಿ ಸರ್ಕಾರ ಮಹಿಳೆಯರು, ರೈತರು, ದಲಿತರು, ಆದಿವಾಸಿಗಳ ಮೇಲಿನ ದೌರ್ಜನ್ಯವನ್ನು, ಜಾತಿ ಶೋಷಣೆಯನ್ನು, ವಿದೇಶಿ ಕಂಪನಿಗಳ ಲೂಟಿಯನ್ನು ಸರಾಗವಾಗಿ ಮುಂದುವರೆಸಿಕೊಂಡು ಹೋಗಲು ಯಾವ ಅಡ್ಡಿ ಆತಂಕ ಬರಬಾರದೆಂಬ ದುರುದ್ದೇಶದಿಂದಲೇ ಪ್ರಗತಿಪರ, ಜನಪರ ಹೋರಾಟಗಾರರ ಮೇಲೆ ಈ ರೀತಿಯ ಸುಳ್ಳು ಆರೋಪಗಳು, ಫ್ಯಾಸಿಸ್ಟ್ ಕ್ರಮಗಳನ್ನು ಜಾರಿಗೊಳಿಸುತ್ತಿದೆ. ಇದು ಸರ್ಕಾರಗಳ ಪ್ರಜಾಪ್ರಭುತ್ವ ವ್ಯವಸ್ಥೆಯೆಂದು ಕೊಚ್ಚಿಕೊಳ್ಳುತ್ತಲೇ ಅಪ್ರಜಾತಾಂತ್ರಿಕವಾಗಿ ನಡೆದುಕೊಳ್ಳುವುದಕ್ಕೆ ಹಿಡಿದ ಕನ್ನಡಿಯಾಗಿದೆ.

2005 ರಲ್ಲಿಯೂ ಮಹಿಳಾ ಜಾಗೃತಿ ಸಂಘಟನೆಯ ಕಾರ್ಯಕರ್ತೆಯರ ಮೇಲೆ ಬೆಂಗಳೂರಿನ ಅರುಣಾ ಎಂಬ ಬಾಲಕಿಯನ್ನು ಅಪಹರಿಸಿ, ರಾಜದ್ರೋಹದ ಕೆಲಸಗಳನ್ನು ಮಾಡುತ್ತಿದ್ದಾರೆಂಬ ಸುಳ್ಳು ಆರೋಪವನ್ನು ಹೊರಿಸಿದ್ದರು. ಈ ಪ್ರಕರಣವನ್ನು ವಿಚಾರಣೆ ನಡೆಸಿದ ಶಿವಮೊಗ್ಗದ ನ್ಯಾಯಾಲಯವು ಕಳೆದ ಆಗಸ್ಟ್ 27 ರಂದು ಪೊಲೀಸರು ಸಂಘಟನೆಯ ಮೇಲೆ ಹೊರಿಸಿದ್ದ ಆರೋಪಗಳೆಲ್ಲವೂ ಸುಳ್ಳೆಂದು ತೀರ್ಪಿತ್ತಿದೆ. ಅರುಣಾ ಪ್ರಕರಣದಲ್ಲಿ ಇಷ್ಟೆಲ್ಲಾ ಮುಖಭಂಗವನ್ನು ಅನುಭವಿಸಿದ ಪೊಲೀಸರು ನಾಡಿನ ಜನತೆಯೆದುರು ತಲೆತಗ್ಗಿಸಬೇಕಾಯಿತು. ಇದರಿಂದ ಪಾಠ ಕಲಿಯದೆ ಪುನಃ ಅದೇ ರೀತಿಯಲ್ಲಿ ಬೇಕೆಂತಲೇ ತಮ್ಮ ಕುತಂತ್ರ ಹಾಗೂ ಫ್ಯಾಸಿಸ್ಟ್ ನೀತಿಯನ್ನು ಮುಂದುವರೆಸುವ ಭಾಗವಾಗಿ ಜಗನ್ನಾಥ್‌ರವರ ಮೇಲೆ ಹೊರಿಸಲಾಗಿರುವ ಸುಳ್ಳು ಆರೋಪದೊಂದಿಗೆ ಸಂಘಟನೆಯ ಅನಿತಾರವರ ಮೇಲೆಯೂ ಸುಳ್ಳು ಆರೋಪದ ಎಫ್‌ಐಆರ್‌ನ್ನು ತಯಾರಿಸಿದ್ದಾರೆ.

ಸರ್ಕಾರ ಮತ್ತು ಪೊಲೀಸರ ಈ ದುಷ್ಕೃತ್ಯವನ್ನು ನಾಡಿನ ಪ್ರಗತಿಪರ ಸಂಘಟನೆಗಳು, ಮಹಿಳೆಯರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ರೈತರು, ಕಾರ್ಮಿಕರು, ಮಾಧ್ಯಮ ಮಿತ್ರರು, ಪ್ರಜ್ಞಾವಂತ ನಾಗರಿಕರೆಲ್ಲರೂ ಖಂಡಿಸಬೇಕಾಗಿದೆ.


-ಸುಭದ್ರಮ್ಮ, ಮಹಿಳಾ ಜಾಗೃತಿ ವೇದಿಕೆ, ಶಿವಮೊಗ್ಗ

ಹಿಂದೂ ಧರ್ಮ, ಸಂಸ್ಕೃತಿಯ ಉಳಿವಿಗಾಗಿ 'ಮತಾಂತರ ನಿಷೇಧ' ಅವಶ್ಯ ಎಂದು ನಾನು ಭಾವಿಸುವುದಿಲ್ಲ. ಹೊರಸಂಸ್ಕೃತಿಗಳಾಗಲೀ, ಧರ್ಮಗಳಾಗಲೀ ಭಾರತಕ್ಕೆ ಬಂದು, ನೆಲೆ ಕಂಡು ಬೇರು ಬಿಟ್ಟಿದ್ದು ಇತ್ತೀಚಿನ ವಿದ್ಯಮಾನವಲ್ಲ, ಅದು ಈ ನೆಲದಷ್ಟೇ ಹಳೆಯದು. ಅಂತಹ ಎಲ್ಲ ಹೊರೊತ್ತಡಗಳನ್ನು ನುಂಗಿ ಒಳಗಿಟ್ಟುಕೊಂಡು ಅರಳಿರುವುದೇ ಈಗ ನಾವು ಕಾಣುತ್ತಿರುವ 'ಭಾರತೀಯ ಸಂಸ್ಕೃತಿ'. ಈ ನೆಲಕ್ಕೆ ಅನನ್ಯ ಎನಿಸುವ ಒಂದು **absorbing capacity** ಇದೆ ಎಂಬುದನ್ನು ಎಲ್ಲ ಚಿಂತಕರೂ ಗುರುತಿಸಿದ್ದಾರೆ.

ಈ ಸಂಸ್ಕೃತಿಗೆ ಈಗ ಅಪಾಯವೇನಾದರೂ ಬಂದೊದಗಿದ್ದರೆ ಅದು ಔದ್ಯಮೀಕರಣದಿಂದ ಹುಟ್ಟಿದ ಪಶ್ಚಿಮದ **materialist** ಸಂಸ್ಕೃತಿಯಿಂದಲೇ ಹೊರತು ಕ್ರೈಸ್ತ ಮಿಶನರಿಗಳಿಂದಲ್ಲ. ಸತ್ವಯುತವಾದದ್ದು ಉಳಿದೇ ಉಳಿಯುತ್ತದೆ. ಸತ್ವಹೀನವಾಗಿ ಮುಳುಗತೊಡಗಿದ್ದನ್ನು ಯಾವ ಕೇಸರೀಕರಣ, ತ್ರಿಶೂಲೀಕರಣಗಳೂ ಮೇಲೆತ್ತಲಾರವು.

ಈ ಧರ್ಮ-ದೇಶ ಉದ್ಧಾರವಾಗಬೇಕಿದ್ದರೆ ಜಾತಿಪದ್ಧತಿ ಮೊದಲು ತೊಲಗಬೇಕಿದೆ. ಮತ್ತೊಂದು 'ಕಲ್ಯಾಣಕ್ರಾಂತಿ' ಆಗಬೇಕಿದೆ. ಎಡ-ಬಲ ಪಂಥೀಯರ ಪರಸ್ಪರ ಕೆಸರೆರಚುವ ಆಟ ಸದ್ಯದ ರೋಚಕ ಮೋಜು ಆಗಬಹುದೇ ಹೊರತು ಅದರಿಂದ ಒಟ್ಟಾರೆ ಸಮಾಜಕ್ಕೆ ಯಾವ ಪ್ರಯೋಜನವೂ ಇಲ್ಲ.

-ಡಾ. ಅನುಪಮಾ. ಎಚ್. ಎಸ್. ಹೊನ್ನಾವರ




ಆಂಧ್ರದ ರಾಜಕೀಯದಲ್ಲಿ ಸ್ಟಾರ್‌ವಾರ್



ಆಂಧ್ರ ಪ್ರದೇಶದ ರಾಜಕಾರಣ ದೊಡ್ಡ ಮಟ್ಟದ ಸ್ಟಾರ್‌ವಾರ್‌ಗೆ ಸಜ್ಜಾಗುತ್ತಿದೆ.

ಕಳೆದ ಆಗಸ್ಟ್‌ನಲ್ಲಿ ತಿರುಪತಿಯಲ್ಲಿ ಭಾರೀ ಜನಸ್ತೋಮದ ಮಧ್ಯೆ ಮೆಗಾ ಸ್ಟಾರ್ ಚಿರಂಜೀವಿ ತನ್ನ 'ಪ್ರಜಾ ರಾಜ್ಯಂ' ಪಕ್ಷವನ್ನು ಸ್ಥಾಪಿಸಿ ರಾಜಕೀಯಕ್ಕೆ ಆರಂಗೇಟ್ರಂ ಮಾಡಿದ ನಂತರ ಆಂಧ್ರದ ಇತರೆ ರಾಜಕೀಯ ಪಕ್ಷಗಳು ತತ್ತರಿಸಿದ್ದವು. ಕಳೆದ ನಾಲ್ಕೂವರೆ ವರ್ಷಗಳಿಂದ ಯಾವುದೇ ಅಡೆತಡೆಗಳಿಗೂ ಅಂಜದೆ ಆಂಧ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್‌ನ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಗೆ ಒಳ್ಳೆ ನಡುಕ ಉಂಟಾಗಿತ್ತು. ಇನ್ನು ತೆಲುಗು ದೇಶಂನ ಚಂದ್ರಬಾಬು ನಾಯ್ಡು ಕೂಡ ಚಿರಂಜೀವಿಯ ಅಲೆಗೆ ಬೆದರಿ ಥಂಡಾ ಹೊಡೆದಿದ್ದರು.



ವೈ.ಎಸ್. ರಾಜಶೇಖರರೆಡ್ಡಿ

ಆದರೆ ಈಗ ಆ ಪಕ್ಷಗಳು ಚೇತರಿಸಿಕೊಂಡು ಚಿರಂಜೀವಿಯ 'ಸ್ಟಾರ್ ಅಲೆ' ವಿರುದ್ಧ ತಮ್ಮದೇ ಆದ 'ಸ್ಟಾರ್ ಪವರ್' ಅನ್ನು ಮೆರೆಯಲು ಸಿದ್ಧತೆ ನಡೆಸಿವೆ.

ನಾಯ್ಡು ಫ್ಯಾಮಿಲಿ ಡ್ರಾಮಾ!

ಚಿರಂಜೀವಿಯಂಥ ಸೂಪರ್ ಸ್ಟಾರ್ ರಾಜಕಾರಣಕ್ಕೆ ಬಂದದ್ದು ಎನ್‌ಟಿಆರ್ ಫ್ಯಾಮಿಲಿಗೆ ನುಂಗಲಾರದ ತುತ್ತಾಗಿತ್ತು. ತಕ್ಷಣ ಎಚ್ಚೆತ್ತುಕೊಂಡ ಚಂದ್ರಬಾಬು ನಾಯ್ಡು ಕೌಟುಂಬಿಕ ಕಲಹದಿಂದ ದಿಕ್ಕಾಪಾಲಾಗಿದ್ದ ಎನ್‌ಟಿಆರ್ ಕುಟುಂಬದವರನ್ನೆಲ್ಲಾ ಕರೆ ತಂದು ಒಂದೆಡೆ ಗುಡ್ಡೆಹಾಕತೊಡಗಿದ್ದಾರೆ. ಮೊದಲು ಎನ್‌ಟಿಆರ್ ಅವರ ಪುತ್ರ ಹರಿಕೃಷ್ಣ ಅವರನ್ನು ರಾಜ್ಯ ಸಭೆಗೆ ಕಳುಹಿಸಿದ ಬಾಬು ಆನಂತರ ಆತನನ್ನು ತಮ್ಮ ಪಕ್ಷದ ಪೊಲಿಟ್‌ಬ್ಯೂರೋದ ಸದಸ್ಯರನ್ನಾಗಿಸಿದ್ದಾರೆ. ಎನ್‌ಟಿಆರ್ ಅವರ ಮತ್ತೋರ್ವ ಪುತ್ರ ಮತ್ತು ಜನಪ್ರಿಯ ನಟ ಬಾಲಕೃಷ್ಣ ಅವರನ್ನೂ ಒಲೈಸಿ ತಮ್ಮ ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ. [illegible] ಹೇಗಿದ್ದರೂ ತನ್ನ ಮಗಳನ್ನು ಬಾಬು ಅವರ ಮಗನಿಗೆ ಕೊಟ್ಟಿರುವುದರಿಂದ ಇದು ಒಂದು ದೃಷ್ಟಿಯಲ್ಲಿ ಅನಿವಾರ್ಯ ಆಯ್ಕೆ ಕೂಡ.

ಈ ಮಧ್ಯೆ ಹರಿಕೃಷ್ಣ ಅವರ ಪುತ್ರ ತಾರಕಾ ರತ್ನ ಮತ್ತು ಬಾಲಕೃಷ್ಣ ಅವರ ಪುತ್ರ ಕಲ್ಯಾಣ ರಾಮ ಕೂಡ ತೆಲುಗು ದೇಶಂ ಪರ ನಿಂತಿದ್ದಾರೆ. ಆದರೆ ಹರಿಕೃಷ್ಣ ಅವರು ಮತ್ತೋರ್ವ ಪುತ್ರ ಮತ್ತು ಜನಪ್ರಿಯ ನಟ 'ಜೂನಿಯರ್' ಎನ್‌ಟಿಆರ್ ಮಾತ್ರ ಸ್ವಲ್ಪ ತಕರಾರು ಎತ್ತಿದ್ದಾನೆ. ಬರುವ ಚುನಾವಣೆಯಲ್ಲಿ ಚಿತ್ರ ನಿರ್ಮಾಪಕನಾದ ತನ್ನ ಮಿತ್ರನೊಬ್ಬನಿಗೆ ಗಣ್ಣಾವರಂ ಕ್ಷೇತ್ರದ ಟಿಕೆಟ್ ಕೊಟ್ಟರೆ ಮಾತ್ರ ತನ್ನ ಬೆಂಬಲ ಎನ್ನುತ್ತಿದ್ದಾನೆ. ಆತನ ಚಿಕ್ಕಪ್ಪ ಬಾಲಕೃಷ್ಣ ದೂಡ ಅದೇ ಟಿಕೆಟ್‌ಅನ್ನು ತನ್ನ ಮಿತ್ರನೊಬ್ಬನಿಗೆ ಕೇಳುತ್ತಿರುವುದರಿಂದ ಬಾಬು ಬಿಕ್ಕಟ್ಟಿನಲ್ಲಿದ್ದಾರೆ. ಆದರೆ ಪಕ್ಷದ ನಾಯಕರ ಪ್ರಕಾರ ಈ ಸಮಸ್ಯೆಯನ್ನು ಸದ್ಯದಲ್ಲೇ ನಿವಾರಿಸಿಕೊಳ್ಳಲಾಗುತ್ತದೆಯಂತೆ.

ಇದೆಲ್ಲದರೆ ಅರ್ಥ ಇಷ್ಟೇ: ಯಾವ ಎನ್‌ಟಿಆರ್ ಅವರ ಸರ್ಕಾರವನ್ನು ಅವರ ಅಳಿಯ ಚಂದ್ರಬಾಬು ನಾಯ್ಡು ಉರುಳಿಸಿ ಮುಖ್ಯಮಂತ್ರಿಯಾಗಿದ್ದರೋ ಈಗ ಅದೇ ಎನ್‌ಟಿಆರ್ ಮಕ್ಕಳು ರಾಜಕೀಯದ ಆಶೆಯಿಂದಾಗಿ ಅವರ ಅಪ್ಪನಿಗೇ ದ್ರೋಹ ಬಗೆದಿದ್ದ ಬಾಬು ಪರ ನಿಲ್ಲುತ್ತಿದ್ದಾರೆ. ಎನ್‌ಟಿಆರ್ ಅವರ ಪುತ್ರಿ ದಗ್ಗುಬಟ್ಟಿ ಪುರಂದೇಶ್ವರಿ ಹೊರತಾಗಿ. ಈಕೆ ಎನ್‌ಟಿಆರ್ ಅವರ ಗಂಡು ಮಕ್ಕಳು ಮತ್ತು ಗಂಡು ಮೊಮ್ಮಕ್ಕಳಂತೆ ನಟಿಯಲ್ಲ. ಬದಲಾಗಿ ಕಾಂಗ್ರೆಸ್ ಪಕ್ಷದ ಸಂಸದೆ ಮತ್ತು ಹಾಲಿ ಮಾನವ ಸಂಪನ್ಮೂಲ ಖಾತೆಯ ರಾಜ್ಯ ಸಚಿವೆ. ಈಕೆ ಮಾತ್ರ ತನ್ನ ಸಹೋದರರಿಗೆ ಚಂದ್ರಬಾಬು ನಾಯ್ಡು ಪರ ನಿಲ್ಲಬೇಡಿ, ಅವನಿಂದ ಮೋಸ ಹೋಗಬೇಡಿ ಎಂದು ಎಚ್ಚರಿಸುತ್ತಿದ್ದಾರೆ. ಆದರೆ ಅವರ್‍ಯಾರೂ ಆಕೆಯ ಮಾತು ಕೇಳುತ್ತಿಲ್ಲ, ಬಿಡಿ.



ಕೃಷ್ಣ




ಮಹೇಶ್ ಬಾಬು

■ ಅರುಣ್.ಜಿ

ರಾಜಶೇಖರ ರೆಡ್ಡಿಯ ನಾಗಾರ್ಜುನ್ ತಂತ್ರ

ಹೀಗೆ ನಾಯ್ಡು ತನ್ನ ಕುಟುಂಬದ ಸೇರು, ಪಾವು, ಚಟಾಕುಗಳಂತಿರುವ ನಟರನ್ನೆಲ್ಲಾ ಸೇರಿಸಿಕೊಂಡು ತನ್ನ ಬಲವೃದ್ಧಿಸಿಕೊಳ್ಳಲು ಭಗೀರಥ ಯತ್ನ ಮಾಡುತ್ತಿದ್ದರೆ ಅತ್ತ ಕಾಂಗ್ರೆಸ್ ರಾಜಶೇಖರ್ ರೆಡ್ಡಿ ಇನ್ನೂ ದೊಡ್ಡ ದೊಡ್ಡ ಸ್ಕೆಚ್ ಹಾಕುತ್ತಿದ್ದಾರೆ.


ಸದ್ಯ ರಾಜಶೇಖರ ರೆಡ್ಡಿಗೆ ದೊಡ್ಡ ಮಟ್ಟದಲ್ಲಿ ಬೆಂಬಲವಾಗಿ ನಿಂತಿರುವವನು ಅಕ್ಕಿನೇನಿ ನಾಗಾರ್ಜುನ್ ಎಂಬ ಮತ್ತೊಬ್ಬ ಸ್ಟಾರ್. ತೆಲುಗು ಚಿತ್ರರಂಗದಲ್ಲಿ ಚಿರಂಜೀವಿಗೆ ಸರಿಸಮನಾಗಿ ನಿಲ್ಲಬಲ್ಲ, ಹೆಚ್ಚೂಕಮ್ಮಿ ಆತನಷ್ಟೇ ಅಭಿಮಾನಿಗಳನ್ನು ಹೊಂದಿರುವ ನಟನೆಂದರೆ ಅದು ನಾಗಾರ್ಜುನ ಮಾತ್ರ. ಹೇಗಾದರೂ ಮಾಡಿ ನಾಗಾರ್ಜುನನನ್ನು ತನ್ನತ್ತ ಒಲಿಸಿಕೊಂಡರೆ ಸದ್ಯಕ್ಕೆ ಚಿರು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಬಹುದು ಎಂಬ ತಂತ್ರ ರೂಪಿಸಿರುವ ರಾಜಶೇಖರ್ ರೆಡ್ಡಿ ತಮ್ಮ ಸರ್ಕಾರದ ಹಲವು ಜಾಹೀರಾತುಗಳಿಗೆ ನಾಗಾರ್ಜುನನನ್ನೇ ಮಾಡೆಲ್ ಮಾಡಿದ್ದಾರೆ. ಈಗಾಗಲೇ ಆಂಧ್ರದ ವಾಹಿನಿಗಳಲ್ಲಿ ನಾಗಾರ್ಜುನ ಕಾಣಿಸಿಕೊಂಡಿರುವ ಜಾಹೀರಾತುಗಳು ರಾರಾಜಿಸುತ್ತಿವೆ. ನಾಗಾರ್ಜುನನಿಗೆ ಬೇಕಾದ ಎಲ್ಲಾ ತಾಜಾ, ಮಸಲತ್ತುಗಳನ್ನು ಮಾಡಿರುವ ರೆಡ್ಡಿ ಆತನನ್ನು ಓಲೈಸಿಕೊಳ್ಳುವಲ್ಲಿ ಯಶಸ್ವಿ ಯಾಗಿದ್ದಾರೆ.




ಚಂದ್ರಬಾಬು ನಾಯ್ಡು

2004ರಲ್ಲಿ ತೆಲುಗು ದೇಶಂ ಪರವಾಗಿ ನಿಂತು ಪ್ರಚಾರ ಮಾಡಿದ್ದ, ಅವರ ಜಾಹೀರಾತು ಗಳಲ್ಲಿ ಮಿಂಚಿದ್ದ ನಾಗಾರ್ಜುನ ಈಗ ಕಾಂಗ್ರೆಸ್ ಪಾಲಾಗಿದ್ದಾನೆ. ಜೊತೆಗೆ ಆಂಧ್ರದ ಅಂದಕಾಲತ್ತಿಲ್ ಸೂಪರ್ ಸ್ಟಾರ್ ಕೃಷ್ಣ ತಾನು ಹಾಗೂ ತನ್ನ ಮಗ ಟಾಲಿವುಡ್‌ನ ಹಾಲಿ ಹಾರ್ಟ್ ಥ್ರಾಬ್ ಮಹೇಶ್ ಬಾಬು ಕಾಂಗ್ರೆಸ್‌ಗೆ ಬೆಂಬಲ ಸೂಚಿಸುವುದಾಗಿ ಘೋಷಿಸಿದ್ದಾನೆ.

ಇಷ್ಟೇ ಸಾಲದೆಂಬಂತೆ ತೆಲುಗಿನ ಖ್ಯಾತ ನಟ ರಾಜಶೇಖರ್ ಮತ್ತು ಆತನ ಪತ್ನಿ ಜೀವಿತಾ, ಜಯಸುಧಾ ಮತ್ತು ಶ್ರೀಹರಿ ಸೇರಿದಂತೆ ಚಿತ್ರರಂಗದ ಹಲವಾರು ಗ್ಲಾಮರಸ್ ನಟನಟಿಯರನ್ನು ಕಾಂಗ್ರೆಸ್‌ಗೆ ಸೆಳೆಯುತ್ತಿರುವ ವೈಎಸ್‌ಆರ್ ಚಿರಂಜೀವಿಯ ತಾರಾಮೌಲ್ಯವನ್ನು ದಮನಗೊಳಿಸಲು ಎಲ್ಲ ರೀತಿಯ ಒಳಸಂಚು ಗಳನ್ನು ರೂಪಿಸುವಲ್ಲಿ ನಿರತರಾಗಿದ್ದಾರೆ. ಒಂದು ಮೂಲದ ಪ್ರಕಾರ ಜನಪ್ರಿಯ ನಟ ಡಾ. ಮೋಹನ್ ಬಾಬು ಅವರ ಮಗ ಸದ್ಯದಲ್ಲೇ ಮುಖ್ಯ ಮಂತ್ರಿ ವೈಎಸ್‌ಆರ್ ಅವರ ಸಹೋದರನ ಪುತ್ರಿಯನ್ನು ಮದುವೆಯಾಗಲಿದ್ದು, ಅವರು ಕೂಡ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರಂತೆ.



ಜೂ. ಎನ್‌ಟಿಆರ್



ಬಾಲಕೃಷ್ಣ

ಇವತ್ತು ಆಂಧ್ರದ ರಾಜಕೀಯ ರಂಗ ಎಷ್ಟರಮಟ್ಟಿಗೆ ಸ್ಟಾರ್‌ಮಯ ಆಗಿದೆ ಎಂಬುದಕ್ಕೆ ಇಲ್ಲಿ ನೀಡಿರುವ ಪಕ್ಷ ಮತ್ತು ಅದರಲ್ಲಿನ ನಟ, ನಟಿಯರ ಪಟ್ಟಿ ನೋಡಿ:

ಪ್ರಜಾ ರಾಜ್ಯಂ: ಚಿರಂಜೀವಿ, ಅವರ ಮಗ ಮತ್ತು ನಟ ಚಿರುತಾ, ಸಹೋದರರಾದ ನಟ ಪವನ್ ಕಲ್ಯಾಣ್ ಮತ್ತು ನಾಗೇಂದ್ರ ಬಾಬು, ಭಾವಮೈದುನ ಹಾಗು ನಿರ್ಮಾಪಕ ಅಲ್ಲು ಅರವಿಂದ್ ಮತ್ತು ಆತನ ಮಗ ನಟ ಅರ್ಜುನ್.

ತೆಲುಗು ದೇಶಂ: ಬಾಲಕೃಷ್ಣ ತಾರಕಾ ರತ್ನ, ಕಲ್ಯಾಣ ರಾಮ ಮತ್ತು ಎನ್‌ಟಿಆರ್ ಅವರ ಇತರೆ ಮಕ್ಕಳು, ಮೊಮ್ಮಕ್ಕಳು, ಅಳಿಯ, ಇತರರು ಮತ್ತು ನಟಿ ರೋಜಾ ಹಾಗು ಶಾರದ, ಕೋಟಾ ಶ್ರೀನಿವಾಸ ರಾವ್, ಹಾಸ್ಯ ನಟ ಬಾಬು ಮೋಹನ್, ಇತರರು.


ಕಾಂಗ್ರೆಸ್: ಸೂಪರ್ ಸ್ಟಾರ್ ಕೃಷ್ಣ ಟಾಲಿವುಡ್ ಹಾರ್ಟ್ ಥ್ರಾಬ್ ಮೋಹನ್ ಬಾಬು, ಅಕ್ಕಿನೇನಿ ನಾಗಾರ್ಜುನ, ರಾಜಶೇಖರ್, ಜೀವಿತಾ, ಜಯಸುಧಾ, ವಿಜಯ್ ಚಂದರ್, ಜಮುನಾ, ನಿರ್ದೇಶಕ ಮತ್ತು ನಿರ್ಮಾಪಕ ದಾಸರಿ ನಾರಾಯಣರಾವ್, ಇತರರು.

ತೆಲ್ಲಿ ತೆಲಂಗಾಣ: ನಟಿ ವಿಜಯ ಶಾಂತಿ ಮತ್ತು ಆಕೆಯ ಸಂಗಡಿಗರು.

ಭಾರತೀಯ ಜನತಾ ಪಕ್ಷ: ನಟ ಕೃಷ್ಣಂ ರಾಜು.

ಸಮಾಜವಾದಿ ಪಕ್ಷ: ಜಯಪ್ರದಾ


ಇದನ್ನೆಲ್ಲ ನೋಡಿದರೆ ಇದು ರಾಜಕೀಯ ಪಕ್ಷಗಳಿಗಿಂತ ಯಾವುದೋ ಸಿನಿಮಾದ ಸ್ಟಾರ್ ಕಾಸ್ಟ್ ನೋಡಿದಂತಾಗುತ್ತದಲ್ಲವೇ?! ■



ಜನಾರ್ದನ ರೆಡ್ಡಿ

ಮೊನ್ನೆ ನಡೆದ ಹಂಪಿ ಉತ್ಸವಕ್ಕೆ ಬಳ್ಳಾರಿಯ ಗಣಿದೊರೆ ಜನಾರ್ಧನ ರೆಡ್ಡಿ ಹಿಂದಿಯ ಖ್ಯಾತ ಕಲಾವಿದರನ್ನು ದುಬ್ಬಟ್ಟು ಹಣಕೊಟ್ಟು ಉತ್ಸವಕ್ಕೆ ಕರೆಸಿದ್ದು ನಿಮಗೆಲ್ಲ ಗೊತ್ತೇ ಇದೆ. ಹಂಪಿ ಉತ್ಸವಕ್ಕೂ ಸೋನು ನಿಗಮ್, ಆಶಾ ಭೋಂಸ್ಲೆ ಕಾರ್ಯಕ್ರಮಕ್ಕೂ ಎತ್ತಣಿಂದೆತ್ತ ಸಂಬಂಧ ಎಂಬುದು ರೆಡ್ಡಿಗೆ ಮಾತ್ರ ಗೊತ್ತು.

ಕನ್ನಡ ಸಂಸ್ಕೃತಿ ಮತ್ತು ವೈಭವವನ್ನು ಪ್ರತಿಬಿಂಬಿಸಬೇಕಾದ ಹಂಪಿ ಉತ್ಸವದಲ್ಲಿ ಭಾಗವಹಿಸಿದ ಕನ್ನಡದ ಕಲಾವಿದರು ಕೇವಲ ಇಬ್ಬರು ಮಾತ್ರ. ಒಬ್ಬರು ಹೊಡಿಬಡಿ ಖ್ಯಾತಿಯ ಸಾಯಿಕುಮಾರ್, ಮತ್ತೊಬ್ಬರು ಹಂಸಲೇಖ. ಇವರಿಬ್ಬರೂ ಮೂಲತಃ ತೆಲುಗಿನವರೆಂಬುದು ಇನ್ನೊಂದು ವಿಶೇಷ. ಅದರಲ್ಲೂ ಬಿಜೆಪಿ ಕಾರ್ಯಕರ್ತ ಸಾಯಿಕುಮಾರ್ ಹಂಪಿ ಉತ್ಸವದಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸಿ, ಚೆನ್ನಾಗಿ ಲಾಭ ಮಾಡಿಕೊಂಡಿದ್ದಾರೆ ಎಂದು ಚಿತ್ರೋದ್ಯಮದವರೇ ಅಪಸ್ವರ ಎತ್ತುತ್ತಿದ್ದಾರೆ. ಇನ್ನೊಂದೆಡೆ ಸಿನಿಮಾ ಸಂಗೀತವನ್ನು ಇತ್ತೀಚೆಗೆ ಮರೆತಿರುವ ಹಂಸಲೇಖ ಈಗ ಇಂತಹ ಕಾರ್ಯಕ್ರಮಗಳಲ್ಲಿ 'ಸುಖ'ವನ್ನು ಕಾಣುತ್ತಿರುವುದು ಕೂಡಾ ಎಲ್ಲರಿಗೂ ಗೊತ್ತಿರುವ ವಿಷಯ. ಇತ್ತೀಚೆಗೆ ಕಿರುತೆರೆಯಲ್ಲೂ ಅದ್ಭುತವಾದ ಕಾರ್ಯಕ್ರಮಗಳು ಜೋರಾಗಿರುತ್ತವೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಹಾಗೆಯೇ ಕ್ಯಾಸೆಟ್ ಬಿಡುಗಡೆ ಸಮಾರಂಭಗಳಲ್ಲೂ ನಡೆಯುವ ಕಾರ್ಯಕ್ರಮಗಳು ಜೋರಾಗಿರುತ್ತವೆ. ಆದರೆ ಸಾಯಿಕುಮಾರ್ ಮತ್ತು ಹಂಸಲೇಖ ಬೇರೆ ಬೇರೆಯಾಗಿ ಹಂಪಿ ಉತ್ಸವದಲ್ಲಿ ನೀಡಿದ ಕಾರ್ಯಕ್ರಮ ಅತ್ಯಂತ ನೀರಸ ಮತ್ತು ಕಳಪೆಯಾಗಿತ್ತೆಂದೇ ಹೇಳಬಹುದು. ಸಾಯಿಕುಮಾರ್‌ನಿಂದ ಯಾರೂ ಏನನ್ನೂ ನಿರೀಕ್ಷಿಸಲು ಸಾಧ್ಯವೇ ಇಲ್ಲ ಬಿಡಿ. ಈತ ಎಷ್ಟಾದರೂ ಬಿಜೆಪಿ ಕಾರ್ಯಕರ್ತ ತಾನೆ. ಆದರೆ ಹಂಸ್ ಯಾಕೆ ಹೀಗಾದರು? ಎಂಬುದೇ ನಮ್ಮ ಪ್ರಶ್ನೆ. ಈ ಮಧ್ಯೆ ಶಂಕರ್ ಶಾನಭೋಗ್ ಎಂಬ ಹಿನ್ನೆಲೆಗಾಯಕ ನೀಡಿದ ಕಾರ್ಯಕ್ರಮವನ್ನು ಹಂಪಿಯ ಜನರು ಆಸ್ವಾಧಿಸಿದರು ಎಂಬುದೇ ಸಮಾಧಾನದ ವಿಷಯ. ■





R B P LANKESH, Kannada Weekly Price Rs. 12/- 26-11-2008 RNI No. KARKAN2005/14648 Regd.No.KA/RNP/BGS/2036/2008-10 Posted at

ಶಿವಣ್ಣನ ಪೋಸ್ಟರ್ ಪ್ಲಾನ್!

'ಕನ್ನಡ ಸಿನಿಮಾಗಳನ್ನು ಉಳಿಸಲು ಇಂಗ್ಲಿಷ್ ಪೋಸ್ಟರ್ ಹಾಕಿ' ಇದು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮೊನ್ನೆ ಕನ್ನಡ ಚಿತ್ರರಂಗಕ್ಕೆ ನೀಡಿದ ಸಲಹೆ!

ಪಿವಿಆರ್ ನಂಥ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಿರುವ ಏರಿಯಾಗಳಲ್ಲಿ ವಾಸಿಸುವ ಜನರಿಗೆ ಕನ್ನಡವೇ ಬರುವುದಿಲ್ಲ ಹೀಗಾಗಿ ನಮ್ಮ ಕನ್ನಡ ಚಿತ್ರಗಳ ವಿವರವನ್ನು ಇಂಗ್ಲಿಷ್‌ನಲ್ಲಿ ನೀಡಬೇಕು. ಆಗ ಕನ್ನಡ ಭಾಷೆ ಗೊತ್ತಿಲ್ಲದವರೂ ಕನ್ನಡ ಚಿತ್ರಗಳನ್ನು ನೋಡಲು ಬರುತ್ತಾರೆ. ಆಗ ನಾವೂ ಗ್ಲೋಬಲ್ ಲೆವೆಲ್‌ನಲ್ಲಿ ಹೆಸರು ಮಾಡಬಹುದು..... ಶಿವರಾಜ್ ಕುಮಾರ್ ಅವರಿಗೆ ಹೀಗೊಂದು ಸಖತ್ ಐಡಿಯಾ ಹೊಳೆದಿದೆಯಂತೆ. ಹೀಗಂತ ಸ್ವತಃ ಅವರೇ ಮೊನ್ನೆ ಪತ್ರಕರ್ತರ ಮುಂದೆ ಹೇಳಿಕೊಂಡರು.



ಇವತ್ತು ಕನ್ನಡ ಚಿತ್ರಗಳನ್ನು ಕನ್ನಡಿಗರೇ ನೋಡದಂಥ ಪರಿಸ್ಥಿತಿಯಿರುವಾಗ ಶಿವಣ್ಣನವರ ಈ ಪ್ಲಾನ್ ಕಾರ್ಯರೂಪಕ್ಕೆ ಬರುತ್ತೋ ಅಥವಾ ಬಂದ ಮೇಲೆ ಯಶಸ್ವಿಯಾಗುತ್ತೋ ಬೇರೆ ಮಾತು. ಆದರೆ ಶಿವಣ್ಣನ ಈ ಮಾತನ್ನು ಅನ್ಯತಾ ಭಾವಿಸಿ ಕನ್ನಡ 'ಓ'ರಾಟಗಾರರು ಬೀದಿಗೆ ಇಳಿದು ಹಳೇ ಟೈರುಗಳಿಗೆ ಕೊಳ್ಳಿ ಇಡದಿದ್ದರೆ ಸಾಕು!

ಭಾಗ್ಯದ ಬಳೆಗಾರನೊಂದಿಗೆ...

ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ 'ಭಾಗ್ಯದ ಬಳೆಗಾರ' ಚಿತ್ರ ಮೊನ್ನೆ ಸೆಟ್ಟೇರಿತು.

ಈ ಚಿತ್ರದ ಶೀರ್ಷಿಕೆ ನೋಡಿದರೇ ಗೊತ್ತಾಗುತ್ತದೆ, ಇದೊಂದು ಮನೆ ಮಂದಿ ನೋಡಬಹುದಾದ ಚಿತ್ರವೆಂದು. ಇಳಿಯರಾಜ ಅವರು ಈ ಚಿತ್ರಕ್ಕೆ ಸಂಗೀತ ನೀಡಲಿದ್ದು ಎರಡು ಹಾಡುಗಳನ್ನು ಸ್ವತಃ ಅವರೇ ಹಾಡಲಿದ್ದಾರಂತೆ. 'ಜನುಮದ ಜೋಡಿ'ಯಲ್ಲಿ ಹಾಡಿದಂತೆ ಒಂದು ಹಾಡನ್ನು ಶಿವರಾಜ್‌ಕುಮಾರೇ ಹಾಡುತ್ತಾರಂತೆ. ಬಹುತೇಕ ಎಲ್ಲಾ ಹಾಡುಗಳು ಜಾನಪದ ಶೈಲಿಯಲ್ಲಿರುತ್ತದೆ ಎನ್ನುತ್ತಾರೆ ನಿರ್ದೇಶಕ ಸಾಯಿಪ್ರಕಾಶ್.

ಮೊನ್ನೆ ಮೊನ್ನೆ ಬಿಡುಗಡೆಯಾದ 'ಮಾದೇಶ' ಸೇರಿದಂತೆ ಶಿವರಾಜ್‌ಕುಮಾರ್ ಹಲವಾರು ಚಿತ್ರಗಳಲ್ಲಿ ಮಚ್ಚು ಮತ್ತು ಲಾಂಗು ಹಿಡಿದು ರಕ್ತದೋಕುಳಿ ಹರಿಸಿದ್ದರು. ಈಗ 'ಪರಮೇಶ ಪಾನ್‌ವಾಲ'ಎಂಬ ಹಾಸ್ಯಮಯ ಚಿತ್ರದಲ್ಲೂ ನಟಿಸಿದ್ದಾರೆ.

ಒಮ್ಮೆ ರೌಡಿ, ಮತ್ತೊಮ್ಮೆ ಹಾಸ್ಯದ ಪಾತ್ರ, ಅನಂತರ ಲವರ್‌ಬಾಯ್, ಕೊನೆಗೊಮ್ಮೆ ಕೌಟುಂಬಿಕ ಚಿತ್ರ... ಹೀಗೆ ಯಾವುದೇ ಇಮೇಜಿಗೆ ಅಂಟಿಕೊಳ್ಳದೇ ವಿಭಿನ್ನ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಶಿವರಾಜ್‌ಕುಮಾರ್ ತನ್ನ ಸಮಕಾಲೀನ ನಟರಿಗಿಂತ ಡಿಫರೆಂಟಾಗಿದ್ದಾರೆ. ಇಂತಹ ರಿಸ್ಕ್ ಅನ್ನು ಬೇರೆ ಯಾವ ನಾಯಕ ನಟ ಕೈಗೆತ್ತಿಕೊಳ್ಳುತ್ತಾರೆ ನೀವೇ ಹೇಳಿ?



'ತವರು' ಖ್ಯಾತಿಯ ನಿರ್ದೇಶಕ ಸಾಯ್ಸು ಪ್ರಕಾಶ್ 'ಲವ-ಕುಶ' ನಂತರ ದಿಢೀರನೆ ನಾಪತ್ತೆಯಾಗಿ ತನ್ನ ತವರೂರ ಕಡೆ ಗುಳೆ ಹೊರಟುಬಿಟ್ಟಿದ್ದರು. ಈಗ 'ಭಾಗ್ಯದ ಬಳೆಗಾರ'ನೊಂದಿಗೆ ಮತ್ತೆ ಗೋಚರಿಸಿಕೊಂಡಿದ್ದಾರೆ.

ಶಿವರಾಜ್‌ಕುಮಾರ್ ಪಾಲಿಗೂ 'ಜೋಗಿ' ಚಿತ್ರದ ನಂತರ ಮಾಡಿದ ಎಲ್ಲಾ ಹೊಡೀ ಬಡಿ ಚಿತ್ರಗಳೂ ಬರ್ಬಾದ್ ಆಗಿರುವುದರಿಂದ ಯಶಸ್ಸಿನ ಭಾಗ್ಯಕ್ಕೋಸ್ಕರ '... ಬಳೆಗಾರ'ನ ಮೊರೆ ಹೋಗಿದ್ದಾರೆ.

'ಲೂಸ್ ಮಾದನನ್ನು ಹೀರೋ ಮಾಡಿ 'ನಂದ ಲವ್ಸ್ ನಂದಿತ' ಚಿತ್ರವನ್ನು ನಿರ್ಮಿಸಿದ್ದ ರಮೇಶ್ ಕಶ್ಯಪ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

'...... ಬಳೆಗಾರ'ನ ಮುಖಾಂತರವಾದರೂ ಸಾಯಿಗೆ ಭಾಗ್ಯ ಒಲಿಯುವಂತಾಗಲಿ!

ಮೊಗೆ ಶ್ರೀನಿವಾಸ ಬಗೆ ಪುರಾಣ!



'ಯಾರೂ ಕನ್ನಡ ಸಿನಿಮಾಗಳನ್ನು ನಿರ್ಮಿಸಬೇಡಿ... ಇಲ್ಲಿನ ನಿರ್ದೇಶ ರನ್ನು ನಂಬಿದರೆ ನೀವು ಎಕ್ಕುಟ್ಟಿಹೋಗ್ತೀರ....' ಇದು 'ಮಂದಾಕಿನಿ' ಚಿತ್ರದ ನಿರ್ಮಾಪಕ ಬಿ.ಕೆ. ಶ್ರೀನಿವಾಸ್ ಉವಾಚ.

ಈ ಮಹಾನುಭಾವ ಈವರೆಗೆ ನಿರ್ಮಿಸಿರುವುದು ಓನ್ಲಿ ಒನ್ ಚಿ 'ಮಂದಾಕಿನಿ' ಮಾತ್ರ. ಆದರೂ ತಾನು ಹತ್ತಾರು ಸಿನಿಮಾಗಳನ್ನು ನಿರ್ಮಿಸಿರು ಅನುಭವಿಯಂತೆ ಸಿಕ್ಕಸಿಕ್ಕವರಿಗೆಲ್ಲಾ 'ಸಿನಿಮಾ ನಿರ್ಮಿಸಬೇಡಿ.' ಅಂತ ಬಿ ಉಪದೇಶ ನೀಡುತ್ತಿದ್ದಾರೆ.

ಶ್ರೀನಿವಾಸ್ ನಿರ್ಮಿಸಿದ 'ಮಂದಾಕಿನಿ' ಸೋಲಲು ಕಾರಣ ಆತ ಸ್ವಯಂಕೃತಪರಾಧವಲ್ಲದೇ ಮತ್ತೇನೂ ಅಲ್ಲ. ಈ ಮನುಷ್ಯ ಸಿನಿಮ ನಿರ್ಮಿಸಿದ್ದಕ್ಕಿಂತ ಪ್ರಚಾರಕ್ಕಾಗಿ ಹಲ್ಲುಗಿಂಜಿದ್ದೇ ಹೆಚ್ಚು. ಹಾಗೊಂದು ವೇ ಶ್ರೀನಿವಾಸ್ ಹೇಳಿದಂತೆ ಕನ್ನಡ ಸಿನಿಮಾ ನಿರ್ಮಿಸಿದವರೆಲ್ಲ ಪಾಪ ಆಗೋದಾದರೆ, ಇಲ್ಲಿನ ನಿರ್ದೇಶಕರೆಲ್ಲಾ ನಂಬಿಕೆದ್ರೋಹಿಗಳಾಗಿದ್ದರೆ, ವರ್ಷ 'ತಾಜ್ ಮಹಲ್'ನಂಥ ಹಿಟ್ ಚಿತ್ರ ಯಾಕೆ ಬರುತ್ತಿತ್ತು? ಇನ ಶಶಾಂಕ್ ನಿರ್ದೇಶನದ ಸದಭಿರುಚಿಯ ಚಿತ್ರ 'ಮೊಗ್ಗಿನ ಮನಸು' ಯಾ ನೂರುದಿನ ಪೂರೈಸುತ್ತಿತ್ತು?

ಚಿತ್ರರಂಗವೂ ಎಂದಿನಂತೆಯೇ ಇದೆ, ಇಲ್ಲಿನ ನಿರ್ದೇಶಕರೂ ಎಂದಿನಂತೆಯೆ ಇದ್ದಾರೆ. ಓರ್ವ ನಿರ್ಮಾಪಕನಿಗೆ ಬೇಕಿರುವುದು ಬಳಸಿಕೊಳ್ಳುವ ಜಾಣ ಮತ್ತು ಆಯ್ಕೆಯಲ್ಲಿನ ಪ್ರಾಮಾಣಿಕತೆ ಮತ್ತು ಶ್ರದ್ಧೆ. ಅದನ್ನು ಬಿಟ್ಟು ತಿನ್ನಬಾರದ್ದ ತಿಂದು ಹೊಟ್ಟೆನೋವು ಬಂದವನಂತೆ ಮುಲುಕುತ್ತಿರುವ ಶ್ರೀನಿವಾಸ ಸಂಕಟಕ್ಕೆ ಯಾರು ಹೊಣೆ?

ಎಲುಬಿಲ್ಲದ ನಾಲಿಗೆ!


ಈ ಶ್ರೀನಿವಾಸ್ ಎಂಥಾ ಮನುಷ್ಯನೆಂದರೆ, ಈತ ನಿರ್ಮಿಸಿ 'ಮಂದಾಕಿನಿ' ಇನ್ನೂ ಬಿಡುಗಡೆಯೇ ಆಗಿರಲಿಲ್ಲ, ಅಷ್ಟರಲ್ಲಾಗಲೇ ಮೂರ ಜನ ಪತ್ರಕರ್ತರೂ ಸೇರಿದಂತೆ ಅರ್ಧ ಡಜನ್ ನಿರ್ದೇಶಕರಿಗೆ 'ತಿರುಪ ತಿಮ್ಮಪ್ಪನಾಣೆಗೂ ನಿಮ್ಮ ಸಿನಿಮಾ ನಾನೇ ನಿರ್ಮಿಸುತ್ತೇನೆ' ಎಂದು ಭೋಂಗ ಬಿಟ್ಟು ಆಮಿಷವೊಡ್ಡಿದ್ದ. ನಂತರ ಪತ್ರಿಕಾಗೋಷ್ಠಿ ಮಾಡಿ ಅವರಿವರ ಮೇ ಗೂಟ ಕೂರಿಸಿ 'ಇದು ನನ್ನ ಮೊದಲ ಮತ್ತು ಕೊನೆಯ ಚಿತ್ರ' ಅಂತ ಖಾತೆ ಕ್ಲೋಸ್ ಮಾಡಿ ನಂಬಿದ್ದವರ ಕಿವಿ ಮೇಲೆ ಕಾಲಿ ಫ್ಲವರ್ ಇಟ್ಟಿದ

ಇದೆಲ್ಲಾ ಶ್ರೀನಿವಾಸ್ ಬಿಟ್ಟಿ ಪಬ್ಲಿಸಿಟಿಗಾಗಿ ಮಾಡಿದ ಗಿಮಿಕ್ಕಲ್ಲದ ಮತ್ತೇನೂ ಅಲ್ಲ. ಕಾಳಜಿಯಿಟ್ಟು ಸಿನಿಮಾ ಮಾಡುವುದನ್ನು ಬಿಟ ಪ್ರಚಾರಕ್ಕೋಸ್ಕರ, 'ಮತ್ತೊಂದಕ್ಕೋಸ್ಕರ' ಸಿನಿಮಾ ಮಾಡುವ ಖಯಾಲಿಯ ಯಾವ ನಿರ್ಮಾಪಕ ತಾನೆ ಇಲ್ಲಿ ಉದ್ಧಾರವಾಗಲು ಸಾಧ್ಯ?



'ಬಿಸಿಲೆ'
ದಿಗಂತ್,
ಜೆನ್ನಿಫರ್
ಕೊತ್ವಾಲ್

ಕೋಮುವಾದಕ್ಕೂ, ಕೋಮುಸೌಹಾರ್ದಕ್ಕೂ ವ್ಯತ್ಯಾಸವಿಲ್ಲವೇ?



ಚಿತ್ರರಂಗದಲ್ಲಿ ಬಹಳಷ್ಟು ವರ್ಷಗಳಿಂದ ಚಾಲಕನಾಗಿ ಕಾರ್ಯನಿರ್ವಹಿಸುತ್ತ ಬಂದಿರುವ ಡ್ರೈವರ್ ಚಂದ್ರಪ್ಪ ಎಂಬುವವರ ಮಗ ವರ್ಷ ಯಾನೆ ರಾಘವೇಂದ್ರ ಈಗ ತನ್ನ ಗೆಳೆಯರೊಂದಿಗೆ ಸೇರಿ 'ಮುದ್ದು ಮನಸು' ಎಂಬ ಚಿತ್ರ ನಿರ್ಮಿಸುತ್ತಿದ್ದಾನೆ. ಮಾತ್ರವಲ್ಲ ಆ ಚಿತ್ರಕ್ಕೆ ತಾನೇ ನಾಯಕನೂ ಆಗಿದ್ದಾನೆ. ಚಿತ್ರರಂಗದ ಹಳೇ ಸ್ಟಾರುಗಳ ಮಕ್ಕಳುಗಳಿಗೆ ಇಲ್ಲಿ ಅವಕಾಶ ಸಿಗದೆ ಒದ್ದಾಡುತ್ತಿರುವಾಗ ಡ್ರೈವರ್ ಒಬ್ಬರ ಮಗನಾದ ಈತ ಸಿನಿಮಾ ನಾಯಕನಾಗುತ್ತಿರುವುದು ಒಳ್ಳೆಯ ಬೆಳವಣಿಗೆಯೇ. ಇದಕ್ಕೆ ನಮ್ಮ ಕಡೆಯಿಂದಲೂ ಸಣ್ಣದೊಂದು ಕಾಂಪ್ಲಿಮೆಂಟ್ಸು!

ಆದರೆ ವಿಚಾರ ಇಷ್ಟೇ ಅಲ್ಲ ಸಿನಿಮಾದಂತಹ ಪ್ರಬಲ ಮಾಧ್ಯಮಕ್ಕೆ ಬರುವ ಈ ಹುಡುಗರು ತಿಳಿವಳಿಕೆಯಲ್ಲಿ ಅದೆಷ್ಟು ವೀಕ್ ಇರುತ್ತಾರೆ ಎಂಬುದಕ್ಕೆ ಸಣ್ಣ ಉದಾಹರಣೆ ಇಲ್ಲಿದೆ:

ಈ ಸಿನಿಮಾ 'ದತ್ತಪೀಠ'ದಲ್ಲಿ ನಡೆಯುವ ಕತೆಯನ್ನು ಒಳಗೊಂಡಿದೆ ಎಂದು ರಾಘವೇಂದ್ರ ಪತ್ರಿಕಾಗೋಷ್ಠಿಯಲ್ಲಿ ಹೇಳಿದ. ಇದ ಕೇಳಿ ಹಿರಿಯ ಪತ್ರಕರ್ತರೊಬ್ಬರು "ಈಗ ನಡೆಯುತ್ತಿರುವ ಹಿಂದೂ ಕೋಮುವಾದವನ್ನು ಬಳಸಿಕೊಂಡು ಈ ಚಿತ್ರದ ಮೂ ಕೋಮು ಸೌಹಾರ್ದತೆಯನ್ನು ಸಾರಲು ಹೊರಟಿದ್ದೀರಾ" ಎಂದು ಪ್ರಶ್ನಿಸಿದರು. ತಕ್ಷಣ ಈ ಹುಡುಗ ಏನನ್ನಬೇಕು? "ಛೆ ಛೆ ಛೇ... ಖಂಡಿತಾ ಇಲ್ಲಾ ಸಾರ್. ಸಿನಿಮಾದಲ್ಲಿ ಹಾಗೆಲ್ಲಾ ಕೋಮು ಸೌಹಾರ್ದ ತೋರಿಸೋಕ್ಕಾಗುತ್ತಾ?"ಎಂದುಬಿಡೋದೇ! ಇದನ್ನು ಕೇಳಿ ಪತ್ರಿಕಾಗೋಷ್ಠಿಯಲ್ಲಿದ್ದವರೆಲ್ಲಾ ಒಂದುಕ್ಷಣ ಅವಾಕ್ಕಾಗಿ ಕುಳಿತುಬಿಟ್ಟರು.

ಈ ಹುಡುಗ ಉದ್ದೇಶಪೂರ್ವಕವಾಗಿ ಈ ಮಾತನ್ನಾಡಲಿಲ್ಲವಾದರೂ, ಅಸಲು ಆತನಿಗೆ ಕೋಮುವಾದಕ್ಕೂ, ಕೋಮುಸೌಹಾರ್ದಕ್ಕೂ ಇರುವ ವ್ಯತ್ಯಾಸವೇ ಗೊತ್ತಿರಲಿಲ್ಲ ಅನ್ನೋದೇ ದುರಂತ!

ಬರಗೂರರಿಗೆ ಬರೆಸುವ ಜವಾಬ್ದಾರಿ!



ಕನ್ನಡ ಚಿತ್ರರಂಗದ ಸುವರ್ಣ ಮಹೋತ್ಸವದ ಅಂಗವಾಗಿ ಬರಗೂರು ರಾಮಚಂದ್ರಪ್ಪರವರ ನೇತೃತ್ವದ ಸಂಪಾದಕ ಮಂಡಳಿಯನ್ನು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲ ರಚಿಸಿದ್ದಾರೆ.

ಮಾರ್ಚ್ 3ರಂದು ಚಲನಚಿತ್ರ ವಾಣಿಜ್ಯ ಮಂಡಳಿಯು ಚಿತ್ರರಂಗದ ಸುವರ್ಣ ಮಹೋತ್ಸವವ ಆಚರಿಸುವ ಸಂದರ್ಭದಲ್ಲಿ ಕನಿಷ್ಠವೆಂದರೂ ಐವತ್ತು ಪುಸ್ತಕಗಳನ್ನು ಪ್ರಕಟಿಸುವ ಜವಾಬ್ದಾರಿಯ ಬರಗೂರರ ಹೆಗಲಿಗೆ ವರ್ಗಾಯಿಸಿದ್ದಾರೆ. ಅದಕ್ಕಾಗಿ ಬರಗೂರು ಒಂದು ಸೂತ್ರವನ್ನು ಹಾಕಿಕೊಂಡಿದ್ದಾ ಅದೇನೆಂದರೆ ಚಿತ್ರರಂಗಕ್ಕೆ ದುಡಿದು ಈಗ ನಮ್ಮ ನಡುವೆ ಇಲ್ಲದ ನಾಯಕ ನಾಯಕಿ ಮತ್ತು ತಂತ್ರಜ್ಞರ ಬ ಮಾತ್ರ ಪುಸ್ತಕ ಬರೆಯಬೇಕೆಂದು ನಿರ್ಧರಿಸಿದ್ದಾರೆ. ಆ ಮೂಲಕ ಇನ್ನೂ ಜೀವಂತವಾಗಿರುವ ವ್ಯಕ್ತಿಗಳ ಬ ಬರೆಯುವ ಮುಜುಗರದಿಂದ ಬರಗೂರು ಉಪಾಯದಿಂದ ಪಾರಾಗಿದ್ದಾರೆ.

ಅದೇನೆ ಇರಲಿ, ಸುವರ್ಣ ಮಹೋತ್ಸವಕ್ಕಾಗಿ ಕೋಟ್ಯಂತರ ರೂ.ಗಳನ್ನು ವೆಚ್ಚ ಮಾಡಲು ಹೊರಟಿರು ಸರ್ಕಾರ ಮತ್ತು ಚೇಂಬರ್ ಪುಸ್ತಕ ಪ್ರಕಟಿಸುವ ಕೆಲಸಕ್ಕೆ ಕೈ ಹಾಕಿರುವುದು ಮತ್ತು ಆ ಜವಾಬ್ದಾರಿಯ ಬರಗೂರರಿಗೆ ನೀಡಿರುವುದು ಅಭಿನಂದನೀಯ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44